Request to cover up all questions put down for the day.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಅಧ್ಯಕ್ಷರೇ, ಪ್ರಶ್ನೆಗಳ ವಿಷಯದಲ್ಲಿ ಒಂದು ಸೂಚನೆ ಮಾಡಬೇಕೆಂದು ಬಯಸುತ್ತೇನೆ. ಈ ದಿವಸ ಪ್ರಿಂಟ್ ಆಗಿರತಕ್ಕ ಪ್ರಶ್ನೋತ್ತರಗಳಲ್ಲಿ 10 ಪ್ರಶ್ನೆಗಳು ಉಳಿದಿವೆ. ಮುಂದೆ ಈ ಪ್ರಶ್ನೋತ್ತರಗಳೆಲ್ಲಾ ಆಯಾಯಾ ದಿನವೇ ಮುಗಿಯುವಂತೆ ಕಾಲ ಅಳವಡಿಸಿಕೊಳ್ಳಬೇಕೆಂದು ನನ್ನ ಸೂಚನೆ.

Sri K. HANUMANTHAIYA (Leader of the House).—It is in the hands of the House.

Mr. SPEAKER.—It depends upon the members themselves.

Sri Mulka GOVINDA REDDY.—It is in the hands of the Chair also. If the Chair fixes some time limit for supplementaries to each question it is possible to cover up all questions.

Mr. SPEAKER.—I think we did some satisfactory work to-day.

Janab J. MOHAMED IMAM (Jagalur).—I must admit that satisfactory work was done. Some questions included in the agenda for the day could not be taken up and hence they will lapse. I would suggest to the Chair to exercise its power and the members also will try to exercise their responsibility. Suppose twenty questions are put down for a day ; ordinarily three minutes may be given for each. The Chair may exercise its power and the members will be very glad and very willing to obey the ruling of the Chair on any matter. Whenever the Chair feels that a certain question should be closed it should be our duty to obey.

Mr. SPEAKER.—The nature of the question must be taken into consideration. It also depends upon the members themselves.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅಧ್ಯಕ್ಷರೇ, ನಿನ್ನೆ ನಾನು ಕಳುಹಿಸಿದ ಒಂದು ರೆಪ್ರಸೆಂಟೇಷನ್ ಇದೆ. ಅದೇನೆಂದರೆ ಒಂದು ಸೀಟಿನ ವಿಚಾರದಲ್ಲಿ ಅಲಾಟ್ ಮಾಡುವುದಕ್ಕೆ ಸಂಬಂಧಿಸಿದಂತೆ...........

Mr. SPEAKER.—I shall come to that.

Panel of Chairmen.

Mr. SPEAKER.—Under Rule 6 of the Rules of Procedure and Conduct of Business in the Mysore Legislative Assembly, the following Members will form the Panel of Chairmen :—

1. Sri M. V. Rama Rao,
2. ,, M. Muddiah,
3. Sm. Lakshmidevi Ramanna,
4. and Sri S. Gopala Gowda.

Hours of Sittings.

Janab J. MOHAMED IMAM (Jagalur).—This is the time to make representations. If the Chair permits I would like to make a representation to the Leader of the House and to the Speaker.

Mr. SPEAKER.—It depends upon the nature of the representation.

Janab J. MOHAMED IMAM.—One is, I would like to submit that the hours of commencement and close of the session, if all the members agree, may be changed from 12 to 5 to 1 to 6. It was being done so before. If it is convenient to the Government and to the Chair and if all the members agree, I suggest that from tomorrow onwards sessions may be held from 1 to 6 with half an hour's interval in the middle. Secondly, on Saturdays the session may kindly be held in the mornings from 8-30 to 11-30 A.M. or 12 NOON.

Mr. SPEAKER.—I would like to know the Government's view.

Sri K. HANUMANTHAIYA (Leader of the House).—I would like to agree to any suggestion made by my Hon'ble friend with this exception that so far as we are concerned we have made a rule that we do not work after 5 o'clock.

Allotment of Seat to a Member.

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಮೊದಲನೆಯ ದಿವಸ ಯಾವ ಜಾಗದಲ್ಲಿ ಕುಳಿತುಕೊಂಡಿದ್ದೆನೋ ಅದೇ ಜಾಗ ಇವತ್ತು ನನಗೆ ಇರಬೇಕಾಗಿತ್ತು. ಅದನ್ನು ಬಿಟ್ಟು ಅಲ್ಲಿ ಬೇರೆಯವರು ಕುಳಿತುಕೊಳ್ಳಬೇಕಾಗಿದ್ದರೆ ಅವರು

ಹಿಂದಿನ ದಿನವೇ ಗೊತ್ತು ಮಾಡಿಕೊಳ್ಳಬೇಕಾಗಿತ್ತು. ನಾನು ಮೊದಲನೆ ದಿನ ಕುಳಿತುಕೊಂಡಿದ್ದ ಜಾಗಕ್ಕೆ ನನ್ನ ಹಕ್ಕು ಇದೆಯೇ ಹೊರತು ಇನ್ನೊಬ್ಬರಿಗೂ ಆ ಹಕ್ಕು ಬರಲಾರದು. ಆದ್ದರಿಂದ ಅದನ್ನು ತಾವು ಸರ್ಕಾರದ ನಾಯಕರ ಅಭಿಪ್ರಾಯವನ್ನು ಕೇಳಿ ನನ್ನ ಸೀಟನ್ನು ನನಗೆ ಬಿಡಿಸಿಕೊಡಬೇಕು.

Mr. SPEAKER.—I was about to say at the very outset that 19 members of this Assembly had sent a requisition asking me to recognise them as an opposition party under the name "United People's Front". I think the strength of this party is considerable and therefore I must consider their request. I recognise this Party as the Opposition Party. They have also suggested Janab J. Mohamed Imam to be their leader and have asked me to allot a separate block or seats for them. That also has been done from to-day.

ಶ್ರೀ ಎಂ. ಶಂಕರಲಿಂಗೇಗೌಡರು.—ನನ್ನ ಅರಿಕೆ ಅದಲ್ಲ. ತಾವೇನೋ ವಿರೋಧಪಕ್ಷದವರು 19 ಜನ ಎಂದು ಹೇಳಿದಿರಿ. ಕೆ. ಎಂ. ಪಿ. ಪಾರ್ಟಿಯವರು 8 ಜನ ಮಾತ್ರ ಬಂದಿರುವಾಗ 19 ಜನರ ವಿರೋಧಪಕ್ಷವೆಲ್ಲಿಂದ ಬಂತು?

Mr. SPEAKER.—That does not arise.

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಕುಳಿತುಕೊಳ್ಳುತ್ತೇನೆ. ಆದರೆ ನನ್ನ ಸೀಟ್ ಎಲ್ಲಿ? ಎಲ್ಲಿ ಕುಳಿತುಕೊಳ್ಳುವುದು?

ಅಧ್ಯಕ್ಷರು.—ಎಲ್ಲಿ ಕುಳಿತುಕೊಂಡಿದ್ದೀರೋ ಅಲ್ಲೇ.

ಶ್ರೀ ಎಂ. ಶಂಕರಲಿಂಗೇಗೌಡರು.—ಹಾಗಾದರೆ ಆದರಂತೆ ಹೆಸರು ಹಾಕಿಸಿಬಿಡಿ.

Mr. SPEAKER.—That will be considered. After the 19 seats are allotted to them the remaining seats will be arranged.

Sri A. BHEEMAPPA NAIK (Molakalmuru).—On a point of order, Sir. I appeal to the Chair to take proper action against such a member who in spite of the Speaker's ruling persists in standing and requesting. When the Speaker gives a decision, it is irregular for any member to do so. I request that the Chair should take proper action against the member.

Sri B. T. KEMPARAJ.—I second it, Sir.

ಶ್ರೀ ಕೆ. ಹನುಮಂತಯ್ಯನವರು (ಸಭಾನಾಯಕರು).—ಸ್ವಾಮಿ, ಮಾನ್ಯ ಸದಸ್ಯರು ಸಭಾನಾಯಕರನ್ನು ಒಂದು ಪ್ರಶ್ನೆ ಕೇಳಿದರು. ಅವರ ಗಮನಕ್ಕೆ ಒಂದು ವಿಷಯ ತರುತ್ತೇನೆ. ಅವರು ಎಲ್ಲಿ ಕುಳಿತುಕೊಂಡರೂ ಕೂಡ ಅವರ ಭಾಷಣವನ್ನು ನಾವು ಬಹಳ ಗಮನವಿಟ್ಟು ಕೇಳುತ್ತೇವೆ. ಅವರು ಅಂಥ ವ್ಯಕ್ತಿಗಳು! ಆದ್ದರಿಂದ ಅವರು ಸ್ಥಳದ ಪ್ರಾಮುಖ್ಯತೆ ನೋಡದೆ, ಅವರು ಈಗ ಕುಳಿತಿರುವ ಸ್ಥಳದಲ್ಲೇ ಇರಬಹುದು. ಅದನ್ನೇ ನಾವು ಅವರಿಗೆ ಖಾಯಂ ಮಾಡಿಕೊಡೋಣವೆಂದು ನನ್ನ ಸೂಚನೆ.

Sri L. SIDDAPPA (Channagiri).—Regarding that, I would like to invite the attention of the Hon'ble Leader of the House to Rule 11.

Sri K. HANUMANTHAIYA.—The member—Sri Shankara Linge Gowda—merely made an appeal to the Chair. He did not disobey the Chair.

Hours of Sittings.

Janab J. MOHAMED IMAM (Jagalur).—May I know the final decision of the Chair regarding the time of sittings?

Sri K. HANUMANTHAIYA.—As I said Sir, we would be causing a great deal of inconvenience to the whole Government machinery if we work after 5 o'clock. Except for that I am prepared to accept any other suggestion that the Hon'ble Member may make.

Mr. SPEAKER.—On Saturdays?

Sri K. HANUMANTHAIYA.—I agree for morning sessions.

Mr. SPEAKER.—So, we will sit from 12 NOON to 5 P.M. daily and on Saturdays from 8-30 A.M. to 12-30 P.M. or 8 A.M. to 12 NOON as the Leader of the House may suggest.

Sri K. HANUMANTHAIYA.—8-30 A.M. to 12-30 P.M. may be agreed to.

Mr. SPEAKER.—Yes.

Request to avoid the reading of Printed Answers to Questions.

*SRI M. LINGANNA (Nanjangud).—Sir, I want to submit one request so far as questions and answers are concerned. Here the questions and answers are printed. It has become the practice of the members of the Treasury Bench to read the printed answer. I think it is not necessary though it is a parliamentary practice. In the Parliament they read answers because members are not supplied with printed answers. Here answers are printed and supplied and it is not necessary to read them. Therefore, we can straightaway proceed to put supplementary questions so that the time of the House may be saved, so far as questions are concerned. I request the Leader of the House kindly to approve my suggestion.

*SRI K. HANUMANTHAIYA (Leader of the House).—I am afraid, I cannot accept the suggestion made for one reason that both questions and answers have got to be read on the floor of the House. In order to save time, the question is not read and also because the person who has put the question and for whom the information is required, knows his question. Therefore we thought it would be a repetition. So far as the answer is concerned, it should be read and it is the practice all over the world and let us keep to it, Sir.

SRI A. BHEEMAPPA NAIK (Molakalmuru).—Then, is it necessary to print the answers? We can avoid printing answers and thereby save some money!

MR. SPEAKER.—It is provided in the rules.

SRI A. BHEEMAPPA NAIK.—Is it not the practice in the Parliament that answers are not printed but they are only read?

SRI K. HANUMANTHAIYA.—No, they would be printed.

SRI A. BHEEMAPPA NAIK.—After the answers are given, they are printed, not when they are answered on the floor of the House. Am I correct, Sir?

MR. SPEAKER.—Their rules are different from ours.

SRI A. BHEEMAPPA NAIK.—In that case, then, in one hour can we not answer more number of questions by avoiding the reading of answers? I request the Leader of the House to consider that aspect and save some time for us.

SRI K. HANUMANTHAIYA.—We shall examine the question, Sir.

MOTIONS FOR ADJOURNMENT.

Constitution of Admission Committees to Engineering and Medical Schools and Colleges.

MR. SPEAKER.—Two notices of motion for adjournment of the business of the Assembly were received on the 18th. I informed the House on that day that they would be considered to-day.

The first motion is in the names of Sri Mulka Govinda Reddy, Sri B. Hutche Gowda and Sri B. V. Narayana Reddy. It is as follows :—

> "That the business of this House do stand adjourned to raise a discussion on a matter of definite urgent public importance and of recent occurrence, *viz.*, the constitution of the admission committees to the Engineering and Medical Colleges, Medical School and Engineering School by the Government in their Order dated 12th June 1952."

As the Hon'ble Members know, an adjournment motion is intended to raise a discussion on a matter which could not be otherwise discussed under the ordinary procedure of the House and will result in interrupting the appointed business of the House. In order that such interruption may be only in exceptional circumstances and for very special reasons several restrictions have been imposed by the rules. It is also the duty of the Speaker to examine if the purpose of the adjournment motion cannot be secured without upsetting the arranged list of business. For the purposes of the present motion it is enough to state that a uniform and

long series of rulings in the House of Commons and in the Parliament of India and in our own Legislature in the past have laid down that where an ordinary Parliamentary opportunity will shortly occur to discuss the subject matter of an adjournment motion, then permission of the Speaker to the adjournment motion should be refused. To take specific cases, where the matter could be raised on the estimates or on the voting of demands or where the matter could be raised by moving an amendment to the Address in answer to the King's speech, adjournment motions have been disallowed.

I consider that it is only in very exceptional circumstances and where no ordinary parliamentary opportunity is available that the appointed order of business should be upset and I therefore disallow the motion.

Restriction and reduction in fresh admissions to Engineering and Medical Colleges and Technical Institutions.

Mr. SPEAKER.—The second motion is tabled by Sri B. Hutche Gowda and Sri Mulka Govinda Reddy. It is as follows :—

> "That the business of this House do stand adjourned to raise a discussion on a matter of definite urgent public importance and of recent occurrence, namely, the restriction and reduction in the number of fresh admissions of students to the Engineering and Medical Colleges and other Technical Institutions."

For the same reasons for which I disallowed the first motion, I also disallow this adjournment motion.

Janab J. MOHAMED IMAM (Jagalur).—While accepting the ruling of the Chair, I have only one suggestion. In all such cases, before the Chair gives the ruling, the Chair may be pleased to consult the House as to how the subject matter is urgent. That was the usual practice. Thereafter, the Chair may give its ruling. Nothing prevents the Chair from giving a ruling . . . . . .

Mr. SPEAKER.—I have made myself very clear. I admit that the subject matter of the adjournment motion is definite and important. My own doubt is as regards the urgency.

ADDRESS OF HIS HIGHNESS THE MAHARAJA.

Members of the Mysore Legislative Council and the Mysore Legislative Assembly,

When I addressed the Legislative Assembly on 20th March 1952, I said that it would be the last occasion on which I would be addressing that House. Its dissolution marks the close of a chapter in the history of this State and of India. The Constitution framed by the people of India, through a Constituent Assembly, brought into being the Sovereign Democratic Republic, which is now in full working order. General Elections were held all over India and in Mysore in accordance with the provisions of the Constitution. The magnitude and importance of the Elections attracted world-wide interest and attention. The peaceful and orderly way in which the elections went off earned the admiration of lovers of democracy all over the world. Their well-merited approbation is not confined to the vast electorate alone but also extends to the gigantic number of officials who bore the responsibility of conducting the elections. Truly India has made a success of Democracy.

The two Houses of Legislature, which I am meeting to-day, are the first to come into being under the Constitution. A special responsibility therefore rests on your shoulders to make the Constitution function in its true spirit. You set the standards for the succeeding Legislatures and the manner of your deliberations and conduct of business will go to make the precedents and the unwritten law in this sphere. It behoves you therefore to act in an exemplary spirit of patriotism, and show a proper regard to constitutional

(H. H. THE MAHARAJA.)

propriety. I am confident that the relationship among the individual members of the Legislature, and the parties in the Legislature will be governed by the fine qualities of self-restraint, harmony, goodwill and mutual understanding.

My Government have assumed office under very difficult circumstances. They are now faced with a big budget deficit. Acute scarcity conditions in the north-eastern portions of the State which are causing anxiety to my Government on account of the hardships and privations suffered by the people and cattle of the area, are threatening to make the big deficit bigger. Government have to balance the budget and at the same time provide funds for the relief of the people in these tracts. Economy in expenditure, wherever possible, has to be relentlessly effected. I must say therefore that my Government look to you for a sympathetic understanding and appreciation of these difficulties, born of circumstances beyond their control.

My Government initiated a new food policy immediately after assumption of office by the present Ministry. This new policy, I am happy to state, has proved to be the forerunner of a reorientation of food policies in other States. The removal of restrictions on the movement of food-grains outside the statutorily rationed areas has brought immense relief and satisfaction to the people of the State. It is hoped that free movement and increased production of food-grains will inevitably bring down prices. Whether there should be a step forward towards complete decontrol is engaging the attention of my Government. A removal of all controls is fraught with the possibility of richer people buying up and storing available stocks in disproportionately large quantities and thus creating scarcity conditions. This may lead again to short supply, higher prices and consequent hardship to people. It may even necessitate a re-imposition of controls as it happened four years ago. It is this factor which makes those who are responsible for administration rather apprehensive about an abrogation of all controls. It would be more prudent to adopt a cautious policy in the process of reaching a state of complete decontrol.

In my last address, I had referred to the failure of rains in some parts of the State. Distress conditions still continue in certain parts of the State particularly in Kolar, Tumkur and Chitaldrug Districts. My Government have been watching the situation closely. Prompt steps were and are being taken to afford relief to the people. Measures to alleviate distress have already been taken. Arrangements have been made to start a large number of distress relief works to provide employment to the people. Action is being taken to supply fodder at subsidised rates and free of cost to a limited extent. Orders have been issued to sanction seasonal remissions on a liberal scale. The collection of the non-remittable portion of the land revenue assessment has been postponed. These measures have considerably relieved the hardship and suffering in these areas. There have been good showers during the last month. Let us hope that Providence will bless us with better conditions this year.

My Government consider that the educational system requires reformation. Its defects have to be remedied. The student who acquires knowledge should also know how to work. Work makes him a better and a more useful citizen. I am sure this very important and urgent problem, which comes before you for discussion will receive your earnest consideration and that your suggestions will help my Government to formulate a reformed system of education.

My Government are also considering the advisability of making better provision for the management of State-owned industries. They have to be run on business lines. It is imperative that they should be freed as far as possible from official routine and other delaying and defective methods; quick action, drive and initiative are necessary to make these industries work more efficiently and profitably.

My Government propose to place the following Bills for your consideration at this Session :—

1. The Mysore Kolar Gold Fields Municipal Bill.
2. The Mysore Silkworm Seed (Control of Distribution) Bill.
3. The Mysore Places of Public Resort Bill.
4. The Mysore Maternity Benefit (Amendment) Bill.
5. The Mysore Agricultural Produce Markets (Amendment) Bill.
6. The Mysore Restriction of Habitual Offenders Bill.
7. The Mysore Prohibition of Smoking in Show Houses and Public Halls Bill.
8. The Mysore University (Amendment) Bill.
9. The Mysore Ministers' Salaries and Allowances Bill.
10. The Mysore Legislature (Salaries) Bill.
11. The Mysore Court Fees (Amendment) Bill.
12. The Mysore Drugs Control (Amendment) Bill.
13. The Mysore High Court (Amendment) Bill.
14. The Mysore Village Panchayets and District Boards (Amendment) Bill.
15. The Mysore Town Areas Bill.

Let me say in conclusion that you are privileged to be the few chosen representatives of the State. The onerous responsibility of making the State more and more progressive rests on you. I am confident that you will discharge that responsibility with wisdom, ability and integrity.

Report by the Speaker to the Assembly of His Highness the Maharaja's Address.

MR. SPEAKER.—As required by the Rules of Procedure and Conduct of Business, I report that His Highness the Maharaja was pleased to address the Members of the Legislative Assembly and the Legislative Council, assembled together yesterday and I place a copy of the Address on the Table of the House.

Laying of Ordinance on the Table.

*SRI A. G. RAMACHANDRA RAO (Minister for Law and Education).—Sir, I beg to lay on the Table of the House, the Mysore University (Amendment) Ordinance, 1952 (Mysore Ordinance No. III of 1952), promulgated by His Highness the Maharaja in pursuance of clause (1) of Article 213 of the Constitution as required by clause (2) of the said article.

Point of order re. presentation of Budget for 1952-53 on 20th itself.

JANAB J. MOHAMED IMAM (Jagalur).—I rise to a point of order. In the original programme that was supplied to us, it is said that His Highness the Maharaja has fixed 20th as the date on which the Budget will be presented to this House. Under rule 19, the financial statement shall be presented to the Assembly on such day as His Highness the Maharaja has directed. It is imperative. Accordingly, in the original programme it has been stated that 20th was allotted as the date for the presentation of the Budget. So, according to it, the financial statement ought to have been presented before this House to-day. But, contrary to that, we find in the list of business for to-day that presentation of the budget is omitted. It is irregular and contrary to the direction of the Maharaja.

Secondly, we are not aware when the Budget is going to be presented. Except for the reports in newspapers that it is going to be presented on the 23rd, we do not know the exact date. 23rd is not the day fixed by His Highness the Rajpramukh.

Thirdly, according to the reports in the papers, if 23rd is the date, I submit that the members of this House will have absolutely no time to study the Budget. According to the original programme, we have four days' time,

(JANAB J. MOHAMED IMAM.)

including Sunday. In accordance with the direction given by the Rajpramukh—he has fixed 20th and no other date—it is imperative that the Finance Minister should present the Budget to-day and I hope he will present the Budget only to-day.

*Sri K. HANUMANTHAIYA (Leader of the House).—Sir, there is much force in what the Hon'ble Member has said. I readily grant the points he has raised. He will kindly see that this Programme is a 'Provisional' Programme. Therefore Sir, I am not presenting the Budget today. It is more with a view to help the House for a proper discussion that I will be doing so and not because the Budget is not ready for presentation. We now proceed to discuss the Rajpramukh's Address and it will take about two days. It would be better if the Budget is presented after the Debate concludes. Otherwise there will be overlapping. Even now, if the House so desires, I have no objection to present the Budget whenever it likes. Therefore, if the Hon'ble Leader of the Opposition will kindly see the point of view I have placed before him, 23rd will suit, because they will have 2 days for discussion on the Address of the Rajpramukh and after knowing Government's reply to the various points raised during the course of that discussion, they will be in a better position to discuss and criticise Government during the Budget Debate. It is with this view that I have made this arrangement and if the Leader of the Opposition wants any change, I will do whatever is necessary.

Janab J. MOHAMED IMAM.—May I say a few words with your permission, Sir? My difficulty is this. The Budget has to be presented on a date fixed by His Highness the Maharaja. I am not aware if the Rajpramukh has fixed 23rd as the date. Apart from that, as the Hon'ble Leader of the House said, we will discuss the Rajpramukh's Address and so many amendments will also come in and we will enter into details and figures will be quoted and the same thing might repeat itself during the Budget Debate. I want to tell him that even though we enter into details of the financial aspect, we will refrain from making duplicate statements. My only difficulty is this: The Budget is a very voluminous document and contains intricate details and most of our members are quite new to these figures. If the Budget is presented today, we will have four days to study. If, as the Hon'ble Leader of the House suggested, the Budget is presented on the 23rd and general discussion begins on the 24th, we will have no time to study.

Sri K. HANUMANTHAIYA.—Even now you will have four days.

Janab J. MOHAMED IMAM.—Then you will have to refix the dates.

Sri K. HANUMANTHAIYA.—In consultation with you, we will refix the programme.

Janab J. MOHAMED IMAM.—If the Leader of the House is agreeable to give us at least four days' time, I have no objection.

Sri K. HANUMANTHAIYA.—We will consult each other and fix up dates.

Mr. SPEAKER.—So in consultation with the Leader of the House, you are agreeable to change the programme?

Janab J. MOHAMED IMAM.—Yes.

Sri K. HANUMANTHAIYA.—We will then formally communicate the date to His Highness and he will issue the necessary order. 23rd is the date and after question hour I will present the Budget.

Debate on the Motion of Thanks.

Mr. SPEAKER.—Debate on the Motion of Thanks to His Highness the the Maharaja will be taken up now. Sri H. S. Rudrappa may move the motion.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಸ್ವಾಮಿ, ಮೈಸೂರು ಸಂಸ್ಥಾನದ ರಾಜಪ್ರಮುಖರಾದ ಶ್ರೀ ಮನ್ಮಹಾರಾಜರವರು ನಿನ್ನೆಯ ದಿವಸ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸಂಯುಕ್ತ ಅಧಿವೇಶನದಲ್ಲಿ

ದಯಪಾಲಿಸಿದ ಭಾಷಣಕ್ಕಾಗಿ ಈ ಕೆಳಗೆ ಕಂಡ ರೀತಿಯಲ್ಲಿ ವಂದನೆಗಳನ್ನರ್ಪಿಸುವುದಕ್ಕೆ ಈ ಸಭೆಯ ಅನುಮತಿ ಬೇಡುತ್ತೇನೆ. ಸೂಚನೆ ಈ ರೀತಿ ಇದೆ :

" ಮಹಾಸ್ವಾಮಿ, ಈ ಅಧಿವೇಶನದಲ್ಲಿ ಸಭೆ ಸೇರಿರುವ ಮೈಸೂರು ವಿಧಾನ ಸಭೆಯ ಸದಸ್ಯರುಗಳಾದ ನಾವು, ವಿಧಾನಮಂಡಲದ ಉಭಯಸದನಗಳ ಸದಸ್ಯರನ್ನು ಸಂಬೋಧಿಸಿ ದಯಪಾಲಿಸಿದ ಭಾಷಣಕ್ಕಾಗಿ, ತಮಗೆ ನಮ್ಮ ವಂದನೆಗಳನ್ನು ಸಮರ್ಪಿಸಲು ಅನುಮತಿಯನ್ನು ಬೇಡುತ್ತೇವೆ. "

ಸ್ವಾಮಿ, ಭಾರತದ ಹೊಸ ರಾಜ್ಯಾಂಗದ 176ನೆಯ ವಿಧಿಯ ಪ್ರಕಾರ ಆಯಾ ಪ್ರಾಂತದ ಗೌರ್ನರುಗಳು ಮತ್ತು ರಾಜಪ್ರಮುಖರುಗಳು ಭಾಷಣ ಮಾಡಲು ಮೊದಲನೇ ಅಧಿವೇಶನಗಳ ಸಂದರ್ಭದಲ್ಲಿ ಅವಕಾಶವಿದೆ. ಈ ಸಂದರ್ಭದಲ್ಲಿ ಆಯಾ ಸರ್ಕಾರದ ಧೋರಣೆ, ಕಾರ್ಯಕಲಾಪಗಳು, ಹಿಂದೆ ಮಾಡಿರತಕ್ಕ ಕಾರ್ಯಕಲಾಪಗಳು ಮುಂದೆ ಮಾಡಬೇಕಾದ ಪ್ರಾಮುಖ್ಯವಾದ ಕಾರ್ಯಕಲಾಪಗಳು, ಆ ಅಧಿವೇಶನದಲ್ಲಿ ನಡೆಯತಕ್ಕ ಕಾರ್ಯ ಕಲಾಪಗಳು ಇವುಗಳ ಬಗ್ಗೆ ಸಭಾ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುವುದು ಸಂಪ್ರದಾಯವಾಗಿದೆ. ಅದರಂತೆ ನಮ್ಮ ರಾಜಪ್ರಮುಖರಾದ ಶ್ರೀಮನ್ಮಹಾರಾಜರವರು ನಿನ್ನೆಯ ದಿವಸ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸಂಯುಕ್ತ ಅಧಿವೇಶನದಲ್ಲಿ ಅನೇಕ, ವಿಷಯಗಳನ್ನೊಳಗೊಂಡ ಭಾಷಣವನ್ನು ದಯಪಾಲಿಸಿದ್ದಾರೆ. ಅವರು ಹೀಗೆ ಮಾಡಿರುವುದು ಇದೇ ಮೊದಲನೆಯ ಸಾರಿಯಲ್ಲ. ಭಾರತದ ಹೊಸ ರಾಜ್ಯಾಂಗದ ವಿಧಿಯ ಪ್ರಕಾರ ಶ್ರೀಮನ್ಮಹಾರಾಜರು ಹಿಂದೆ ಅನೇಕ ಸಾರಿ ತಮ್ಮ ಭಾಷಣವನ್ನು ಅಪ್ಪಣೆ ಕೊಡಿಸಿದ್ದಾರೆ. ಆದರೆ ನಮ್ಮ ಮಹಾರಾಜರು ಅಪ್ಪಣೆ ಕೊಡಿಸಿದ ರೀತಿಯಲ್ಲಿ ಹೊಸ ರಾಜ್ಯಾಂಗವೇರ್ಪಟ್ಟು ಈ ರಾಜ್ಯಾಂಗದ ಚೌಕಟ್ಟಿನಲ್ಲಿ ವಯಸ್ಕರ ಮತದಾನ ಪದ್ಧತಿಯ ಮೇರೆಗೆ ಸಂಪೂರ್ಣ ಪ್ರಜಾಪ್ರಭುತ್ವ ಏರ್ಪಟ್ಟ ಮೇಲೆ ಸಂಯುಕ್ತ ಅಧಿವೇಶನದಲ್ಲಿ ಅವರ ಭಾಷಣಮಾಡಿರುವುದು ಇದೇ ಮೊದಲು. ಇದಕ್ಕಾಗಿ ಈಗ ಈ ಸಭೆಯಲ್ಲಿ ಅವರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಇದು ನನ್ನ ಪಾಲಿಗೆ ಬಂದಿದೆ ; ಇದನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೇನೆ.

ಅವರ ಭಾಷಣದಲ್ಲಿ ಮೊಟ್ಟಮೊದಲನೆಯದಾಗಿ ಭಾರತ ರಾಜ್ಯಾಂಗದ ಪ್ರಕಾರ ವಯಸ್ಕರ ಮತದಾನದ ಮೇರೆಗೆ ನಡೆದ ಚುನಾವಣೆಗಳ ವಿಚಾರ ಪ್ರಸ್ತಾಪ ಮಾಡಿದ್ದಾರೆ.

1-30 P.M.

ಸ್ವಾಮಿ, ನಾನು ಈ ಸಂದರ್ಭದಲ್ಲಿ ಎಂದರೆ ಭಾರತದ ರಾಜ್ಯಾಂಗವನ್ನು ರಚನೆ ಮಾಡಿದ ಮತ್ತು ನೂತನ ರಾಜ್ಯಾಂಗ ವಿಧಿಗನುಸಾರವಾಗಿ ವಯಸ್ಕರ ಮತದಾನ ಪದ್ಧತಿಯ ಮೇಲೆ ನಡೆದ ಚುನಾವಣೆಗಳ ಬಗ್ಗೆ ಒಂದೆರಡು ಮಾತುಗಳನ್ನಾಡಿದರೆ ಅದು ಅಪ್ರಕೃತವಾಗಲಾರದು.

ಮೊಟ್ಟಮೊದಲನೆಯದಾಗಿ, ಅವರು ಭಾರತಾದ್ಯಂತ ಹಾಗೂ ಮೈಸೂರಿನಲ್ಲಿ ನಡೆದ ಚುನಾವಣೆಗಳ ವಿಷಯದಲ್ಲಿ ಮತ್ತು ಹೆಚ್ಚಿನ ಒಂದು ಜವಾಬ್ದಾರಿಯನ್ನು ಹೊತ್ತುಕೊಂಡು, ನಿಷ್ಪಕ್ಷಭಾವನೆಯಿಂದ ಆ ಚುನಾವಣೆಗಳನ್ನು ನಡೆಸಿದ ಅಧಿಕಾರಿಗಳ ವಿಷಯವಾಗಿ ತಮ್ಮ ಮೆಚ್ಚುಗೆ ಮತ್ತು ಹೆಚ್ಚಿನ ಶ್ಲಾಘನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಚಿರಋಣಿಗಳಾಗಿರಬೇಕಾಗಿದೆ. ಇಂಗ್ಲೀಷಿನವರು ಇಂಡಿಯಾ ದೇಶವನ್ನು ಬಿಟ್ಟುಹೋದ ಮೇಲೆ, ಈ ನಮ್ಮ ದೇಶದಲ್ಲಿ ಇಷ್ಟು ಬೇಗ ನೂತನ ರಾಜ್ಯಾಂಗ ವಿಧಿಗಳು ಏರ್ಪಟ್ಟು, ತದನುಸಾರವಾಗಿ ವಯಸ್ಕರ ಮತದಾನ ಪದ್ಧತಿ ಮೇರೆ ಚುನಾವಣೆ ನಡೆದು ಈ ನೂತನ ವಿಧಾನ ಸಭೆ ಮತ್ತು ಪರಿಷತ್ತುಗಳು ಹೊಸ ರಾಜ್ಯಾಂಗ ಪದ್ಧತಿಗನುಗುಣವಾಗಿ ಏರ್ಪಡುತ್ತವೆಯೆಂದು ನಾನು ನಂಬಿರಲಿಲ್ಲ. ಮೈಸೂರು ದೇಶದಲ್ಲಿ ಸುಮಾರು 40 ಲಕ್ಷ ಸಂಖ್ಯೆಯಷ್ಟು ಮತದಾರರು ತಮ್ಮ ಮತದಾನ ಮಾಡಿ, ಇಷ್ಟು ಬೇಗ

(ಶ್ರೀ ಎಚ್. ಎಸ್. ರುದ್ರಪ್ಪನವರು.)
ಚುನಾವಣೆಗಳು ಮುಗಿದು, ದೇಶವು ತನ್ನ ಕೆಲಸ ಕಾರ್ಯಗಳನ್ನು ಇಷ್ಟು ಸುಲಭವಾಗಿ ನಡೆಸಲು ಸಾಧ್ಯವಾಗಲಾರದೆಂದು, ಇಂಡಿಯಾ ದೇಶದ ಪ್ರಜಾಪ್ರಭುತ್ವ ಆಡಳಿತದ ಬಗ್ಗೆ ಆಸಕ್ತಿ ವಹಿಸಿದ್ದಂಥ ಅನ್ಯ ದೇಶಗಳವರು ಭಾವಿಸಿದ್ದಂತೆ ಕಾಣುತ್ತದೆ. ಏತಕ್ಕೆಂದರೆ ಮೊನ್ನೆತಾನೆ ನಡೆದ ಚುನಾವಣೆಗಳು, ಅವುಗಳು ನಡೆದ ರೀತಿ ನೀತಿ, ಮತ್ತು ವಯಸ್ಕರ ಮತದಾನ ಪದ್ಧತಿಯು ಪ್ರಜಾಪ್ರಭುತ್ವ ತತ್ವದ ಆಧಾರಗಳ ಮೇಲೆ ನಡೆದಿರತಕ್ಕ ಪರಿಸ್ಥಿತಿ. ಇವು ಪ್ರಪಂಚದ ಇತರ ಸಮಸ್ತ ದೇಶಗಳವರ ಮನಸ್ಸನ್ನು ಆಕರ್ಷಿಸಿ, ಅವರು ಇವುಗಳನ್ನು ತೀವ್ರಾಸಕ್ತಿಯಿಂದ ಗಮನವಿಟ್ಟು ಪರಿಶೀಲಿಸುವಂತೆ ಮಾಡಿದವೆಂದು ಸೂಚಿಸಿ, ಇದರ ಬಗ್ಗೆ ಶ್ರೀಮನ್ಮಹಾರಾಜರವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಇಂಡಿಯಾ ದೇಶದಲ್ಲಿ ಸಾಂಕುಶ ಪ್ರಭುತ್ವವು ಬಹಳ ಕಾಲದವರೆಗೆ ನಡೆದು ಬಂದಾಗ್ಯೂ ಈಗ ಗಾಂಧೀ ತತ್ವಗಳ ಆಧಾರದ ಮೇಲೆ ರಚಿತವಾದ ರಾಜ್ಯಾಂಗದಲ್ಲಿ ಇಂಡಿಯಾ ದೇಶದ ಜನರಿಗೆ ನಂಬಿಕೆ ಇದೆ ಎಂಬುದಕ್ಕೆ ಮೊನ್ನೆ ತಾನೇ ನಡೆದ ಚುನಾವಣೆಗಳೇ ನಿದರ್ಶನ. ಈಗಲೂ ಸಹ ನನಗನಿಸುತ್ತದೆ, ಇಂಡಿಯಾ ದೇಶದಲ್ಲಿ ಪ್ರಜಾಪ್ರಭುತ್ವ ತತ್ವ ಚೆನ್ನಾಗಿ ಈಗ ಬೇರೂರಿದೆ, ಎಂದು. ಆದ ಕಾರಣ ಪರದೇಶದ ಅನ್ಯ ರಾಜಕೀಯ ಪಕ್ಷಗಳು, ಮೊನ್ನೆ ನಡೆದ ಚುನಾವಣೆಗಳ ಕಾಲದಲ್ಲಿ, ಇಲ್ಲಿ ಚಳುವಳಿ ನಡೆಸಲು ಉತ್ತೇಜನ ಕೊಟ್ಟಿದ್ದರೂ ಹಾಗೊಂದು ಬದಲಾವಣೆಯಾದ ಪಕ್ಷಕ್ಕೆ ನಮ್ಮ ದೇಶದಲ್ಲಿ ಏರ್ಪಟ್ಟ ಆಡಳಿತವನ್ನು ನಿರ್ವಹಿಸಲು ಅಷ್ಟು ಸುಲಭಸಾಧ್ಯವಲ್ಲವೆಂಬುದು ಈಗಾಗಲೇ ಸರ್ವರಿಗೂ ತಿಳಿದಿರುವ ಅಂಶವೇ ಆಗಿದೆ. ಈಗ ಶ್ರೀಮನ್ಮಹಾರಾಜರವರು ಚುನಾವಣೆಗಳ ಪ್ರಸ್ತಾಪದ ಬಗ್ಗೆ ಅಪ್ಪಣೆ ಕೊಡಿಸಿದ ಒಂದು ಅಂಶವನ್ನು ಸಭೆಯ ಗಮನಕ್ಕೆ ತರುತ್ತೇನೆ. ವಯಸ್ಕರ ಮತದಾನ ಪದ್ಧತಿಯ ಮೇಲೆ ಮೊನ್ನೆ ಮೈಸೂರು ದೇಶದಲ್ಲಿ ನಡೆದ ಚುನಾವಣೆಗಳಲ್ಲಿ ಸುಮಾರು 30 ಲಕ್ಷಕ್ಕೆ ಮೇಲ್ಪಟ್ಟು ಜನರು ಭಾಗವಹಿಸಿ, ಮತದಾನ ಮಾಡಿದ್ದಾರೆ. ಹೀಗೆ ಮೈಸೂರು ದೇಶದಲ್ಲಿ ನಡೆದ ಚುನಾವಣೆಗಳನ್ನು ನೋಡಿದರೆ, ನಮ್ಮ ದೇಶ ಪ್ರಜಾಪ್ರಭುತ್ವದ ಆಡಳಿತದಲ್ಲಿ ಯಾರಿಗೂ ಹಿಂದುಳಿದಿಲ್ಲವೆಂಬ ಅಂಶ ಚೆನ್ನಾಗಿ ಗೊತ್ತಾಗುತ್ತದೆ. ಇದಕ್ಕೊಂದು ಉದಾಹರಣೆಯನ್ನು ಕೊಡಬೇಕೆಂದರೆ, ಮೊನ್ನೆ ದೇಶಾದ್ಯಂತವೂ ನಡೆದ ಚುನಾವಣೆಗಳಲ್ಲಿ, ಮೈಸೂರು ದೇಶದಲ್ಲಿ ನಡೆದ ಚುನಾವಣೆಗಳಲ್ಲಿ, ಸುಮಾರು ಶೇಕಡ 60 ರಷ್ಟು ಮತದಾರರು, ಹೆಂಗಸರೂ, ಗಂಡಸರೂ, ಭಾಗವಹಿಸಿ ಮತದಾನ ಮಾಡಿ, ಅವರ ವಿಶ್ವಾಸಕ್ಕೆ ಪಾತ್ರರಾಗಿರತಕ್ಕವರನ್ನು ಚುನಾಯಿಸಿ ಈ ನೂತನ ಶಾಸನ ಸಭೆಗೆ ಕಳುಹಿಸಿಕೊಟ್ಟು, ಶಾಸನ ಸಭೆಯ ಮೇಲೆ ಅವರಿಗಿರತಕ್ಕ ನಂಬಿಕೆಯನ್ನು ವ್ಯಕ್ತಪಡಿಸಿರುವುದಲ್ಲದೆ ತಮ್ಮ ವ್ಯಕ್ತಿತ್ವವನ್ನೂ ಉಳಿಸಿಕೊಂಡಿದ್ದಾರೆ. ಪಟ್ಟಣಗಳಿಗಿಂತಲೂ ಹಳ್ಳಿಗಾಡಿನಲ್ಲಿರತಕ್ಕ ಜನರು ಹೆಚ್ಚಿನ ಸಂಖ್ಯೆಯಲ್ಲಿ ತಂಡೋಪತಂಡವಾಗಿ ಮುಂದೆ ಬಂದು ನಮ್ಮ ಮೈಸೂರಿನಲ್ಲಿ ಮತದಾನ ಮಾಡಿ ಅವರ ಇನ್ನೊಂದು ಗಮನಾರ್ಹವಾದ ಹಕ್ಕನ್ನುಳಿಸಿಕೊಂಡಿದ್ದಾರೆ. ವಿಷಯವೇನೆಂದರೆ, ಗಂಡಸರಿಗಿಂತ ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿದ್ದಾರೆ; ಹಕ್ಕನ್ನುಳಿಸಿಕೊಂಡಿದ್ದಾರೆ. ಇದರಿಂದ ಅವರೆಲ್ಲರಿಗೂ ಈ ಪ್ರಜಾಪ್ರಭುತ್ವ ತತ್ವದ ಆಡಳಿತದ ಮೇಲೆ ಎಷ್ಟು ಪ್ರೇಮ ಮತ್ತು ನಂಬಿಕೆಗಳಿರುತ್ತವೆಂಬುದು ವೇದ್ಯವಾಗುತ್ತದೆ. ಆದುದರಿಂದ ಇಂಥಾ ಚುನಾವಣೆಗಳ ಸಂಬಂಧದಲ್ಲಿ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತು, ಈ ಕಠಿಣ ಸ್ವಭಾವದ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಿದ ಅಧಿಕಾರಿಗಳೆಲ್ಲರಿಗೂ ನಾವು ನಮ್ಮ ಹೃತ್ಪೂರ್ವಕ ವಂದನೆಗಳನ್ನರ್ಪಿಸಬೇಕಾಗಿದೆ. ಅದೇ ವಿಚಾರವನ್ನು ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ.

ಎರಡನೆಯದಾಗಿ, ಶ್ರೀಮನ್ಮಹಾರಾಜರವರು ಬಹಳ ಸೂಕ್ಷ್ಮವಾಗಿ ಒಂದು ಎಚ್ಚರಿಕೆಯನ್ನಿತ್ತಿದ್ದಾರೆ. ಅದು ಏನೆಂದರೆ, ವಿಧಾನಸಭೆ

ಮತ್ತು ವಿಧಾನಪರಿಷತ್ತು ಈ ಉಭಯ ಸಭೆಗಳೂ ಯಾವ ಮಟ್ಟದಲ್ಲಿ ತಮ್ಮ ತಮ್ಮ ಕೆಲಸಗಳನ್ನು ನಡೆಸಿಕೊಂಡು ಹೋಗಬೇಕು, ಯಾವ ರೀತಿಯಲ್ಲಿ ಇವು ಒಂದಕ್ಕೊಂದು ಸೌಹಾರ್ದ ರೀತಿಯಲ್ಲಿ, ಸಂಯಮನ ರೀತಿಯಲ್ಲಿ ಕೆಲಸಗಳನ್ನು ನಡೆಸಿಕೊಂಡು, ದೇಶದ ಪ್ರಜೆಗಳ ನಿಜವಾದ ಆಶಯಕ್ಕನುಸಾರವಾಗಿ, ತಮ್ಮ ಮೇಲೆ ಬಿದ್ದಿರತಕ್ಕ ಪೂರ್ಣ ಹೊಣೆಗಾರಿಕೆಯನ್ನು ಅರಿತು ಹೇಗೆ ಕೆಲಸ ಕಾರ್ಯಗಳನ್ನು ನಡೆಸಬೇಕೆಂಬ ಬಗ್ಗೆ ಮತ್ತು ವಿಧಾನಸಭೆಯ ಎಲ್ಲ ಕಾರ್ಯ ಕ್ರಮಗಳೂ ಹೇಗೆ ಒಂದು ಮೇಲ್ಮಟ್ಟದವುಗಳಾಗಿರಬೇಕೆಂಬ ವಿಚಾರದಲ್ಲಿಯೂ ಮತ್ತು ಮುಂದಿನ ಜನಾಂಗಕ್ಕೆ ಒಂದು ಸತ್ಸಂಪ್ರದಾಯವಾಗುವಂಥ ರೀತಿ ನೀತಿಗಳನ್ನು ಈ ಸಭೆಗಳು ಆಚರಣೆಗೆ ತರಬೇಕಾಗಿರುತ್ತದೆ ಯೆಂಬ ಬಗ್ಗೆ ಒಂದು ಸೂಚನೆ ಮಾಡಿದ್ದಾರೆ. ಈ ಶಾಸನ ಸಭೆಯಲ್ಲಿ ಅನೇಕ ಪಕ್ಷ ಪಂಗಡಗಳಿರುತ್ತವೆ. ಈ ಎಲ್ಲ ಪಕ್ಷಗಳ ಸೌಹಾರ್ದವನ್ನೂ ಸಂಪಾದಿಸಿಕೊಂಡು ದೇಶಾಭಿವೃದ್ಧಿಗೆ ಅನುಕೂಲವಾದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕೆಂದು ಸಹ ಒಂದು ಸೂಚನೆ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಇನ್ನು ಮೂರನೆಯದಾಗಿ, ನಾನು ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರ ಮನೆತನದ ಬಗ್ಗೆ ಒಂದು ಅಂಶವನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ. ಮೈಸೂರಿನ ವಿಧಾನಸಭೆ ಮತ್ತು ವಿಧಾನಪರಿಷತ್ತು ಈ ಎರಡೂ ಇತರ ದೇಶದ ಯಾವ ಸಭೆಗಳಿಗೂ ಹಿಂದುಳಿಯದಂತೆ ಎಲ್ಲದಕ್ಕೂ ಒಂದು ಮಾದರಿಯಾಗಿರುವಂತೆ ಬಹಳ ಉತ್ತಮ ಮಟ್ಟದಲ್ಲಿ ಮುಂದುವರಿದುಕೊಂಡು ಬಂದಿರುವುದು ಬಹಳ ಗಣನೀಯವಾದ ವಿಷಯವೆಂಬುದನ್ನು ನಾನೊಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಇಷ್ಟೊಂದು ಕೀರ್ತಿ ಮತ್ತು ಖ್ಯಾತಿ ಸಂಪಾದನೆಗೆ ನಮ್ಮ ರಾಜಮನೆತನವೇ ಮುಖ್ಯ ಕಾರಣ. ಇಂಡಿಯಾ ದೇಶದಲ್ಲಿರತಕ್ಕ ರಾಜಮನೆತನದವರ ಪೈಕಿ ನಮ್ಮ ಮೈಸೂರು ರಾಜಮನೆತನದವರು ಸುಮಾರು 1881ನೆಯ ಇಸವಿಯಲ್ಲೇ, ಪ್ರಜಾಪ್ರತಿನಿಧಿ ಸಭೆಯೆಂಬುದಾಗಿ ಒಂದು ಶಾಸನ ಸಭೆಯನ್ನು ಏರ್ಪಡಿಸಿದ್ದರು. 1924ರ ಸುಮಾರಿನಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪನೆ ಮಾಡಿದರು. ಹೀಗೆ ಇಂದು ನಮ್ಮ ಮೈಸೂರಿನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಮೊದಲನೆಯ ಬೀಜವನ್ನು ಬಿತ್ತಿದವರು ನಮ್ಮ ರಾಜಮನೆತನದವರು. ಹಾಗೆ ಅವರು ಸ್ಥಾಪಿಸಿದ ಎರಡು ಸಭೆಗಳೂ, ಇಂಗ್ಲೆಂಡಿನಲ್ಲಿ ಹೌಸ್ ಆಫ್ ಕಾಮನ್ಸ್ ಸಭೆಯು ಅಲ್ಲಿನ ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಬಂದು ಆ ದೇಶದ ಕೀರ್ತಿಯನ್ನು ಎತ್ತಿಹಿಡಿದಿರುವಂತೆ, ನಮ್ಮ ಮೈಸೂರಿನಲ್ಲಿ ಸಹ ಈ ಉಭಯ ಸಭೆಗಳು ನಮ್ಮ ದೇಶದ ಗೌರವ, ಕೀರ್ತಿ ಮತ್ತು ಘನತೆಗಳನ್ನು ಎತ್ತಿ ಹಿಡಿದಿವೆಯೆಂದು ನಾನು ಹೇಳುತ್ತೇನೆ.

ಇಂದು ಮತ್ತೆ ಮೈಸೂರಿನಲ್ಲಿ ಅದೇ ರಾಜಮನೆತನದವರ ಆಶ್ರಯದಲ್ಲಿ ಈ ಹೊಸ ರಾಜ್ಯಾಂಗದ ಪ್ರಕಾರ ಹೊಸ ಶಾಸನ ಸಭೆಗಳು ಏರ್ಪಾಡಾಗಿ ಆಡಳಿತ ನಡೆಸುತ್ತಿವೆ. ಇದಕ್ಕೆ ಕಾರಣ ಮೈಸೂರಿನಲ್ಲಿ ಬಹಳವಾಗಿ ದೊಡ್ಡ ದೊಡ್ಡ ಮೇಧಾವಿಗಳೂ, ಗಣನೀಯರಾದ ವ್ಯಕ್ತಿಗಳೂ ಇದ್ದಾರೆ ಮತ್ತು ಅಧಿಕವಾಗಿ ಇನ್ನೂ ಉದ್ಭವಿಸುತ್ತಿದ್ದಾರೆ.

ಶ್ರೀ ವಿಶ್ವೇಶ್ವರಯ್ಯನವರಂಥ ಮಹಾ ವ್ಯಕ್ತಿಗಳೂ ಸಹ ನಮ್ಮ ದೇಶದಲ್ಲಿದ್ದಾರೆ. ಅಲ್ಲದೆ ದೊಡ್ಡ ದೊಡ್ಡ ಅಧಿಕಾರಿಗಳೂ, ದಕ್ಷರೂ ಮತ್ತು ಶಕ್ತಿವಂತರೂ, ದೊಡ್ಡದೊಡ್ಡ ಇಂಜಿನಿಯರುಗಳೂ ಪ್ರಾಜ್ಞರೂ ಇದ್ದಾರೆ. ಇನ್ನೊಂದು ಹೆಮ್ಮೆಯೇನೆಂದರೆ, ಈ ಪ್ರಜಾಪ್ರಭುತ್ವದ ಪ್ರಕಾರ ಇಲ್ಲಿಯವರೆಗೆ ಸರಿಯಾಗಿ ನಡೆದುಕೊಂಡು ಬಂದು ನಾವು ಈ ಜವಾಬ್ದಾರಿಯನ್ನು ನಾಲ್ಕು ವರ್ಷಗಳು ಸಮರ್ಪಕವಾಗಿ ನಿರ್ವಹಿಸಿದ ಕಾರಣದಿಂದ ನಮ್ಮ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಈ ದಿವಸ ಭಾರತ ಸರ್ಕಾರದ ಮಂತ್ರಿಗಳಾಗಿದ್ದಾರೆ. ಅಲ್ಲದೆ ನಮ್ಮ ಶ್ರೀ ಎಸ್. ವಿ. ಕೃಷ್ಣ

(ಶ್ರೀ ಎಚ್. ಎಸ್. ರುದ್ರಪ್ಪನವರು.)

ಮೂರ್ತಿರಾಯರು ರಾಜ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾರೆ. ಇದು ನಮಗೆ ಹೆಮ್ಮೆಯ ವಿಷಯ. ಇದೂ ಅಲ್ಲದೆ ಭಾರತ ಸರ್ಕಾರದಲ್ಲಿ ಇನ್ನು ಮುಂದೆ ದೊಡ್ಡ ಹುದ್ದೆ ಮತ್ತು ಅಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಯೋಗ್ಯರಾದಂಥ ವ್ಯಕ್ತಿಗಳು ಈ ಸಭೆಯಲ್ಲಿದ್ದಾರೆ. ಆದ್ದರಿಂದ ನಾವು ಇಷ್ಟು ಮಾತ್ರ ಹೆಮ್ಮೆಯಿಂದ ಹೇಳಬೇಕು. ಯಾವ ಪ್ರಾಂತಗಳಿಗೂ ಕಡಿಮೆಯಿಲ್ಲದೆ ನಾವು ಅನೇಕ ಪಕ್ಷ ಪಂಗಡಗಳಿದ್ದರೂ ಸಹ ಬಹಳ ಸೌಹಾರ್ದದಿಂದ ಆಡಳಿತಾಧಿಕಾರವನ್ನು ನಡೆಸಿಕೊಂಡು ಬಂದು ಉದಾತ್ತಧ್ಯೇಯದಿಂದ ನಮ್ಮ ಕೆಲಸವನ್ನು ನಿರ್ವಹಿಸುತ್ತೇವೆಂದು ಮಹಾಸ್ವಾಮಿಯವರಲ್ಲಿ ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ನಾಲ್ಕನೆಯದಾಗಿ, ನಮ್ಮ ದೇಶದ ಹಣಕಾಸಿನ ಸ್ಥಿತಿಯನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಇದು ಎಲ್ಲರಿಗೂ ಗೊತ್ತಿದ್ದ ವಿಷಯ. ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಈಗ ಎರಡು ವರ್ಷಗಳಿಂದ ಸ್ವಲ್ಪ ಕಷ್ಟಕ್ಕೆ ಬಂದಿದೆ. ಕಾರಣ ನಮ್ಮ ದೇಶದಲ್ಲಿ ಆಡಳಿತಾಧಿಕಾರ ನಡೆಸುವವರು ಹೆಚ್ಚು ಹೆಚ್ಚಾಗಿ ಹಣವನ್ನು ಸಾಮಾಜಿಕ ಅಭಿವೃದ್ಧಿಗಾಗಿ, ದೇಶದ ವ್ಯವಸಾಯಾಭಿವೃದ್ಧಿ ಮುಂತಾದುವುಗಳಿಗಾಗಿ, ಖರ್ಚು ಮಾಡುತ್ತಾ ಬಂದಿದ್ದಾರೆ. ಅದಕ್ಕೆ ಉದಾಹರಣೆ, ಈ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವ ಮೊದಲು ಸರ್ಕಾರದವರು ಎಷ್ಟು ಹಣವನ್ನು ಖರ್ಚುಮಾಡುತ್ತಿದ್ದರೋ ಅದಕ್ಕೆ ಮೂರರಷ್ಟು ಹಣವನ್ನು ಹಿಂದಿನ ಸರ್ಕಾರದವರು ವಿದ್ಯಾಪ್ರಸಾರಕ್ಕಾಗಿ ಖರ್ಚುಮಾಡಿದರು. ಅದೇ ರೀತಿಯಲ್ಲಿ ಆರೋಗ್ಯ ಮತ್ತು ಅನೇಕ ಇತರ ಬಾಬುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿ ದೇಶದ ಅಭ್ಯುದಯವನ್ನು ಸಾಧಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಆದಾಯ ಮಾತ್ರ ಒಂದೇ ರೀತಿಯಾಗಿದೆ. ಆದ್ದರಿಂದ ಈ ಹೊತ್ತು ನಮಗೆ ಈ ಕಷ್ಟ ಒದಗಿದೆ. ಇದನ್ನು ಬಹಳ ಚೆನ್ನಾಗಿ ಬಹಳ ಎಚ್ಚರಿಕೆಯಿಂದ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ಅದೇನೆಂದರೆ, ನಮಗೆ ಈಗ ಒದಗಿರುವ ಕಷ್ಟವನ್ನು ಹೋಗಲಾಡಿಸಲು ನಾವು ನಿರ್ದಾಕ್ಷಿಣ್ಯವಾಗಿ, ನಿಸ್ಪೃಹತೆಯಿಂದ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಿದರೆ ಮಾತ್ರ ಆದಾಯ ಸರಿಹೋಗಬಹುದು ಎಂದು ಸೂಚನೆ ಕೊಟ್ಟಿದ್ದಾರೆ. ಇದಕ್ಕೆ ನಾವು ಸರ್ಕಾರಕ್ಕೆ ಸರಿಯಾದ ಬೆಂಬಲ ಕೊಟ್ಟರೆ ಆಗ ಮಾತ್ರ ಈ ಕೆಲಸ ಸರಿಯಾಗಿ ನೆರವೇರಲು ಸಾಧ್ಯ. ಈಗ ಆದಾಯ ಮತ್ತು ವ್ಯಯವನ್ನು ಸರಿದೂಗಿಸಬೇಕಾದರೆ ಅನೇಕ ಬಾಬುಗಳಲ್ಲಿ ನಿರ್ದಾಕ್ಷಿಣ್ಯವಾಗಿ ಸರ್ಕಾರದವರು ಪ್ರವೇಶಿಸಿ ರಿಟ್ರೆಂಚ್‌ಮೆಂಟ್ ಮಾಡತಕ್ಕದ್ದು ಆವಶ್ಯಕವಾಗಿದೆ. ಆದರಿಂದ ಅನೇಕ ದೂರುಗಳು ಬರಬಹುದು. ಆ ದೂರುಗಳನ್ನು ನಾವು ಲೆಕ್ಕಿಸದೆ ಸರ್ಕಾರಕ್ಕೆ ಒಮ್ಮತದಿಂದ ಬೆಂಬಲ ಕೊಡಬೇಕು. ಅನೇಕ ಬಾಬುಗಳಲ್ಲಿ ಖೋತಾ ಮಾಡಬಹುದೆಂದು ಕಾಣುತ್ತದೆ. ಈ ವಿಚಾರದಲ್ಲಿ ಇಂಜನಿಯರಿಂಗ್ ಇಲಾಖೆಯ ಒಂದು ಉದಾಹರಣೆ ಕೊಡುತ್ತೇನೆ. ಶ್ರೀ ಕಡಿದಾಳ್ ಮಂಜಪ್ಪನವರು ನನ್ನ ಮಿತ್ರರು. ಅವರಿಗೆ ಸಂಬಂಧಪಟ್ಟ ಆ ಇಲಾಖೆಯಲ್ಲಿ ನಾನು ಕಂಡ ಹಾಗೆ ಬಹಳ ಹೆಚ್ಚು ಹಣ ಖರ್ಚಾಗುತ್ತಾ ಇದೆ. ಅಧಿಕಾರಿಗಳು ಬಹಳ ಹೆಚ್ಚಾಗಿದ್ದಾರೆ. ಒಂದು ತಾಲ್ಲೂಕಿನಲ್ಲಿ ನಾನು ಕಂಡ ಹಾಗೆ ಒಬ್ಬ ಓವರ್ಸಿಯರ್ ಮತ್ತು ಒಬ್ಬ ಸಬ್ ಓವರ್ಸಿಯರ್ ಕೆಲಸಮಾಡುವ ಜಾಗದಲ್ಲಿ ಒಬ್ಬ ಅಸಿಸ್ಟೆಂಟ್ ಇಂಜನಿಯರನ್ನು ನೇಮಕ ಮಾಡಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಹೀಗಿದೆ. ಆದ್ದರಿಂದ ಅಂಥ ಕಡೆ ಹೆಚ್ಚಾಗಿರುವ ಅಸಿಸ್ಟೆಂಟ್ ಇಂಜನಿಯರುಗಳನ್ನು ಹಣದ ಅಭಾವದಿಂದ ನಿರ್ದಾಕ್ಷಿಣ್ಯವಾಗಿ ಖೋತಾ ಮಾಡಬಹುದೆಂದು ಕಾಣುತ್ತದೆ. ಅಲ್ಲದೆ ಈ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕಾಣುತ್ತದೆ. ನಮ್ಮ ಮದ್ರಾಸು ಪ್ರಾಂತದ ಮುಖ್ಯ ಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಸಹ "Public Works Department is my Enemy Number 2", ಎಂದು ಹೇಳಿದ್ದಾರೆ. ಅದು ಬಹಳ

ನಿಜವಾದದ್ದು. ಖರ್ಚುಮಾಡುವುದು ಒಂದು ರೂಪದಲ್ಲಿ ಸದ್ವಿನಿಯೋಗವಾಗಬೇಕು ಎಂದು ಹಾಗೆ ಹೇಳಿದ್ದಾರೆ. ಅದು ಅನೇಕ ಕಡೆ ಸದ್ವಿನಿಯೋಗವಾಗುವುದಿಲ್ಲವೆಂಬ ದೂರು ನನಗೆ ನಾನಾ ರೀತಿಯಲ್ಲಿ ಗೊತ್ತಿದೆ. ಇಂಥಕಡೆ ಬಹಳ ನಿರ್ದಾಕ್ಷಿಣ್ಯವಾಗಿ ಮಂತ್ರಿಗಳು ಖೋತಾ ಮಾಡಬೇಕು ಎಂದು ಸೂಚಿಸುತ್ತೇನೆ. ಎರಡನೆಯದಾಗಿ ವ್ಯವಸಾಯದ ಇಲಾಖೆಯನ್ನು ವಜಾಮಾಡಿ, ಯಾರಿಗೂ ಅದರಿಂದ ದುಃಖವಾಗುವುದಿಲ್ಲ ಎಂದು ಅನೇಕ ಮಿತ್ರರು ಹೇಳುತ್ತಿದ್ದಾರೆ. ನಾನೂ ಸಹ ನೋಡಿರುವಂತೆ ವ್ಯವಸಾಯದ ಬಾಬಿಗೆ ಹಣ ಹೇರಳವಾಗಿ ಖರ್ಚಾಗುತ್ತಿದೆ. ಆ ಖರ್ಚಿಗೂ ಮಾಡುವ ಕೆಲಸಕ್ಕೂ ಸಂಬಂಧವೇ ಇರುವುದಿಲ್ಲ. ಯಾರನ್ನು ಕೇಳಿದರೂ ಒಬ್ಬ ಇನ್ಸ್ಪೆಕ್ಟರೂ ಒಂದು ಊರಿಗೂ ಹೋಗುವುದಿಲ್ಲ, ಒಂದು ಕಡೆಯೂ ರೈತರಿಗೆ ಸಹಾಯ ಮಾಡುತ್ತಿಲ್ಲ ಎಂದು ದೂರುತ್ತಾರೆ. ಅದನ್ನು ಈಗ ನಾಲ್ಕು ವರ್ಷಗಳಿಂದ ಸರಿಪಡಿಸಬೇಕೆಂದು ನಾವು ಏಕಕಂಠದಿಂದ ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಏಕೆಂದರೆ ಅದೇನೋ ಅಧಿಕಾರಿಗಳಿಗೂ ಜನರಿಗೆ ಸಹಾಯ ಮಾಡಬೇಕೆಂಬ ಮನೋಭಾವ ಬಂದಿಲ್ಲ, ಜನರಿಗೂ ಅವರಿಂದ ಉಪಯೋಗ ಪಡೆಯಬೇಕೆಂಬ ಮನೋಭಾವ ಬಂದಿಲ್ಲ. ಸಾಮಾನ್ಯವಾಗಿ ಇಷ್ಟು ಹೇಳಬಹುದು. ಪ್ರತಿಯೊಂದು ಗ್ರಾಮವನ್ನೂ ನೋಡಿ ಯಾವ್ಯಾವ ಊರಿನಲ್ಲಿ ಎಷ್ಟೆಷ್ಟು ಜಮೀನಿದೆ, ಅದರಲ್ಲಿ ತರಿ ಎಷ್ಟು, ಖುಷ್ಕಿ ಎಷ್ಟು, ಯಾವ ಗೊಬ್ಬರ ಹಾಕಿದರೆ ಅನುಕೂಲ, ಈ ವರ್ಷ ಹೇಗೆ ಬೆಳೆಯಾಯಿತು, ಮುಂದೆ ಸರಿಯಾಗಿ ಆಗದಿದ್ದರೆ ಸರಿಪಡಿಸಲು ಏನು ಮಾಡಬೇಕು ಎಂದು ಪರೀಕ್ಷಿಸಿ ತಕ್ಕ ಕ್ರಮ ಕೈಕೊಳ್ಳಬೇಕು. ಹಾಗೆ ಮಾಡಿದರೆ ಅಂದು ರೈತರಿಗೆ ನಂಬಿಕೆ ಬರುತ್ತದೆ. ಹಾಗೆ ಮಾಡದಿರುವ ಕಾರಣದಿಂದ ಅವರು ಮಾಡುವ ಕೆಲಸಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ನಾವು ಎಷ್ಟು ಹೇಳಿದರೂ ಅದು ಸಮರ್ಪಕವಾಗಿ ನಡೆಯುವ ಹಾಗಿಲ್ಲ. ಆದ್ದರಿಂದ ಅನೇಕ ಬಾಬಿನಲ್ಲಿ ಹಣವನ್ನು ಖೋತಾ ಮಾಡಬಹುದು. ಅದೇ ರೀತಿ ರೆವೆನ್ಯೂ ಇಲಾಖೆಯಲ್ಲೂ ಸಹ ಕೆಲವು ಜನರಿದ್ದಾರೆ. ಅನೇಕ ದೊಡ್ಡದೊಡ್ಡ ನೌಕರರಿದ್ದಾರೆ, ಈಗ ಹೊಸದಾಗಿ ಕೆಲವರು ನೇಮಕವಾಗಿದ್ದಾರೆ. ಅವರಿಗೆ ಸರಿಯಾದ ಕೆಲಸವಿಲ್ಲ ಎಂಬ ದೂರಿದೆ. ಆದ್ದರಿಂದ ನಿರ್ದಾಕ್ಷಿಣ್ಯವಾಗಿ ರೆವೆನ್ಯೂ ಇಲಾಖೆಯಲ್ಲೂ ಸಹ ನೌಕರರನ್ನು ಕಡಿಮೆ ಮಾಡಬೇಕೆಂದು ಸೂಚಿಸುತ್ತೇನೆ. ಸಾಧಾರಣವಾಗಿ ಬಹುಶಃ ಆದಾಯ ವ್ಯಯದ ಚರ್ಚೆಯಲ್ಲಿ ಇದು ಬರಬಹುದು. ಆಗ ಸದಸ್ಯರು ಈ ವಿಚಾರವನ್ನು ಸೂಚಿಸಬಹುದು. ಈಗ ಇಷ್ಟು ಸದಸ್ಯರನ್ನು ಉದ್ದೇಶಿಸಿ ಪ್ರಾರ್ಥನೆ ಮಾಡುವುದೇನೆಂದರೆ: ಸರ್ಕಾರದವರು ಬಹಳ ಕಷ್ಟ ದೆಶೆಯಲ್ಲಿದ್ದಾರೆ, ಅವರಿಗೆ ನಾವು ಒಮ್ಮತದಿಂದ ಬೆಂಬಲ ಕೊಡಬೇಕು. ಶ್ರೀಮನ್ಮಹಾರಾಜರವರು ನಮ್ಮ ಸಹಾನುಭೂತಿಯನ್ನು ತೋರಿಸಿ ಸರ್ಕಾರಕ್ಕೆ ಬೆಂಬಲ ಕೊಡಬೇಕೆಂದು ಹೇಳಿದ್ದಾರೆ. ಇದನ್ನು ಚಾಚೂ ತಪ್ಪದೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಐದನೆಯ ವಿಷಯ ಬಹಳ ಮುಖ್ಯವಾದುದು. ಆಹಾರದ ಹತೋಟಿ ಪದ್ಧತಿಯನ್ನು ಮಾರ್ಪಡಿಸುವ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟು ಕೊನೆಯಲ್ಲಿ ಎಚ್ಚರಿಕೆಯನ್ನೂ ಸಹ ಕೊಟ್ಟಿದ್ದಾರೆ. ಸ್ವಾಮಿ, ಆಹಾರದ ಹತೋಟಿ, ಬಹುಶಃ ಯುದ್ಧ ಕಾಲದಲ್ಲಿ ಆಹಾರದ ಅಭಾವದಿಂದ ಬಂದು ಸುಮಾರು ಹತ್ತಾರು ವರ್ಷಗಳಾದುವು. ಆದರೆ ಜನರೂ ರೈತರೂ ಮತ್ತು ಕೊಳ್ಳುವವರೂ ಸಹ ಹತೋಟಿ ಕಾನೂನಿನಿಂದ ಬಹಳ ಕಷ್ಟ ನಷ್ಟಗಳನ್ನನುಭವಿಸಿ ಅದರ ಕಿರುಕುಳ ಯಾವಾಗ ತಪ್ಪುತ್ತದೆಯೋ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದಾರೆ. ಈ ಸರ್ಕಾರ ಬಂದ ಮೇಲೆ ಬಹಳ ಧೈರ್ಯದಿಂದ ವರ್ತಿಸಿ ಆಹಾರದ ಶಾಸನ ಬದ್ಧವಾದ ಶೇಖರಣೆ ಮತ್ತು ಹಂಚಿಕೆ ತತ್ವವನ್ನು ಬದಲಾವಣೆ ಮಾಡಿ ಬಹಳ ಏರ್ಪಾಡು ಮಾಡಿದ್ದಾರೆ. ಅದರಿಂದ ಜನಗಳಿಗೆ ಎಷ್ಟು ಸಂತೋಷವಾಗಿದೆ ಎಂದರೆ—ನಾನು ಹೇಳಿದರೆ ಅದು ಅಷ್ಟು ಸಮರ್ಪಕವಾಗಿರಲಾರದು—ಹಳ್ಳಿಯ

(ಶ್ರೀ ಎಚ್. ಎಸ್. ರುದ್ರಪ್ಪನವರು.)

ಲ್ಲಿರತಕ್ಕ ರೈತನನ್ನಾಗಲೀ ಅಥವಾ ಕೊಂಡು ತಿನ್ನತಕ್ಕ ಯಾವನಾದರೂ ಒಬ್ಬ ಪ್ರಜೆಯನ್ನಾಗಲೀ ಕೇಳಿದರೆ ಗೊತ್ತಾಗುತ್ತದೆ. ಕ್ಷಾಮ ಪ್ರದೇಶದಲ್ಲಿ ಮಳೆ ಇಲ್ಲದೆ ಕಷ್ಟವನ್ನು ಅನುಭವಿಸಿ ಬಹುಶಃ ಎರಡು ವರ್ಷ ಮೂರು ವರ್ಷ ಆದ ಮೇಲೆ ಮಳೆ ಬಂದರೆ ಜನಗಳಿಗೆ ಎಷ್ಟು ಸಂತೋಷವಾಗುತ್ತದೆಯೋ ಅಷ್ಟು ಸಂತೋಷವಾಗುತ್ತದೆ. ಸರ್ಕಾರದವರು ಏನೇ ತಪ್ಪು ಮಾಡಲಿ ಅವರು ಮಾಡಿದ ತಪ್ಪುಗಳನ್ನೆಲ್ಲಾ ಜನಗಳು ಮನ್ನಿಸಿ ಅವರು ಮಾರ್ಪಡಿಸಿರುವ ಆಹಾರ ನೀತಿಗೆ ಬೆಂಬಲ ಕೊಡುವುದಕ್ಕೆ ತಯಾರಾಗಿದ್ದಾರೆ. ನನಗೆ ಅನ್ನಿಸುತ್ತದೆ, ಅನಿವಾರ್ಯವಾಗಿ ಹಿಂದಿನ ಸರ್ಕಾರದವರು ಮೊದಲು ಈ ನಿರ್ಬಂಧವನ್ನು ಜನಗಳ ಮೇಲೆ ಹೇರಿದ್ದರು. ಮಹಾತ್ಮಾ ಗಾಂಧಿಯವರು ಇದ್ದ ವೇಳೆಯಲ್ಲೂ ಸಹ ಈ ಆಹಾರದ ನೀತಿಯಿಂದ ಉಂಟಾದಂಥ ನೈತಿಕ ಮಟ್ಟ ಕಡಿಮೆಯಾಗಿತ್ತು. ಅದನ್ನು ಸರಿಪಡಿಸುವುದಕ್ಕೆ ಅವರು ತಮ್ಮ ಪ್ರಭಾವವನ್ನು ಬೀರಿ ಇಂಡಿಯಾ ಸರ್ಕಾರವನ್ನು ಹತೋಟಿ ಪದ್ಧತಿಯನ್ನು ತೆಗೆದು ಹಾಕಬೇಕೆಂದು ಒತ್ತಾಯ ಮಾಡಿದುದರ ಪರಿಣಾಮವಾಗಿ 1947ರಲ್ಲಿ ಇದನ್ನು ವಜಾ ಮಾಡಿದರು. ಆದರೆ 6 ತಿಂಗಳ ಒಳಗಾಗಿ ದೇಶದಲಿ ಪುನಃ ಕಂಟ್ರೋಲ್ ಹಾಕ ಬೇಕಾಯಿತು. ಆಗ ಮಹಾತ್ಮಾ ಗಾಂಧಿಯವರು ಇರಲಿಲ್ಲ. ಒಂದು ವೇಳೆ ಅವರು ಇದ್ದಿದ್ದರೆ ಬಹಳ ತೀವ್ರವಾಗಿ ವಿರೋಧಿಸುತ್ತಿದ್ದರು ಎಂದು ಕಾಣುತ್ತದೆ. ಸರ್ಕಾರದವರು ಇನ್ನೂ 6 ತಿಂಗಳು ತಡೆದು ಈ ಧಾನ್ಯ ಸಂಗ್ರಹಣ ಮಾಡಿದ ಧನಿಕರ ಮೇಲೆ ಬಹಳ ಕಠಿಣವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಬಹುಶಃ ಪುನಃ ಈ ಕಾನೂನು ಜಾರಿಗೆ ಬರುತ್ತಾ ಇರಲಿಲ್ಲ ಎಂದು ಕಾಣುತ್ತದೆ. ಆದರೆ ಸರ್ಕಾರ ಹೊಸದಾಗಿ ಬಂದಿದ್ದು ದಿಕ್ಕು ತೋಚದೆ ಈ ಶಾಸನ ಬದ್ಧ ಪಡಿತರ ಪದ್ಧತಿಯನ್ನು ಪುನಃ ಜಾರಿಗೆ ತರಬೇಕಾಯಿತು. ನಮ್ಮ ದೇಶದ ನಾಯಕರಾದ ಜವಹರಲಾಲ್ ನೆಹರುರವರು ಮೊನ್ನೆ ರೇಡಿಯೋದಲ್ಲಿ ಭಾಷಣ ಮಾಡಿದ್ದಾರೆ. ಆಯಾಯಾ ಪ್ರಾಂತಗಳಲ್ಲಿ ಅವರವರ ಧಾನ್ಯಗಳ ಪ್ರಮಾಣವನ್ನು ನೋಡಿಕೊಂಡು ವಿವೇಚನೆಯಿಂದ ನಿರ್ವಹಿಸುವುದಕ್ಕೆ ಅವರಿಗೆ ಬಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಆಯಾಯಾ ಪ್ರಾಂತಗಳವರು ಪೂರ್ಣವಾಗಿ ಹತೋಟಿಯನ್ನು ರದ್ದು ಮಾಡಬಹುದು ಅಥವಾ ಸಡಿಲವಾಗಿಯಾದರೂ ಮಾಡಬಹುದು. ನಮ್ಮ ಮೈಸೂರು ದೇಶದವರು ಪಡಿತರ ಪದ್ಧತಿಯನ್ನು ವಜಾ ಮಾಡಬೇಕೆಂಬ ನೀತಿಯನ್ನು ಹಾಕಿ ಕೊಟ್ಟದ್ದ ನೆರೆ ಪ್ರಾಂತಗಳವರು ಮಾದರಿಯಾಗಿ ಮಾಡಿಕೊಂಡು ಮದರಾಸಿನಲ್ಲಿ ತೆಗೆದರು. ಮೊನ್ನೆ ತಾನೆ ಬಿಹಾರ್‌ನಲ್ಲಿ ಕಂಟ್ರೋಲ್ ಪದ್ಧತಿಯನ್ನು ಪೂರ್ಣವಾಗಿ ವಜಾ ಮಾಡಿದರು. ನಾವು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆದು ಅವರು ಆ ರೀತಿ ಮಾಡಿರುವುದು ಮೈಸೂರಿನವರಿಗೆ ಒಂದು ಹೆಮ್ಮೆ. ಈಗ ನಮಗಿಂತ ಅವರು ಮುಂದೆ ಹೋಗಿದ್ದಾರೆ. ನನಗೆ ಎನ್ನಿಸುತ್ತದೆ, ಸ್ವಲ್ಪ ಧೈರ್ಯದಿಂದ ವರ್ತಿಸಿದರೆ ನಾವೂ ನಮ್ಮ ದೇಶದಲ್ಲಿ ಹತೋಟಿ ತೆಗೆಯಬಹುದು ಎಂದು. ನಮ್ಮ ದೇಶದಲ್ಲಿ ಹೋದ ವರ್ಷ ಈ ಕಾಲದಲ್ಲಿ ಎಷ್ಟು ಆಹಾರ ದಾಸ್ತಾನು ಇತ್ತೋ—ಅಕ್ಕಿ, ರಾಗಿ, ಜೋಳ, ಗೋಧಿ ಇವೆಲ್ಲಾ ಸೇರಿ—ಅದಕ್ಕಿಂತಲೂ ಸ್ವಲ್ಪ ಮಿಗಿಲಾಗಿ ಈಗ ದಾಸ್ತಾನಿದೆ. ಆದ್ದರಿಂದ ಇನ್ನೂ 6 ತಿಂಗಳಿಗಾಗುವಷ್ಟು ಆಹಾರ ದಾಸ್ತಾನು ಇದೆ. ಅಲ್ಲದೆ ಮೊನ್ನೆ ಸಹ ಇಂಡಿಯಾ ಸರ್ಕಾರದ ಆಹಾರ ಮಂತ್ರಿಗಳ ಆಹ್ವಾನದ ಮೇಲೆ ನಮ್ಮ ಆಹಾರ ಮಂತ್ರಿಗಳು ದೆಹಲಿಗೆ ಹೋಗಿದ್ದಾಗ ಈ ವಿಷಯದಲ್ಲಿ ಆಲೋಚನೆ ಮಾಡಿದ್ದಾರೆ. ಈ ವಿಷಯವನ್ನು ಜವಹರ್‌ಲಾಲ್ ನೆಹರುರವರ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಎಂದು ಈ ದಿವಸ ಪತ್ರಿಕೆಯಲ್ಲಿ ಬಂದಿದೆ. ಅವರೂ ಸಹ ಹತೋಟಿ ತೆಗೆಯುವುದನ್ನು ಇವರಿಗೆ ಬಿಟ್ಟಿದ್ದಾರೆ. ನಿಮಗೆ ತೋರಿದ ಹಾಗೆ, ಸೂಕ್ತ ಬಂದಂತೆ ನಿಮ್ಮ ಆಹಾರ ದಾಸ್ತಾನು ನೋಡಿಕೊಂಡು ನೀವೂ ತೆಗೆದು ಹಾಕಿ ಬಿಡಬಹುದು ಅಥವಾ ಮಾರ್ಪಾಡು ಮಾಡಬಹುದು ಎಂದು ಹೇಳಿ

ದ್ದಾರೆ. ಅಲ್ಲದೆ ಇನ್ನೊಂದು ವಿಷಯ ನಮಗೆ ಕಾಣುವುದು ಏನೆಂದರೆ, ಮೈಸೂರಿನಲ್ಲಿ ಅಕ್ಕಿಯ ಅಭಾವ ಯಾವಾಗಲೂ ಇದ್ದೇ ಇದೆ. ಆದರೆ ಮಿಲೆಟ್ಸ್—ರಾಗಿ, ಜೋಳ, ನವಣೆ, ಹಾರಕ ಇವುಗಳ ಅಭಾವವಿಲ್ಲ. ಹತೋಟಿ ಬರುವುದಕ್ಕೆ ಮುಂಚೆ ನಮ್ಮ ದೇಶದಿಂದ ಹೊರಗೆ 3,4,5 ಲಕ್ಷದವರೆಗೂ ಕಳುಹಿಸುತ್ತಾ ಇದ್ದೆವು. ಅದು ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಈ ಹೊತ್ತು ನಮ್ಮ ದೇಶಕ್ಕೆ ಆಗುವಷ್ಟು ಜೋಳ, ರಾಗಿ ಇದೆ. ಅದ್ದರಿಂದ ಸರ್ಕಾರ ದವರು ಪೂರ್ಣವಾಗಿ ಹತೋಟಿ ತೆಗೆಯದೇ ಇದ್ದರೂ ಸಹ ರಾಗಿ. ಜೋಳ, ನವಣೆ, ಹಾರಕ ಮುಂತಾದ ಪದಾರ್ಥಗಳಿಗೆ ಹತೋಟಿಯನ್ನು ತೆಗೆಯುವುದರ ಮೂಲಕ ಜನಗಳಿಗೆ ಬಹಳ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ ಎಂದು ಹೇಳಿ ವಿನಯದಿಂದ ಪ್ರಾರ್ಥನೆ ಮಾಡು ತ್ತೇನೆ; ಹತೋಟಿ ವಜಾ ಮಾಡುವುದರ ಉದ್ದೇಶವೇನೆಂದರೆ ದೇಶದಲ್ಲಿ ಬೆಳೆಯತಕ್ಕವ ರಿಗೆ ಹೆಚ್ಚು ಪ್ರೋತ್ಸಾಹ ದೊರೆತು, ದೇಶದಲ್ಲಿ ಹೆಚ್ಚು ಆಹಾರ ಬೆಳೆಯಲು ಸಹಾಯವಾಗು ತ್ತದೆ ಎಂದು ಅವರಿಗೆ ಇರತಕ್ಕ ಕಿರುಕುಳ ಯಾರಿಗೂ ಇಲ್ಲ. ರೈತರಾಗಿ ಏಕೆ ಹುಟ್ಟಿದೆವೋ ಏನುಪಾಪ ಮಾಡಿ ಹುಟ್ಟಿದೆವೋ ಎಂದು ದಿವ ಸವೂ ಅವರು ಶಪಿಸುತ್ತಾರೆ. ಅಧಿಕಾರಿಗಳನ್ನು ನೋಡುವುದಕ್ಕೆ ಭಯಪಡುತ್ತಾರೆ ಆದ್ದರಿಂದ ನನಗೆ ಎನ್ನಿಸುತ್ತದೆ, ಈಗ ಹತೋಟಿಯನ್ನು ತೆಗೆದರೆ ಈ ಕಾಲದಲ್ಲಿ ಅವರಿಗೆ ಹೆಚ್ಚಾಗಿ ಬೆಳೆದು ಹೆಚ್ಚು ಆಹಾರವನ್ನು ಒದಗಿಸಲು ಅನು ಕೂಲವಾಗುತ್ತದೆ ಎಂದು. ಸರ್ಕಾರದವರು ಈ ವಿಷಯದಲ್ಲಿ ಮನಸ್ಸು ಮಾಡುತ್ತಾರೆ ಎಂದು ನಂಬಿದ್ದೇನೆ.

ಶ್ರೀಮನ್ಮಹಾರಾಜರವರು ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಅದಕ್ಕೆ ಸಹ ನಾವು ಸಂತೋಷ ಪಡಬೇಕು. ದೇಶದಲ್ಲಿ ಕಂಟ್ರೋಲ್ ವಜಾ ಮಾಡಿದ ತಕ್ಷಣ ಸಮಾಜ ಘಾತುಕ ವ್ಯಕ್ತಿಗಳು ಯಾರಿದ್ದಾರೋ ಅವರು ಧಾನ್ಯ ಸಂಗ್ರಹಿಸಿ, ದೇಶದಲ್ಲಿ ಕೃತಕ ಆಹಾರ ಅಭಾವ ವನ್ನುಂಟು ಮಾಡಿ ಪುನಃ ಹೆಚ್ಚು ಹೆಚ್ಚು ಲಾಭ ಪಡೆಯುವುದಕ್ಕೆ ಪ್ರಯತ್ನ ಮಾಡಬಹುದು, ಆದ್ದರಿಂದ ಸೂಕ್ಷ್ಮವಾಗಿ ಬಹಳ ಜಾಗರೂಕತೆ ಯಿಂದ ಇರಬೇಕು ಎಂದು ಸೂಚನೆ ಮಾಡಿ ದ್ದಾರೆ. ಅದು ನಿಜವಾದ ವಿಷಯ. 1947ರಲ್ಲಿ ಈ ರೀತಿ ಆಗಿದೆ. ಸಕ್ಕರೆ ಮತ್ತು ಅನೇಕ ಪದಾರ್ಥಗಳ ಮೇಲೆ ಕಂಟ್ರೋಲ್ ವಜಾ ಮಾಡಿದಾಗ ದೇಶದಲ್ಲಿ ದಾಸ್ತಾನು ಇದ್ದರೂ ಸಹ ಧನಿಕರು ಯಥೇಚ್ಛವಾಗಿ ಕೊಂಡು ದಾಸ್ತಾನು ಮಾಡಿ ಅಭಾವವನ್ನುಂಟು ಮಾಡಿ ದರು. ಆದ್ದರಿಂದ ಈ ವಿಷಯದಲ್ಲಿ ಎಚ್ಚರಿಕೆ ಯಿಂದ ಇರುವುದು ಒಳ್ಳೆಯದು. ಸರ್ಕಾರದವರು ಈ ವಿಷಯದಲ್ಲಿ ಏನೇ ಕಾನೂನು ಮಾಡಲಿ, ನಮ್ಮ ಸದಸ್ಯರ ಪರವಾಗಿ ನಾನು ಹೇಳುತ್ತೇನೆ ಖಂಡಿತವಾಗಿಯೂ ಅವರಿಗೆ ಎಲ್ಲಾ ಸದಸ್ಯರ ಬೆಂಬಲ ಇದೆ. ಸಮಾಜ ಘಾತುಕ ವ್ಯಕ್ತಿ ಗಳಿದ್ದರೆ ಅವರ ಮೇಲೆ ಯಾವ ಕಾರ್ಯಕ್ರಮ ವನ್ನಾದರೂ ತೆಗೆದುಕೊಳ್ಳಲು ಹಿಂಜರಿಯದೆ, ಬಹಳ ಉಗ್ರವಾದ ಶಿಕ್ಷೆಯನ್ನು ಕೊಡಬೇಕು. ಆ ರೀತಿ ಮಾಡಿದರೆ ತಪ್ಪಾಗಲಾರದು. ಆ ರೀತಿ ಧನಿಕರನ್ನು ಮತ್ತು ಹೆಚ್ಚು ಲಾಭ ಬಡಕರನ್ನು ಹೆದರಿಸದೆ ಇದ್ದರೆ ದೇಶದಲ್ಲಿ ಪ್ರಜಾಪ್ರಭು ತ್ವಕ್ಕೆ ಧಕ್ಕೆ ಉಂಟಾಗುತ್ತದೆ.

ಆ ಮೇಲೆ ಆರನೆಯ ವಿಚಾರ, ಒಂದು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ ನಮ್ಮ ದೇಶದಲ್ಲಿ ಈಗ 2-3 ವರ್ಷಗಳಿಂದ ಮಳೆ ಬೆಳೆ ಯಿಲ್ಲದೆ ಕೆಲವು ಪ್ರಾಂತದ ಜನರು ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ನಾವು ಹೆಚ್ಚು ಸಹಾಯವನ್ನು ಮಾಡಬೇಕು ಎಂಬುದಾಗಿ ಹೇಳಿದ್ದಾರೆ. ನನಗೆ ಎನ್ನಿಸುತ್ತದೆ ನಮ್ಮ ಸರ್ಕಾರದವರು ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಈಗಾಗಲೇ ಹೇಳಿರುವ ಹಾಗೆ ಹಣ ವನ್ನು ಖರ್ಚು ಮಾಡಿದ್ದಾರೆ. ಅಂಕಿ ಸಂಖ್ಯೆ ಯನ್ನು ಕೊಡುವುದಾದರೆ 1951-52ರಲ್ಲಿ ಕೋಲಾರ ಡಿಸ್ಟ್ರಿಕ್ಟಿಗೆ ರೂ. 75,980-3-1, ತುಮಕೂರು ಡಿಸ್ಟ್ರಿಕ್ಟಿಗೆ ರೂ. 3,165-4-0, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ರೂ. 15,519-2-1, ಇಷ್ಟನ್ನು ಸರ್ಕಾರದವರು ಖರ್ಚು ಮಾಡಿ ಜನಗಳಿಗೆ ಸಹಾಯ ಮಾಡಿದ್ದಾರೆ. ಅಲ್ಲದೆ

(ಶ್ರೀ ಎಚ್. ಎಸ್. ರುದ್ರಪ್ಪನವರು.)
1952-53ರಲ್ಲಿ ಕೋಲಾರ ಡಿಸ್ಟ್ರಿಕ್ಟಿಗೆ ರೂ. 3,42,000 ತುಮಕೂರು ಡಿಸ್ಟ್ರಿಕ್ಟಿಗೆ ರೂ. 52,875 ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ರೂ. 31,107-5-0 ಈ ರೀತಿ ಒಟ್ಟು ರೂ. 4,25,983-3-0 ಖರ್ಚು ಮಾಡಿ ಅನೇಕ ವಿಧದಲ್ಲಿ ಸಹಾಯಮಾಡಿದ್ದಾರೆ. ನಮ್ಮ ಸ್ನೇಹಿತರು ಇದು ಬಹಳ ಹಳೆಯದು, ಹಿಂದಿನ ಲೆಕ್ಕ ಎಂದು ಹೇಳುತ್ತಾರೆ; ಇರಬಹುದು. ಈಚೆಗೆ ಸರ್ಕಾರದವರು ಇನ್ನೂ ಹೆಚ್ಚು ಹಣ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದಕ್ಕಾಗಿ ಬಹಳವಾಗಿ ಅವರಿಗೆ ವಂದನೆಗಳನ್ನು ಅರ್ಪಿಸಬೇಕಾಗಿದೆ. ಇಷ್ಟೇ ಅಲ್ಲದೆ ಹುಲ್ಲನ್ನು ಸಹ ಸಹಾಯವಾಗಿ ಕೊಟ್ಟಿದ್ದಾರೆ. ಕೋಲಾರಕ್ಕೆ 792 ಟನ್, ತುಮಕೂರಿಗೆ 219 ಟನ್, ಚಿತ್ರದುರ್ಗಕ್ಕೆ 76ಟನ್ ಒದಗಿಸಿದ್ದಾರೆ. ಕೋಲಾರ ಜಿಲ್ಲೆ ದುರ್ಭಿಕ್ಷ ಪ್ರದೇಶ ಎಂದು ಹೇಳಿ ವ್ಯವಸಾಯಗಾರರಿಗೆಅನೇಕವಿಧದಲ್ಲಿ ಸಹಾಯ ಮಾಡಿದ್ದಾರೆ.

2 P.M.

ತಕಾವಿ ಸಾಲಗಳಿಗಾಗಿ ಎರಡು ಲಕ್ಷ ರೂಪಾಯಿಗಳನ್ನೂ, ಬಾವಿಗಳನ್ನು ತೆಗೆಯಿಸುವುದಕ್ಕಾಗಿ ಸಬ್ಸಿಡಿ ರೂಪದಲ್ಲಿ ಎರಡು ಲಕ್ಷ ರೂಪಾಯಿಗಳನ್ನೂ, ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲಗಳಿಗೆಂದು ಒಂದು ಲಕ್ಷರೂಪಾಯಿಗಳನ್ನೂ ಕೊಟ್ಟಿದ್ದಾರೆ. ಇದು ಸಾಕೆಂದು ನಾನು ಹೇಳುವುದಿಲ್ಲ; ಇನ್ನೂ ಸರ್ಕಾರದವರು ಕೊಡಬೇಕಾದ್ದಿದೆ. ಮಹಾರಾಜರವರೇ ಹೇಳಿದ್ದಾರೆ, ಎಷ್ಟು ಬೇಕಾದರೂ ಸರ್ಕಾರದವರು ಕೊಟ್ಟು ಅವರಿಗೆ ಸಹಾಯ ಮಾಡಿ ಅವರ ಕಷ್ಟವನ್ನು ಪರಿಹರಿಸುತ್ತಾರೆಂದು. ಆದರೆ ಒಂದು ವಿಷಯ ಪ್ರಸ್ತಾಪಮಾಡಬೇಕು. ಸಾರ್ವಜನಿಕರು ಈ ವಿಷಯವಾಗಿ ಹೆಚ್ಚಿನ ಗಮನಕೊಟ್ಟಿಲ್ಲವೆಂದು ಹೇಳಬೇಕು. ಬೀಹಾರ್, ಅಸ್ಸಾಂ, ಪ್ರಾಂತಗಳಲ್ಲಿ ಕ್ಷೋಭೆ ಉಂಟಾದಾಗ ನಮ್ಮ ದೇಶದವರು ಮುಂದೆ ಬಂದು ಎಷ್ಟೋಮಟ್ಟಿಗೆ ಸಹಾಯ ಮಾಡಿ ಪುಣ್ಯಗಳಿಸಿದರು. ಆದರೆ, ಅದೇ ನಮ್ಮ ದೇಶದಲ್ಲಿ ಕ್ಷೋಭೆ ಬಂದಾಗ ಆ ರೀತಿಯಲ್ಲಿ ಪರಿಹಾರ ಕಾರ್ಯವನ್ನೇನನ್ನೂ ಕೈಕೊಂಡಿಲ್ಲವೆಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಮೊನ್ನೆ ಮೈಸೂರು ಪ್ರಾಂತೀಯ ಕಾಂಗ್ರೆಸ್ ಕಮಿಟಿ ಸೇರಿದಾಗಲೂ ಕೂಡ ಈ ವಿಷಯವನ್ನು ಚರ್ಚೆ ಮಾಡಿ ಇಂಡಿಯಾ ಸರ್ಕಾರದವರು ಸೂಕ್ತವಾದ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

Sri K. HANUMANTHAIYA (Chief Minister).—Sir, when the Hon'ble Member is making reference to the scarcity canditions in some parts of the State, I seek your permission to give the House a very happy information. The Prime Minister of India has sent another Rs. 30,000 from the 'Prime Minister's Food Relief Fund' for the relief of these distress areas. This is the second contribution. First he gave us Rs. 20,000. Just now I have received a letter and a cheque for Rs. 30,000. (Cheers)

Sri K. PATTABHIRAMAN (Kolar).—Is it an evidence of more to come?

Sri K. HANUMANTHAIYA.—I hope so.

ಶ್ರೀ ಎಚ್. ಎಸ್. ರುದ್ರಪ್ಪನವರು.—ಈ ಸಹಾಯಕ್ಕಾಗಿ ನಾವು ನಮ್ಮ ನಾಯಕರಿಗೂ, ಮತ್ತು ಜವಾಹರಲಾಲ್‌ರವರಿಗೂ ತುಂಬ ಕೃತಜ್ಞರಾಗಿದ್ದೇವೆ. ಆದರೂ ಅದೂ ಸಾಲದು; ಸಾಲದು ಎಂದು ಮತ್ತೊಮ್ಮೆ ಹೇಳದೆ ವಿಧಿಯಿಲ್ಲ. ಅವರು ಮದ್ರಾಸ್ ಪ್ರಾಂತದ ವಿಷಯದಲ್ಲಿ ಹೇರಳವಾಗಿ ಖರ್ಚು ಮಾಡಿದ್ದಾರೆ. ನಮ್ಮ ಪ್ರಾಂತದಲ್ಲಿಯೂ ಇನ್ನೂ ಹೆಚ್ಚಿನ ಖರ್ಚು ಮಾಡಬೇಕಾದ ಆವಶ್ಯಕತೆಯಿದೆಯೆಂದು ನಾನು ಹೇಳುತ್ತೇನೆ.

ಅಲ್ಲದೆ, ಇನ್ನೊಂದು ಹೆಚ್ಚಿನ ವಿಷಯವೇನೆಂದರೆ, ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರೂ ಸಹ ಈ ಪ್ರದೇಶವನ್ನು ಖುದ್ದು ಪರಿಶೀಲಿಸಿ ನೋಡಬೇಕೆಂದು ಹೇಳಿ ಪ್ರವಾಸವನ್ನು ಕೈಕೊಳ್ಳಲಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಮಗೆಲ್ಲರಿಗೂ ಬಹಳ ಸಂತೋಷವನ್ನುಂಟು ಮಾಡಿದೆ. ಇಷ್ಟೇ ಅಲ್ಲದೆ ತಮ್ಮ ಸ್ವಂತ ಹಣದಿಂದ 30,000 ರೂಪಾಯಿಗಳನ್ನು ಉದಾರವಾಗಿ ಇದಕ್ಕಾಗಿ ಖರ್ಚು ಮಾಡಿದ್ದಾರೆ. ಈ ಸಭೆಯ ಪರವಾಗಿ

ನಾನು ನಮ್ಮ ಕೃತಜ್ಞತಾ ಪೂರ್ವಕವಾದ ವಂದನ್ನೆಗಳನ್ನು ಅವರಿಗೆ ಅರ್ಪಿಸುತ್ತೇನೆ.

ರಾಜಪ್ರಮುಖರವರು ಇನ್ನೂ ಒಂದೆರಡು ವಿಷಯಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಿನ ವಿದ್ಯಾಭ್ಯಾಸದ ವಿಚಾರದಲ್ಲಿ ಸುಧಾರಣೆಗಳನ್ನು ಮಾಡಬೇಕಾದ್ದು ಅಗತ್ಯವೆಂದು ಸೂಚನೆಯಿತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದುದು. ಅದರ ಆವಶ್ಯಕತೆಯನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ನಾವೀಗ ಕೊಡುತ್ತಿರುವ ವಿದ್ಯೆ ನಮ್ಮ ಹುಡುಗರಿಗೆ ಯಾವ ರೀತಿಯಲ್ಲಿಯೂ ಉಪಯೋಗವಾಗದೆ ಹೋಗಿದೆ. ಹೊಟ್ಟೆ ಬಟ್ಟೆಗೆ ಸಂಪಾದನೆ ಮಾಡಿಕೊಳ್ಳುವ ಕ್ರಮವೇ ಅವರಿಗೆ ಗೊತ್ತಾಗುತ್ತಿಲ್ಲ. ನಾವು ತಯಾರು ಮಾಡುವ ವಿದ್ಯಾರ್ಥಿಗಳಿಗೆ ಶ್ರಮ ಜೀವನದ ಅಭ್ಯಾಸವಿಲ್ಲದೆ ಕೇವಲ ಸರ್ಕಾರಿ ನೌಕರಿ ಹುಡುಕಿಕೊಂಡು ಅವರು ಹೋಗ ಬೇಕಾಗಿದೆ. ನಮ್ಮ ವಿದ್ಯಾರ್ಥಿಗಳು ಯಾವ ರೀತಿಯಿದ್ದಾರೆಂದರೆ, ಬರಡಾದ ಹಸುಗಳಂತೆ. ತಿರುವಾಂಕೂರು, ಕೊಚ್ಚಿ ಸಂಸ್ಥಾನಗಳಲ್ಲಿ ಇಂದು ಕಾಣತಕ್ಕ ಸಮಸ್ಯೆಗೆ ಬಹುಶಃ ಇದೇ ಕಾರಣವೆಂದು ನನಗೆ ತೋರುತ್ತದೆ. ಅಲ್ಲಿ ವಿದ್ಯಾಭ್ಯಾಸ ಬೇಕಾದಷ್ಟು ಮುಂದುವರಿದಿದೆ. ಆದರೆ ಜನರು ಯಾವ ಜೀವನೋಪಾಯವನ್ನೂ ಕಾಣದವರಾಗಿದ್ದಾರೆ. ಹೀಗಾಗಿ ಅಲ್ಲಿನ ರಾಜಕೀಯ ಪಕ್ಷದಲ್ಲಿ ಬಹಳ ಮಟ್ಟಿನ ತೊಡಕುಗಳಿದ್ದಿವೆ. ಅನೇಕ ಹೊಸ ಸಮಸ್ಯೆಗಳು ಉದ್ಭವಿಸಿವೆ. ಆದ್ದರಿಂದ ನಮ್ಮ ಸರ್ಕಾರದವರು ಈ ವಿಷಯದಲ್ಲಿ ಸೂಕ್ತ ಸುಧಾರಣೆಗಳನ್ನು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ವಿಷಯ. ಈಗ ನಮ್ಮ ದೇಶ ಕೈಗಾರಿಕೆಗಳಲ್ಲಿ ಬಹಳ ಮುಂದುವರಿದಿದೆ; ಮಾದರಿಯಾಗಿದೆಯೆಂದು ಹೆಸರು ಪಡೆದಿದೆ. ನಮ್ಮ ಸರ್ಕಾರದವರು ಸುಮಾರು 10 ಕೋಟಿ ರೂಪಾಯಿಗಳನ್ನು ಈ ಕೈಗಾರಿಕೆಗಳಿಗಾಗಿ ಹಾಕಿ ಅನೇಕ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೂ ನಮಗೆ ದೂರುಗಳು ಕೇಳಿ ಬರುತ್ತಿವೆ, ಅವು ಹೆಚ್ಚು ಲಾಭದಾಯಕವಾಗಿಲ್ಲ, ನಾವು ಹಾಕಿದ ಹಣಕ್ಕೆ ಸರಿಯಾದ ಉತ್ಪತ್ತಿ ಬರುತ್ತಿಲ್ಲ ಎಂದು. ಈ ವಿಷಯ ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದು ಸರ್ಕಾರದವರು ಈಗತಾನೆ ಅಪ್ಪಣೆ ಕೊಡಿಸಿದ್ದಾರೆ. ಇದಕ್ಕಾಗಿ ತಕ್ಕ ಮಾರ್ಪಾಟು ಮಾಡಿ ಅವುಗಳೆಲ್ಲಾ ಯಶಸ್ವಿಯಾಗಿ ಲಾಭದಾಯಕವಾಗಿ ನಡೆಯತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಹೇಳುತ್ತೇನೆ. ಸದ್ಯಕ್ಕೇನೂ ಈ ಡೈರೆಕ್ಟೇರೇಟ್ ಯಾವ ರೀತಿಯಿರುತ್ತದೆ, ಅದರ ರೂಪರೇಷೆಗಳೇನು ಎಂಬುದು ಗೊತ್ತಾಗಿಲ್ಲ. It is advisedly vague ಎಂದು ಕಾಣುತ್ತದೆ. ಬಹುಶಃ ಯಾವ ಕ್ರಮವನ್ನು ಕೈಗೊಳ್ಳಬೇಕೆಂದು ಅವರಿನ್ನೂ ನಿರ್ಧರಿಸಿಲ್ಲವೆಂದು ಹೇಳಬಹುದು. ಅಂತೂ ಯಾವುದಾದರೂ ಸರಿಯಾದ ಕಾರ್ಯಕ್ರಮವನ್ನು ಕೈಕೊಂಡು ಜಾಗ್ರತೆಯಾಗಿ ಕೆಲಸಕಾರ್ಯಗಳನ್ನು ನಡೆಯಿಸುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ಶ್ರೀಮನ್ಮಹಾರಾಜರವರು ಈ ಅಧಿವೇಶನದಲ್ಲಿ ನಡೆಯತಕ್ಕ ಕಾರ್ಯಕಲಾಪಗಳ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಸುಮಾರು 15 ಮಸೂದೆಗಳು ಈ ವಿಧಾನ ಸಭೆಯಲ್ಲಿ ನಮ್ಮ ಒಪ್ಪಿಗೆಯ ಬಗ್ಗೆ ಬರುತ್ತವೆಂದು ಹೇಳಿದ್ದಾರೆ. ಅನೇಕವು ಉಪಯುಕ್ತವಾದ ಮಸೂದೆಗಳು. ಕೆಲವು ಸಾಮಾಜಿಕ ಸುಧಾರಣೆಗಳು, ಇನ್ನು ಕೆಲವು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟವು. ಕೆಲವು ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟವು. ಆಯಾ ವಿಷಯಗಳು ಚರ್ಚೆಗೆ ಬಂದಾಗ್ಗೆ ಅವುಗಳ ವಿಚಾರ ಹೇಳಬಹುದು. ತಾವೆಲ್ಲರೂ ಅವುಗಳಿಗೆ ಒಪ್ಪಿಗೆ ಕೊಡುತ್ತೀರೆಂದು ನಾನು ನಂಬಿದ್ದೇನೆ.

ಕೊನೆಯಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಒಂದು ಮಾತು ಹೇಳಿದ್ದಾರೆ, "ನಮ್ಮ ಸಂಸ್ಥಾನದ ಪ್ರತಿನಿಧಿಗಳಾಗಿ ಈ ವಿಧಾನಮಂಡಲದ ಸಭೆಗಳಿಗೆ ಆರಿಸಲ್ಪಟ್ಟ ಸದಸ್ಯರಾಗಿರುವ ಸುಯೋಗವನ್ನು ನೀವು ಪಡೆದಿದ್ದೀರಿ. ಸಂಸ್ಥಾನವು ಇತೋಪ್ಯಧಿಕವಾಗಿ ಪ್ರಗತಿಹೊಂದುವಂತೆ ಮಾಡುವ ಗುರುತರವಾದ ಜವಾಬ್ದಾರಿಯು ನಿಮ್ಮ ಮೇಲಿರುತ್ತದೆ. ಆ ಜವಾಬ್ದಾರಿಯನ್ನು

(ಶ್ರೀ ಎಚ್. ಎಸ್. ರುದ್ರಪ್ಪನವರು.)

ನೀವುಗಳು ವಿವೇಕದಿಂದಲೂ, ಸಾಮರ್ಥ್ಯದಿಂದಲೂ ಮತ್ತು ಪ್ರಾಮಾಣಿಕತೆಯಿಂದಲೂ ನಿರ್ವಹಿಸಿ ಚರಿತಾರ್ಥರಾಗುವಿರೆಂದು ನಾವು ನಂಬಿದ್ದೇವೆ'' ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ನಮ್ಮ ಮೇಲಿರುವ ಗುರುತರ ಜವಾಬ್ದಾರಿ. ನಾನು ಮೊದಲೇ ಹೇಳಿದ ಹಾಗೆ ಪ್ರಜಾಪ್ರಭುತ್ವದಲ್ಲಿ ನಾವೆಲ್ಲರೂ ಹೆಚ್ಚಿನ ನಂಬಿಕೆಯಿಟ್ಟುಕೊಂಡಿದ್ದೇವೆ. ನಾವುಗಳು ಇತರ ಪ್ರಾಂತಗಳಿಗೆ ಮಾದರಿಯಾಗಿರುವಂತೆ ಹೆಚ್ಚಿನ ಜವಾಬ್ದಾರಿಯಿಂದ ನಡೆದುಕೊಂಡು ದೇಶಕ್ಕೆ ಅನುಕೂಲವಾಗುವಂತೆ ಮಾಡುವುದಲ್ಲದೆ ನಮ್ಮ ದೇಶದ ಕೀರ್ತಿಯನ್ನು ಮತ್ತು ಪ್ರತಿಷ್ಠೆಯನ್ನು ಎತ್ತಿ ಹಿಡಿಯುತ್ತೇವೆಂದು ಮಹಾಸ್ವಾಮಿಯವರಿಗೆ ಭರವಸೆ ನೀಡುವುದಲ್ಲದೆ ಅವರು ನಿನ್ನೆ ದಿವಸ ಮಾಡಿದ ಭಾಷಣಕ್ಕಾಗಿ ಮತ್ತೊಮ್ಮೆ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸಲು ಅಪ್ಪಣೆ ಬೇಡುತ್ತೇನೆ.

Mr. SPEAKER.—Motion moved.—

"That an Address be presented to His Highness the Maharaja in the following terms :—

"May it please Your Highness,

We the Members of the Mysore Legislative Assembly assembled in this session beg leave to thank Your Highness for the Address delivered to the Members of both Houses of the Legislature."

I think the House will agree that there shall be general discussion on the Address today. We have received a number of amendments and they may be taken up tomorrow. I call upon Sri K. V. Shankara Gowda to speak.

Janab J. MOHAMED IMAM.—A Member has a right to speak today and tomorrow also.

Mr. SPEAKER.—Every Member has a right to speak on both occasions and it is left to the Members to adjust their speeches so that those who would speak today need not speak tomorrow. That would be desirable. But it is left to them.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಸ್ವಾಮಿ, ಮಾನ್ಯ ಸದಸ್ಯರು ಈ ಸಭೆಯ ಮುಂದೆ ತಂದಿರತಕ್ಕ ವಂದನಾರ್ಪಣ ಸೂಚನೆಯನ್ನು ನಾನು ತುಂಬಾ ಸಂತೋಷದಿಂದ ಅನುಮೋದಿಸುತ್ತೇನೆ. ಶ್ರೀಮನ್ಮಹಾರಾಜರವರ ಭಾಷಣ ತೀರಾ ಪುಟ್ಟ ಭಾಷಣವಾದರೂ ಸಮಯೋಚಿತವಾಗಿದೆ ಮತ್ತು ಅರ್ಥಗರ್ಭಿತವಾಗಿದೆ ; ಅಲ್ಲದೆ ಅನೇಕ ಉತ್ತಮವಾದ ವಿಷಯಗಳನ್ನೊಳಗೊಂಡಿದೆ. ಈಗತಾನೇ ಈ ಸೂಚನೆಯನ್ನು ಸಭೆಯ ಮುಂದಿಟ್ಟ ಮಾನ್ಯ ಸದಸ್ಯರು ಭಾಷಣದ ಪ್ರತಿಯೊಂದಂಶವನ್ನೂ ಕೂಲಂಕಷವಾಗಿ ವಿಶದೀಕರಿಸಿರುವುದರಿಂದ ನಾನು ಉದ್ದವಾದ ಭಾಷಣಮಾಡುವುದರಲ್ಲಿ ಔಚಿತ್ಯವಿರಲಾರದೆಂದು ಭಾವಿಸಿ ಕೇವಲ ಒಂದೆರಡು ವಿಷಯಗಳನ್ನು ಹೇಳಿ ಮುಗಿಸುತ್ತೇನೆ.

ಮೊದಲನೆಯದಾಗಿ, ಶ್ರೀಮನ್ಮಹಾರಾಜರು ದಯಪಾಲಿಸಿರುವ ಭಾಷಣದಲ್ಲಿ, ಹೊಸದಾಗಿ ಚುನಾಯಿತರಾಗಿ ಬಂದಿರತಕ್ಕ ನಮಗೆ ಒಂದು ಬುದ್ಧಿವಾದ ಅಥವಾ ಹಿತವಚನವನ್ನು ಇತ್ತಿದ್ದಾರೆ. ಇದಕ್ಕೆ ಶ್ರೀಮನ್ಮಹಾರಾಜರು ಅಭಿನಂದನೀಯರು. ನಾವು ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಅವರಿಗೆ ಅರ್ಪಿಸಬೇಕಾಗಿದೆ. ಇದಲ್ಲದೆ, ಇಂಡಿಯಾ ಶಾಸನ ಸಭೆಗಳಲ್ಲಿ ಪಕ್ಷಗಳೂ ಪ್ರತಿಪಕ್ಷಗಳೂ ಇರುವುದು ಸ್ವಾಭಾವಿಕ. ಹೀಗೆ ಅನೇಕ ಜನ ಸದಸ್ಯರಿಂದ ಕೂಡಿರತಕ್ಕ ಸಭೆಯಲ್ಲಿ ಸದಸ್ಯರಲ್ಲಿ ಪರಸ್ಪರ ಸಹವರ್ತನೆ, ಸೌಹಾರ್ದ ಮತ್ತು ಸೋದರಭಾವ ಇರಬೇಕಾದುದು ಅತ್ಯಗತ್ಯ. ಶ್ರೀಮನ್ಮಹಾರಾಜರು ಪಕ್ಷ ಪ್ರತಿಪಕ್ಷಗಳಲ್ಲಿ ಸಾಮರಸ್ಯವಿರಬೇಕೆಂಬುದಾಗಿ ಅಪ್ಪಣೆಕೊಡಿಸಿ ಇವುಗಳಲ್ಲಿ ಸೌಹಾರ್ದ, ಸಹೋದರಭಾವ ಬೆಳೆದುಕೊಂಡು ಬರಬೇಕು ಈ ಮೂಲಕ ಈ ಸಭೆಗಳ ಮುಂದೆ ಬರತಕ್ಕ ವಿಧಾನಮಂಡಲಗಳಿಗೆ ಆದರ್ಶ ಅಥವಾ ಮಾದರಿಯಾಗಿರಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಉನ್ನತಮಟ್ಟದಲ್ಲಿ ನಮ್ಮ ಕೆಲಸಕಾರ್ಯಗಳನ್ನು ನಡೆಸಿ ನಾವು ದೇಶಕ್ಕೆ ಕೀರ್ತಿಯನ್ನು ತರುವಂತೆ

ಮಾಡಬೇಕು. ಇದಕ್ಕಾಗಿ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಶ್ರೀಮನ್ಮಹಾರಾಜರವರಿಗೆ ಸಮರ್ಪಿಸುತ್ತೇನೆ.

ಇನ್ನು ಶ್ರೀಮನ್ಮಹಾರಾಜರವರು ದಯಪಾಲಿಸಿರುವ ಭಾಷಣದಲ್ಲಿರುವ ಎಲ್ಲಾ ವಿಷಯಗಳನ್ನೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಬಹಳ ಮುಖ್ಯವಾದ ವಿಷಯ್ಯಗಳು ಎರಡುಮೂರಿವೆ. ಆ ವಿಷಯಗಳಲ್ಲಿ ಕೆಲವು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ. ಮೊದಲನೆಯ ವಿಷಯವೆಂದರೆ, ಆಹಾರಕ್ಕೆ ಸಂಬಂಧಪಟ್ಟ ವಿಷಯ. ಆಹಾರ ನೀತಿಯ ವಿಷಯವಾಗಿ ಮಾತನಾಡಬೇಕೆಂದು ಯಾರಾದರೂ ಸದಸ್ಯರು ಇಷ್ಟಪಟ್ಟು ನಿಂತರೆ ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶವಿದೆ. ನನ್ನ ಅಭಿಪ್ರಾಯದಲ್ಲಿ ಇಂತಹ ಕಠಿಣವಾದ ವಿಷಯದಲ್ಲಿ ನಿರ್ದಿಷ್ಟವಾಗಿ ಹೀಗೆಯೇ ಮಾಡಬೇಕೆಂದು ಹೇಳುವುದು ಕಷ್ಟ. ಏಕೆಂದರೆ, ದೇಶದಲ್ಲಿ ಈ ಆಹಾರ ಹತೋಟಿ ಪ್ರಾರಂಭಮಾಡಿದ ಮೇಲೆ ಸಮಾಜದಲ್ಲಿ ಏನೇನು ಏರುಪೇರುಗಳಾಗಿವೆ, ಹಳ್ಳಿಯಲ್ಲಿರುವ ರೈತರ ಬುದ್ಧಿ ಯಾವ ರೀತಿ ಕೆಡುವುದಕ್ಕೆ ಪ್ರಾರಂಭವಾಯಿತು—ಇವುಗಳೆಲ್ಲವನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ದೇಶದಲ್ಲಿ ಬಂದಿರತಕ್ಕ ವಿಶೇಷ ಕಷ್ಟಗಳನ್ನೂ ಅನೀತಿಯನ್ನೂ ಯಾವ ರೀತಿ ತಡೆಗಟ್ಟಬೇಕು, ಇವನ್ನು ನಿಲ್ಲಿಸುವುದಕ್ಕೆ ಸಂಪೂರ್ಣವಾಗಿ ಹತೋಟಿಯನ್ನು ವಜಾ ಮಾಡುವುದು ಸರಿಯೆ ಅಥವಾ ಈಗಿರುವ ಹತೋಟಿಯನ್ನು ಯಾವುದಾದರೂ ರೀತಿ ಬದಲಾವಣೆಮಾಡಿ ಈ ವಿಶೇಷ ಕಷ್ಟಗಳನ್ನು ನಿವಾರಿಸುವುದು ಸಾಧ್ಯವೆ ಎಂಬುದನ್ನೆಲ್ಲಾ ದೀರ್ಘವಾಗಿ ಯೋಚನೆಮಾಡಿದ್ದೇನೆ. ಆದರೆ ನನಗಿರುವ ಬುದ್ಧಿಗೆ ಹೀಗೆಯೇ ಮಾಡಬೇಕೆಂಬ ಒಂದು ನಿರ್ದಿಷ್ಟಮಾರ್ಗ ಹೊಳೆಯಲಿಲ್ಲ. ಏಕೆಂದರೆ, ಈ ಪ್ರಶ್ನೆ ಅಷ್ಟು ಕಷ್ಟವಾಗಿದೆ, ಜಟಿಲವಾಗಿದೆ. ಹತೋಟಿ ಏತಕ್ಕಿರಬೇಕೆಂದರೆ, ನಮ್ಮ ಆವಶ್ಯಕತೆಗಳಿಗೆ ಸಾಕಷ್ಟು ಆಹಾರಸಾಮಗ್ರಿ ನಮ್ಮಲ್ಲಿಲ್ಲದೇಯಿರುವುದರಿಂದ. ಈಗಿನ ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೆ, ನಮ್ಮ ದೇಶಕ್ಕೆ ಬೇಕಾಗಿರುವಷ್ಟು ಸಾಮಗ್ರಿ ನಮ್ಮಲ್ಲಿಲ್ಲ. ಆದುದರಿಂದ ಯಾವುದಾದರೂ ರೀತಿಯಲ್ಲಿ ಹತೋಟಿ ಬೇಕು. ಈ ಹತೋಟಿಯಿಂದ ನಮ್ಮ ದೇಶದ ಜನರ ನೀತಿಯ ಮಟ್ಟ ಏನಾಗಿದೆ ಎಂಬುದನ್ನು ನೋಡಿದರೆ ಬೇರೆಯ ಅಭಿಪ್ರಾಯ ವುಂಟಾಗುತ್ತದೆ. ನೀತಿಗೆ ತಿಲಾಂಜಲಿಯಾಗುವುದಾದರೆ, ಜನ ಸತ್ತರೂ ಚಿಂತೆಯಿಲ್ಲ, ನೀತಿಯ ಅಧಃಪತನವಾಗಿ ಜನರು ಬದುಕುವುದಾದರೆ, ಅಂತಹ ಪದ್ಧತಿ ನಮಗೆ ಬೇಡ ಎಂದು ಪೂಜ್ಯ ಬಾಪು ಅಪ್ಪಣೆಕೊಡಿಸಿದ್ದರು. ಹಿಂದೆ ಹಳ್ಳಿಗಳಲ್ಲಿ ಎಷ್ಟೋ ಧಾರ್ಮಿಕ ಬುದ್ಧಿ, ನೀತಿ ಇತ್ತು. ಈ ದಿನ ಈ ಹತೋಟಿಯ ದೆಸೆಯಿಂದ ಬೆಳಿಗ್ಗೆ ಎದ್ದರೆ ಸುಳ್ಳು ಹೇಳಬೇಕು, ಸುಳ್ಳು ಲೆಕ್ಕ ಬರೆಯಬೇಕು, ಉಳಿತಾಯ ಮಾಡಬೇಕು, ಎನ್ನುವ ಬುದ್ಧಿ ಬಂದಿದೆ. ಏಕೆಂದರೆ, ಸರ್ಕಾರದವರು ಬಿಡುವ ಧಾನ್ಯ ಖಂಡಿತವಾಗಿಯೂ ರೈತರಿಗೆ ಸಾಕಾಗುವುದಿಲ್ಲ. ಒಂದು ಪಾವು ಅಕ್ಕಿ ಅನ್ನ ತಿಂದು, ಅವರು ಕೆಲಸಮಾಡಬೇಕೆಂದು ಹೇಳಿದರೆ ಖಂಡಿತವಾಗಿಯೂ ಅವರಿಗೆ ಸಾಕಾಗುವುದಿಲ್ಲ. ನಮ್ಮಲ್ಲೇ ಎಷ್ಟೋ ಜನ ಒಂದು ಪಾವಿಗಿಂತ ಹೆಚ್ಚಾಗಿ ಊಟಮಾಡುವವರಿದ್ದಾರೆ. ಹೀಗಿರುವಾಗ ಬೆಳಗಿನಿಂದ ಸಂಜೆಯವರೆಗೆ ಶ್ರಮಪಡುವ ರೈತ ಒಂದೇ ಪಾವಕ್ಕಿ ಅನ್ನದಲ್ಲಿ ತೃಪ್ತನಾಗಬೇಕೆಂದರೆ ಹೇಗೆ ಸಾಧ್ಯ? ಹೀಗೆ ಯಾವಾಗ ಅವನಿಗೆ ಸಾಲುವುದಿಲ್ಲವೋ ಆಗ ಅವನು ತನ್ನ ಸಂಸಾರಕ್ಕೆ ಬೇಕಾಗುವಷ್ಟು ಆಹಾರಧಾನ್ಯವನ್ನು ಇಟ್ಟುಕೊಳ್ಳುವುದಕ್ಕಾಗಿ ಸುಳ್ಳು ಹೇಳಬೇಕಾಗುತ್ತದೆ. ಕೆಲವು ವೇಳೆ ಉಳಿದರೆ ಅದನ್ನು ರಾಜಾರೋಷಾಗಿ ಮಾರುವುದಕ್ಕೆ ಸಾಧ್ಯವಾಗುವುದಿಲ್ಲ; ಕದ್ದು ಮಾರಿದರೆ ಲಾಭ ಬರುತ್ತದೆಂಬ ಆಸೆ ಹುಟ್ಟುತ್ತದೆ. ಆದರಿಂದ ಬೇರೆ ಕಡೆ ಮಾರಿಕೊಳ್ಳುತ್ತಾನೆ. ಅನೇಕ ಕಡೆ ಜಳ್ಳು, ಮಣ್ಣು, ಕಸ ಇವುಗಳನ್ನು ಸೇರಿಸಿ ಮಾರುವುದನ್ನು ನಾನೇ ನೋಡಿದ್ದೇನೆ. ಯಾವ ರೈತ ತನ್ನಲ್ಲಿಗೆ ಯಾರೇ ಬಂದರೂ ಉದಾರವಾಗಿ ಒಂದು ಪಡಿ ಧಾನ್ಯವನ್ನು ಹಾಕುವುದಕ್ಕೆ ಹಿಂತೆಗೆಯುತ್ತಿರಲಿಲ್ಲವೋ ಅಂಥವನೇ ಈಗ ಒಂದು ಪಡಿಗೆ ಒಂದು ಹಿಡಿ ಮಣ್ಣನ್ನು ಸೇರಿಸಿ ಮಾರು

(ಶ್ರೀ ಕೆ. ವಿ. ಶಂಕರಗೌಡರು.)

ವಂತಹ ಅನೀತಿ ಬಂದಿದೆ. ಹೀಗೆ ಜನರನು ಅನೀತಿಗೆ ನೂಕಿ ಕಾಪಾಡಬೇಕೇ ಅಥವಾ ಅನೀತಿ ಇಲ್ಲದಂತೆ ಕಾಪಾಡಬೇಕೇ ಎನ್ನುವುದು ಬಹಳ ಕಠಿಣವಾದ ವಿಷಯ. ಇನ್ನೊಂದು ವಿಷಯ. ಹಿಂದೆ ಅನುಸರಿಸುತ್ತಿದ್ದ ಆಹಾರ ನೀತಿ ಏನಾಗಿತ್ತು ಎಂದು ನೋಡಿದರೆ, ಸಂಸಾನದ ಎಲ್ಲ ಜನರಿಗೂ ಸಮಾನವಾದ ಒಂದೇ ರೀತಿಯ ಏರ್ಪಾಡನ್ನು ಮಾಡಿರಲಿಲ್ಲ. ಸ್ಟ್ಯಾಚುಟೆರಿ ರೇಷನಿಂಗ್ ಜಾರಿಯಲ್ಲಿದ್ದ ಪ್ರದೇಶದಲ್ಲಿ ವರ್ಷದ ಮುನ್ನೂರಐವತ್ತೈದು ದಿನವೂ ಜನರಿಗೆ ಆಹಾರಧಾನ್ಯವನ್ನು ಕೊಡುತ್ತಿದ್ದರು, ರೇಷ ಕಾರ್ಡುಗಳ ಮೇಲೆ. ಆದರೆ ಹಳ್ಳಿಗಳಲ್ಲಿ ಇದೇ ರೀತಿ ದೊರೆಯುತ್ತಿರಲಿಲ್ಲ. ಈ ವಿಷಯದಲ್ಲಿ ನಾನೇ ಅನೇಕಸಾರಿ ಪ್ರಶ್ನೆ ಹಾಕಿದ್ದೇನೆ. ಆದರೆ ಇದರಲ್ಲಿ ಸರ್ಕಾರಕ್ಕೂ ಕಷ್ಟವಿದೆ. ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಕೊಡುವುದಕ್ಕಾಗುವುದಿಲ್ಲ; ಯಾರಿಗೆ ಶಕ್ತಿಯಿಲ್ಲವೋ ಅವರಿಗೆ ಸಹಾಯಮಾಡುತ್ತೇವೆ; ಹಳ್ಳಿಯಲ್ಲಿರುವವರು ಬೆಳೆಯುವವರು ಅಲ್ಲಿರುವುದರಿಂದ ಅಲ್ಲಿಯೇ ತೆಗೆದುಕೊಳ್ಳಬಹುದು ಎಂದು ಹೇಳುತ್ತಿದ್ದರು. ಕೆಲವರಿಗೆ ಒದಗಿಸಿ ಕೆಲವರಿಗೆ ಇಲ್ಲವೆನ್ನುವುದು ಸರಿಯಾದ ನೀತಿಯಲ್ಲ. ಸರ್ಕಾರ ಆಹಾರವನ್ನು ಒದಗಿಸಿದ ಮೇಲೆ ದೇಶದಲ್ಲಿ ಎಲ್ಲರಿಗೂ ಒದಗಿಸಬೇಕು. ಹಿಂದಿದ್ದ ಏರ್ಪಾಡಿನ ಮೇರೆಗೆ ಸ್ಟ್ಯಾಚುಟೆರಿ ರೇಷನಿಂಗ್ ಇರುವ ಪ್ರದೇಶದಲ್ಲಿ ಧಾನ್ಯ ಸಿಕ್ಕುತ್ತಿತ್ತು; ಹಳ್ಳಿಗಳಲ್ಲಿ ಸಿಕ್ಕುತ್ತಿರಲಿಲ್ಲ. ಈ ದೃಷ್ಟಿಯಿಂದ ಅದು ಪರಿಪೂರ್ಣವಾದ ನಿಯಂತ್ರಣವಾಗಿರಲಿಲ್ಲ. ಎಲ್ಲ ದೃಷ್ಟಿಯಿಂದಲೂ ನೋಡಿದರೆ ಕಂಟ್ರೋಲು ಇರುವುದಕ್ಕಿಂತ ಇದನ್ನು ತೆಗೆದರೇ ಜನರಿಗೆ ಸುಖವಾಗಬಹುದೆಂದು ಸರ್ಕಾರದವರು ಯೋಚಿಸಿ ತಮ್ಮ ಈ ಹತೋಟಿ ನೀತಿಯನ್ನು ಮೊನ್ನೆ ಮಾರ್ಪಾಟು ಮಾಡಿದರು. ಹೀಗೆ ಮಾಡಿದಾಗ ನಮ್ಮಲ್ಲಿ ಅನೇಕರಿಗೆ ಗೊತ್ತಿರುವ ಹಾಗೆ ಹಾಹಾಕಾರ, ಹರತಾಳ, ಬಹಿರಂಗ ಸಭೆಗಳಾಗಿ ಪ್ರತಿಭಟನೆ ನಡೆಯಿತು. ಸ್ವಲ್ಪ ಕಾಲದಲ್ಲೇ ನಮಗಿಂತ ಹೆಚ್ಚು ಖೋತಾ ಇರುವ ಮದರಾಸಿನಲ್ಲಿ ಪೂರ್ತಿಯಾಗಿ ರೇಷನಿಂಗ್ ರದ್ದುಮಾಡಿ, ಅಲ್ಲಿ ಒಳ್ಳೆಯ ಪರಿಸ್ಥಿತಿ ಏರ್ಪಾಡಾಗಿದೆ. ನಾವು ಕೂಡ ಏಕೆ ಪೂರ್ಣವಾಗಿ ರೇಷನಿಂಗ್ ವಜಾಮಾಡಬಾರದೆಂಬ ಅಭಿಪ್ರಾಯ ಅನೇಕ ಸದಸ್ಯರಿಗೆ ಮೂಡಿದೆ. ಇದನ್ನು ಗಮನಿಸಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಿಜ, ಪೂರ್ತಿಯಾಗಿ ತೆಗೆದುಹಾಕಬಹುದು ಇಂತಹ ಸಮಯ ಸಿಕ್ಕಿದರೆ ಅದನ್ನು ದುರುಪಯೋಗಪಡಿಸಿಕೊಂಡು ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಬೇಕೆಂಬ ಜನರು ನಮ್ಮಲ್ಲಿದ್ದಾರೆ. ಪೂರ್ತಿಯಾಗಿ ಹತೋಟಿ ತೆಗೆದುಹಾಕಿದರೆ, ರೈತ, ಬೆಳೆಯತಕ್ಕವನು ಹಣದ ತೊಂದರೆಯಿಂದ ಆಹಾರಧಾನ್ಯವನ್ನು ಮಾರುವುದಕ್ಕೆ ಪ್ರಯತ್ನಮಾಡುತ್ತಾನೆ. ಆ ಸಮಯದಲ್ಲಿ ಹೆಚ್ಚು ಹಣವಿರುವವರು ಹೆಚ್ಚು ಪ್ರಮಾಣದಲ್ಲಿ ಕೊಂಡು ದಾಸ್ತಾನುಮಾಡಿ ಪುನಃ ಮಾರಾಟಕ್ಕೆ ದವಸ ಸಿಕ್ಕದೇಯಿರುವ ಪರಿಸ್ಥಿತಿಯನ್ನು ತಂದೊಡ್ಡಬಹುದು. ಹೀಗಾಗುವ ಸಂದರ್ಭವಿದೆ. ಹೀಗಾದರೆ ಇನ್ನೂ ಹೆಚ್ಚು ಕಷ್ಟದ ಪರಿಸ್ಥಿತಿ ಬರಬಹುದು. ಆದುದರಿಂದ ಇದನ್ನು ಏಕಕಾಲದಲ್ಲಿ ಖಚಿತವಾಗಿ ಹೀಗೆಯೇ ಮಾಡಬೇಕೆಂದು ನಿರ್ಧರಿಸಿ ನಿರ್ದಿಷ್ಟವಾಗಿ ಒಂದು ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ದೀರ್ಘವಾಗಿ ಈ ವಿಷಯವನ್ನು ಯೋಚನೆಮಾಡಿ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆಕೊಟ್ಟಿದ್ದಾರೆ. ಇದು ಸಮಯೋಚಿತವೂ ಸಾಧುವೂ ಆಗಿದೆ ಎಂದು ನನ್ನ ಅಭಿಪ್ರಾಯ.

ಏಕೆಂದರೆ ನಾನು ಮೊದಲೇ ಹೇಳಿದಹಾಗೆ ನಿರ್ದಿಷ್ಟವಾಗಿ ಇಂಥ ಪರಿಸ್ಥಿತಿಯೇ ಮುಂದಕ್ಕೆ ಉಂಟಾಗುತ್ತದೆಂದು ನಿರ್ಧರಮಾಡಿ ಹೇಳತಕ್ಕದ್ದು ಒಂದು ಕಠಿಣವಾದ ಪ್ರಶ್ನೆ. ಮುಂದಕ್ಕೆ ಪರಿಸ್ಥಿತಿ ಇನ್ನೂ ಬಿಗಡಾಯಿಸಿದರೂ ಬಿಗಡಾಯಿಸಬಹುದು. ಆದುದರಿಂದ ಸ್ವಲ್ಪ ಕಾಲ ಇನ್ನೂ ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ, ನೆರೆಪ್ರಾಂತಗಳಲ್ಲಿ ಈಗ ನಡೆಸಿರತಕ್ಕ ಆಜ್ಞೆಗಳ ಪ್ರಕಾರ ಅಲ್ಲಿನ ಕೆಲಸಕಾರ್ಯಗಳು ಹೇಗೆ

ನಡೆಯುತ್ತವೆ ಮತ್ತು ಅವುಗಳ ಪರಿಣಾಮ ವೇನಾಗುತ್ತದೆಂಬುದನ್ನು ಮನಗಂಡನಂತರ ಇಲ್ಲಿಯೂ ಅದೇ ರೀತಿ ಮಾಡತಕ್ಕದ್ದು ಸೂಕ್ತ ವಾಗಿ ಕಾಣುತ್ತದೆಂಬುದು ನನ್ನ ಅಭಿಪ್ರಾಯ.

ಇನ್ನು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವುದರಲ್ಲಿ ಬಹಳ ಮುಖ್ಯವಾದ ಒಂದು ವಿಷಯವೇನೆಂದರೆ—ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಲ್ಲಿ ಸೂಕ್ತ ಬದಲಾವಣೆಗಳನ್ನು ಸರ್ಕಾರ ದವರು ಕೂಡಲೇ ಕೈಗೊಳ್ಳಬೇಕೆಂದು ಹೇಳಿರ ತಕ್ಕದ್ದು. ಈ ವಿಷಯದಲ್ಲಿ ನನಗಿಂತಲೂ ಹೆಚ್ಚಾಗಿ ತಿಳಿದಿರತಕ್ಕ ಮಾನ್ಯಮಿತ್ರರನೇಕರಿ ದ್ದಾರೆ. ಆದರೆ ನನಗೆ ಈ ಬಗ್ಗೆ ಅಷ್ಟೊಂದು ಹೆಚ್ಚಾಗಿ ಮಾತನಾಡಲು ಇಷ್ಟವಿಲ್ಲ. ಆದರೆ ಒಂದೆರಡು ವಿಷಯಗಳನ್ನು ಮಾತ್ರ ಸೂಚಿಸಲಿ ಚ್ಛಿಸುತ್ತೇನೆ.

ಈ ದಿವಸ ವಿದ್ಯಾಭ್ಯಾಸಕ್ರಮ ನಡೆದು ಕೊಂಡುಬರುತ್ತಿರುವ ಒಂದು ರೀತಿನೀತಿಯನ್ನು ನೋಡಿದರೆ, ಇಂದು ವಿದ್ಯಾವಂತರಾಗಿ ಹೊರಗೆ ಬರತಕ್ಕ ತರುಣಜನಾಂಗ ಸರ್ಕಾರದಲ್ಲಿ ಯಾವು ದಾದರೂ ಒಂದು ಚಾಕರಿ ದೊರೆತರೆ ಮಾತ್ರ ಅವರು ತಮ್ಮ ಜೀವನೋಪಾಯವನ್ನು ಕಲ್ಪಿಸಿ ಕೊಳ್ಳಬಲ್ಲರೇ ವಿನಾ ಇಲ್ಲದಿದ್ದರೆ ಅವರಿಗೆ ಸ್ವಂತಂತ್ರವಾಗಿ ಜೀವನೋಪಾಯವನ್ನು ನಡೆಸಿ ಕೊಂಡು ಹೋಗತಕ್ಕ ಸ್ವಸಾಮರ್ಥ್ಯವಿರುವು ದಿಲ್ಲ. ಹೀಗಾದರೆ ನಾವು ಮುಂದಕ್ಕೆ ಇನ್ನೂ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗು ತ್ತದೆ. ಇಂದು ನೀವು ದೇಶದ ತರುಣರಿಗೆ ಕೊಡುತ್ತಿರುವ ವಿದ್ಯಾಭ್ಯಾಸದ ಕ್ರಮ ತರುಣ ಜನಾಂಗಕ್ಕೆ ಒಂದು ಸ್ಫೂರ್ತಿಯನ್ನು ಅಥವಾ ಹುರುಪನ್ನು ಹುಟ್ಟಿಸುವಂಥಾದ್ದಾಗಿಲ್ಲ. ನಮ್ಮ ಲ್ಲಿರತಕ್ಕ ವಿದ್ಯಾವಂತರಿಗೆ ಸ್ವಸಾಮರ್ಥ್ಯವಿಲ್ಲ, ಸ್ವಾವಲಂಬನೆಗಳನ್ನುಂಟುಮಾಡುವಂಥ ವಿದ್ಯೆ ಯನ್ನು ತಾವು ಅವರಿಗೆ ಕೊಡುತ್ತಿಲ್ಲ. ಇಂದಿನ ವಿದ್ಯಾಭ್ಯಾಸದ ಪರಿಣಾಮವೇನಾಗಿದೆಯೆಂದರೆ ಈ ಯುವಕ ಜನಾಂಗಕ್ಕೆ ಗುಮಾಸ್ತರಿಗೆ ಎಷ್ಟರ ಅವಶ್ಯಕತೆ ಇದೆಯೋ ಅಥವಾ ಅಗತ್ಯವಿದೆಯೋ ಅಷ್ಟರಮಟ್ಟಿಗೆ ಅನುಕೂಲ ದೊರಕಿಸುವಂಥಾ ದ್ದಾಗಿದೆ. ಈ ರೀತಿಯಾಗಿ ಇದರಲ್ಲಿ ಅನೇಕ ಲೋಪದೋಷಗಳಿರುವುದರಿಂದಲೇ ನಮ್ಮ ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸಬೇಕು ಬದಲಾಯಿಸಬೇಕು ಎಂಬುದಾಗಿ ಬಹಳ ಜನರು ಒತ್ತಾಯಪಡಿಸುತ್ತಿರುವುದು. ಆದರೆ ಅದು ಯಾವ ರೀತಿ ಬದಲಾವಣೆಯಾಗಬೇಕು, ಆ ಬದಲಾವಣೆಯ ರೂಪರೇಖೆಗಳು ಹೇಗಿರ ಬೇಕು ಎಂಬ ಅಂಶಗಳ ಬಗ್ಗೆ ಯಾರೂ ಖಚಿತ ವಾಗಿ ಏನನ್ನೂ ತಿಳಿಸಿರುವುದಿಲ್ಲ. ನನ್ನ ಅಭಿ ಪ್ರಾಯದಲ್ಲಿ ಈಗಿರತಕ್ಕ ವಿದ್ಯಾಭ್ಯಾಸಕ್ರಮ ವನ್ನು ಆದಷ್ಟು ಬೇಗ ಬದಲಾಯಿಸಬೇಕಾ ದದ್ದು ದೇಶದ ಮುಂದಿರತಕ್ಕ ಅತಿ ಮುಖ್ಯ ಪ್ರಶ್ನೆಗಳ ಪೈಕಿ ಒಂದಾಗಿದೆ. ಇದನ್ನೆಲ್ಲಾ ಸರ್ಕಾರದವರು ಮನಗಂಡು ಆದಷ್ಟು ಜಾಗ್ರತೆ ದೇಶದಲ್ಲಿ ಈಗಿರತಕ್ಕ ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸಿ, ದೇಶಾಭಿವೃದ್ಧಿಗೆ ಸರ್ವತೋ ಮುಖವಾಗಿ ಸಹಾಯಕವಾಗುವಂಥ ಪದ್ಧತಿ ಯನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈ ಅಂಶವನ್ನೇ ಶ್ರೀಮನ್ಮಹಾರಾಜರವರೂ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ನಮ್ಮ ದೇಶದಲ್ಲಿ ಇಂದು ಸ್ಥಾಪಿತವಾಗಿರತಕ್ಕ ಪ್ರಜಾಪ್ರಭುತ್ವವು ಯಶಸ್ವಿಯಾಗಿ ಮುಂದು ವರಿಯಬೇಕಾಗಿದ್ದರೆ ವಯಸ್ಕರ ಪದ್ಧತಿಯ ಮೇಲೆ ಮತದಾನಮಾಡತಕ್ಕ ಜನಸಾಮಾನ್ಯರಿ ಗೆಲ್ಲಾ ತಕ್ಕಷ್ಟು ಜ್ಞಾನವಿರಬೇಕು. ಒಬ್ಬ ಮನು ಷ್ಯನು ತನ್ನ ಮತವನ್ನು ಚಲಾಯಿಸತಕ್ಕ ಕಾಲ ದಲ್ಲಿ ಆತನು ಚಲಾಯಿಸತಕ್ಕ ಓಟಿನ ಹಕ್ಕು ಎಷ್ಟು ಬೆಲೆಯುಳ್ಳದ್ದು ಎಂಬುದನ್ನು ಆತ ಮನ ಗಾಣಬೇಕು ಮತ್ತು ಅಂಥ ಹಕ್ಕನ್ನು ಆತನು ದಾನಮಾಡುವಾಗ, ಆತನು ಓಟನ್ನು ಕೊಟ್ಟ ಬೇರೊಬ್ಬ ಮನುಷ್ಯನನ್ನು ಇಂಥ ಸಭೆಗಳ ಸದಸ್ಯನನ್ನಾಗಿ ಮಾಡಬೇಕಾದ ಸಂದರ್ಭದಲ್ಲಿ, ಹಾಗೆ ಸದಸ್ಯನಾಗತಕ್ಕ ಮನುಷ್ಯನು ಯೋಗ್ಯನೇ ಅಥವಾ ಅಯೋಗ್ಯನೇ ಎಂಬುದನ್ನು ಆ ಮತ ದಾನಮಾಡತಕ್ಕ ಮನುಷ್ಯನು ತಿಳಿದುಕೊಂಡು ತನ್ನ ಮತದಾನಮಾಡುವಂಥ ಒಂದು ಅವಕಾಶ ವನ್ನು ಆತನಿಗೆ ಉಂಟುಮಾಡಬೇಕಾದದ್ದು ಅತಿ ಮುಖ್ಯವಾದ ವಿಷಯ. ಈ ವಿಚಾರಗಳಲ್ಲೆಲಾ

(ಶ್ರೀ ಕೆ. ವಿ. ಶಂಕರಗೌಡರು.)

ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ತಮ್ಮ ಓಟನ್ನು ತಿಳಿವಳಿಕೆಯುಳ್ಳಂಥ ಮನುಷ್ಯನಿಗೇ ಕೊಡುವಷ್ಟುಮಟ್ಟಿಗಾದರೂ ವಿದ್ಯೆ ಎಲ್ಲರಿಗೂ ಬೇಕಾಗಿದೆ. ಈ ಅನುಕೂಲ ದೇಶದಲ್ಲಿರತಕ್ಕ ಎಲ್ಲಾ ಪ್ರಜಾಸಮುದಾಯಕ್ಕೂ ಅತ್ಯಗತ್ಯ. ಹೀಗೆ ಮಾಡಿದರೆ ದೇಶವೂ ಜನಾಂಗವೂ ಮುಂದುವರಿಯಲು ಸಾಧ್ಯವಾದೀತು. ಆದರೆ ದೇಶದಲ್ಲಿ ಇಂದು ಕೇವಲ ನೂರಕ್ಕೆ ಹನ್ನೆರಡು ಮಂದಿ ಮಾತ್ರ ವಿದ್ಯಾವಂತರಿದ್ದಾರೆ. ಆದರೆ ನಮ್ಮ ಸರ್ಕಾರ ಇಂದು ಈ ವಿದ್ಯಾಪ್ರಗತಿಗಾಗಿ ಖರ್ಚುಮಾಡುತ್ತಿರುವುದು ಸುಮಾರು ಮೂರುವರೆ ಕೊಟಿಯಷ್ಟು ರೂಪಾಯಿಗಳು. ಹೀಗೆ ಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತ ಹನ್ನೆರಡು ಲಕ್ಷ ಜನರನ್ನು ಮಾತ್ರ ವಿದ್ಯಾವಂತರನ್ನಾಗಿ ಮಾಡಲಾಗಿದೆಯೆಂದು ಹೇಳುವಾಗ, ಇನ್ನು ಇಡೀ ದೇಶದಲ್ಲಿರತಕ್ಕ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಲು ಇನ್ನೆಷ್ಟು ಕೋಟಿ ಹಣವನ್ನು ಖರ್ಚುಮಾಡಬೇಕಾಗುತ್ತದೆಂಬುದನ್ನು ಎಲ್ಲರೂ ಆಲೋಚನೆ ಮಾಡಬೇಕಾಗಿದೆ. ಅದಕ್ಕಾಗಿ ನಾನು ಹೇಳಬೇಕೆಂದಿರುವುದು, ಇಂದು ನಾವು ವಿದ್ಯಾಪ್ರಗತಿಗಾಗಿ ಮಾಡುತ್ತಿರುವ ಖರ್ಚನ್ನು ಕಡಿಮೆಮಾಡಬೇಕು ಎಂದು. ಹೀಗೆ ಹೇಳುವುದರಲ್ಲಿ ನನ್ನ ಅಭಿಪ್ರಾಯವೇನಿರುತ್ತದೆಯೆಂದರೆ, ಪ್ರತಿಯೊಂದು ವಿದ್ಯಾ ಸಂಸ್ಥೆಯು ತನಗೆ ಆಗತಕ್ಕ ಖರ್ಚುವೆಚ್ಚಗಳನ್ನು ತಮ್ಮ ತಮ್ಮ ಸ್ವಯಂಪ್ರಯತ್ನಗಳಿಂದ ಅವು ಅವುಗಳೇ ದುಡಿದುಕೊಂಡು, ದೇಶದಲ್ಲಿ ವಿದ್ಯಾಪ್ರಗತಿಯುಂಟಾಗುವಂತೆ ಆಗಬೇಕೆಂಬುದೇ ಆ ನನ್ನ ಅಭಿಪ್ರಾಯದ ಗುರಿ. ಆದರೆ ಈ ವಿದ್ಯಾಪ್ರಗತಿಯ ಬಗ್ಗೆ ಅನ್ಯದೇಶಗಳು ಹೇಗೆ ನಡೆಸುತ್ತಿವೆಯೆಂಬ ವಿಷಯ ನನಗೆ ಅಷ್ಟಾಗಿ ಗೊತ್ತಿಲ್ಲ. ನನಗೆ ಪರರಾಷ್ಟ್ರಗಳ ಪರಿಶ್ರಮ ಕಡಮೆ. ಕೇವಲ ಅವರಿವರು ಹೇಳಿದ್ದರಲ್ಲಿ, ಅನೇಕ ದೇಶಗಳಲ್ಲಿ ವಿದ್ಯಾಭ್ಯಾಸದ ಖರ್ಚುವೆಚ್ಚಗಳೇನಿದ್ದರೂ, ಆಯಾಯ ವಿದ್ಯಾಸಂಸ್ಥೆಗಳೇ ಅದನ್ನು ದುಡಿದುಕೊಂಡು, ಸರ್ಕಾರದ ಮೇಲೆ ಯಾವ ಭಾರವನ್ನೂ ಹಾಕದಂತೆ, ನಡೆಸಿಕೊಂಡು ಬರುತ್ತಿರುವುದಾಗಿ ಗೊತ್ತಾಗಿದೆ. ಪರದೇಶಗಳ ಪರಿಶ್ರಮವುಳ್ಳವರಿಗೆ ಇದರ ಬಗ್ಗೆ ಹೆಚ್ಚು ಅನುಭವವಿರಬಹುದು. ಆದರೆ ಒಂದು ದೇಶದಲ್ಲಿರತಕ್ಕ ಇಡೀ ಜನಾಂಗವನ್ನೆಲ್ಲಾ ಆ ದೇಶದ ಸರ್ಕಾರವೇ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದರೆ ಅದು ಸಾಧ್ಯವಾಗದ ಮಾತು. ಆದುದರಿಂದ ಈ ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು, ನಮ್ಮ ಸರ್ಕಾರದವರು, ಇಂದಿನ ವಿದ್ಯಾಭ್ಯಾಸಕ್ರಮವನ್ನು ಯಾವ ರೀತಿ ಬದಲಾವಣೆ ಮಾಡಬೇಕು, ಮುಂದಕ್ಕೆ ಯಾವ ಕ್ರಮವನ್ನು ಅನುಸರಿಸಬೇಕು, ಎಂಥಾ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕು ಎಂಬ ಮುಖ್ಯ ವಿಷಯಗಳನ್ನು ಮೊದಲು ಗಮನಿಸಬೇಕಾಗಿದೆ. ಕೆಲಕೆಲವು ಜಿಲ್ಲೆಗಳಲ್ಲಿ ಇಂದು ಹತ್ತು ಹನ್ನೆರಡು ಪ್ರೌಢ ಪಾಠಶಾಲೆಗಳನ್ನು ತೆರೆದಿದ್ದಾರೆ. ಆದರೆ ಅವುಗಳಿಗೆ ಅಲ್ಲಿ ಅಷ್ಟೊಂದು ಆವಶ್ಯಕತೆ ಇದೆಯೇ, ಇಲ್ಲವೇ ಎಂಬುದು ಯಾರಿಗೂ ಸರಿಯಾಗಿ ಗೊತ್ತಿರುವುದಿಲ್ಲ. ಆವಶ್ಯಕತೆ ಇದ್ದ ಕಡೆ ಪಾಠಶಾಲೆಗಳಿರುವುದಿಲ್ಲ. ಹೀಗೆ ಇಂದು ಒಂದು ಅವ್ಯವಸ್ಥೆಯಲ್ಲಿರತಕ್ಕದ್ದನ್ನೆಲ್ಲಾ ಸುವ್ಯವಸ್ಥೆಗೆ ತಂದು ಸರಿಪಡಿಸಬೇಕಾದ್ದೂ ಇದೆ. ಸರ್ಕಾರದವರು ಈ ಬಗ್ಗೆ ಖರ್ಚುಮಾಡುತ್ತಿರುವ ಮೊಬಲಗನ್ನು ಕಡಿಮೆಮಾಡಲೇಬೇಕು. ಇದು ಬಹಳ ಮುಖ್ಯವಾದ ವಿಷಯ. ಇಂದಿನ ಸರ್ಕಾರ ಇದನ್ನು ಮುಖ್ಯವಾಗಿ ಗಮನಿಸಬೇಕೆಂದು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಾರೆ.

ಕೊನೆಯದಾಗಿ ಇನ್ನು ಸರ್ಕಾರಿ ಕೈಗಾರಿಕೆಗಳ ವಿಚಾರವಾಗಿ ಒಂದು ಮಾತನ್ನು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ್ದಾರೆ. ನಾನೂ ಸಹ ಈ ಪೈಕಿ ಒಂದೆರಡು ಕಾರ್ಖಾನೆಗಳನ್ನು ನೋಡಿದ್ದೇನೆ. ಇತರ ಕಾರ್ಖಾನೆಗಳೂ ಕೂಡ ಬೇರೆ ಕಡೆ ಕೆಲಸ ಮಾಡುತ್ತಿವೆ. ಈ ಕಾರ್ಖಾನೆಗಳನ್ನು ನಾನು ನೋಡಿದ್ದರ ಪೈಕಿ, ಅವುಗಳಲ್ಲಿ ಉತ್ಪನ್ನವಾಗತಕ್ಕ ಮೊಬಲಗಿಗಿಂತ, ಅವುಗಳಿಗೆ ಆಗತಕ್ಕ ಖರ್ಚೇ ಹೆಚ್ಚಾಗಿದೆ. ಸರ್ಕಾರದವರು ಈ ಬಗ್ಗೆ ಅಷ್ಟು ತೀವ್ರಾಸಕ್ತಿ ವಹಿಸಿದ್ದಂತೆ

ಕಾಣುತ್ತಿಲ್ಲ. ಇನ್ನಾದರೂ, ಅವುಗಳ ಬಗ್ಗೆ ಆಸಕ್ತಿ ವಹಿಸಿ, ಉತ್ಪತ್ತಿ ಹೆಚ್ಚುವಂತೆ ಮಾಡಿ, ಆಗುತ್ತಿರುವ ಖರ್ಚನ್ನು ತಗ್ಗಿಸಬೇಕೆಂದು ಒತ್ತಿ ಹೇಳುತ್ತೇನೆ: ಇದೇ ವಿಚಾರವಾಗಿ ಶ್ರೀಮನ್ಮಹಾರಾಜರವರೂ ಕೂಡ ಇಂದಿನ ಸರ್ಕಾರ ಈ ಎಲ್ಲ ವಿಷಯಗಳ ಬಗ್ಗೆ ಕೂಡಲೇ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಅಪ್ಪಣೆಕೊಡಿಸಿದ್ದಾರೆ.

ಇನ್ನು ಆಖೈರಾಗಿ ಈ ಶಾಸನಸಭೆಯ ಮುಂದೆ ಬರಲಿರತಕ್ಕ ಶಾಸನಗಳ ಮತ್ತು ಕಾರ್ಯಕಲಾಪಗಳ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಒಟ್ಟಿನಲ್ಲಿ ಅವರು ಅಪ್ಪಣೆ ಕೊಡಿಸಿರತಕ್ಕ ಭಾಷಣ ಬಹಳ ಸ್ವಾರಸ್ಯವುಳ್ಳದ್ದಾಗಿದೆ. ಇಂಥ ಭಾಷಣವನ್ನು ದಯಪಾಲಿಸಿದುದಕ್ಕಾಗಿ ನಾವೆಲ್ಲರೂ ಅವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಬೇಕಾದದ್ದು ನಮ್ಮ ಮುಖ್ಯ ಕರ್ತವ್ಯ. ಆದ್ದರಿಂದ ಸರ್ವರೂ ಏಕಕಂಠದಿಂದ ಈ ಸೂಚನೆಯನ್ನು ಅನುಮೋದಿಸಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

2-30 P.M.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಅಧ್ಯಕ್ಷರೇ, ಶ್ರೀಮನ್ಮಹಾರಾಜರು ದಯಪಾಲಿಸಿದ ಭಾಷಣದ ಬಗ್ಗೆ ಈಗ ವಿಮರ್ಶೆ ನಡೆದು ಅದರ ಬಗ್ಗೆ ಈ ಸಭೆಯ ಕೃತಜ್ಞತೆಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸುವ ಕರ್ತವ್ಯ ನಮ್ಮದಾಗಿದೆ. ಶ್ರೀಮನ್ಮಹಾರಾಜರ ಭಾಷಣ ಅತ್ಯಂತ ಸುಂದರವಾಗಿಯೂ, ಅನೇಕ ಮಹತ್ವವಾದ ಭಾವನೆಗಳನ್ನೊಳಗೊಂಡುದಾಗಿಯೂ ಇದೆ. ಇಷ್ಟು ಪುಟ್ಟ ಭಾಷಣದಲ್ಲಿ ಇಷ್ಟು ಮಹತ್ವಪೂರಿತವಾದ ಭಾವನೆಗಳು ಅಡಗಿರುವುದರಿಂದ ಈ ಸಭೆಗೆ ಅದು ಉತ್ತೇಜನ ರೀತಿಯ ಮಾರ್ಗದರ್ಶನವನ್ನುಂಟುಮಾಡುವಂಥದ್ದಾಗಿದೆ. ಮೊಟ್ಟಮೊದಲನೆಯದಾಗಿ, ಶ್ರೀಮನ್ಮಹಾರಾಜರ ಭಾಷಣದಲ್ಲಿ ನಮ್ಮ ಚುನಾವಣೆಗಳ ಬಗ್ಗೆ ಮತ್ತು ಆ ಚುನಾವಣೆಗಳ ಫಲವಾಗಿ ಸ್ಥಾಪಿತವಾದ ಈ ಸಭೆಯ ಮತ್ತು ವಿಧಾನಪರಿಷತ್ತಿನ ಕರ್ತವ್ಯಗಳ ಬಗ್ಗೆ ಒಂದು ಸಂದೇಶವಿದೆ. ಈ ಚುನಾವಣೆಗಳು ಪ್ರಪಂಚದ ಇತಿಹಾಸದಲ್ಲಿ ಹೆಸರಾದ ರೀತಿಯಲ್ಲಿ ನಡೆದು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಅನೇಕ ಪಾಶ್ಚಾತ್ಯರಾಜ್ಯಗಳಲ್ಲಿ—ಪ್ರಜಾಪ್ರಭುತ್ವವು ನೂರಾರು ವರ್ಷಗಳಿಂದ ಅತ್ಯಂತ ಜಯಪ್ರದವಾಗಿ ನಡೆದುಕೊಂಡು ಬರುತ್ತಿರುವ ಕಡೆಯಲ್ಲಿಯೂ—ಮೆಚ್ಚುಗೆಯನ್ನು ಪಡೆದಿದೆ. ಹೊರದೇಶಗಳ ಮುಖಂಡರು ತಮ್ಮ ಪತ್ರಿಕೆಗಳಲ್ಲೂ ಮತ್ತು ಸಂದೇಶಗಳಲ್ಲೂ ಭಾರತದ ಚುನಾವಣಾ ರೀತಿ ನೀತಿಗಳನ್ನು ಕೊಂಡಾಡಿದ್ದಾರೆ. ಪ್ರಪಂಚದಲ್ಲಿ ಹೆಚ್ಚು ಜನಸಂಖ್ಯೆಯುಳ್ಳ ದೇಶಗಳಲ್ಲಿ ಇಂಡಿಯಾದೇಶ ಎರಡನೆಯದು; 35 ಕೋಟಿ ಪ್ರಜೆಗಳಲ್ಲಿ ಸುಮಾರು 17 ಕೋಟಿ ಪ್ರಜೆಗಳು ಮತದಾನದ ಅಧಿಕಾರವನ್ನು ಹೊಂದಿದವರಾಗಿದ್ದರು. ಅಪೈಕಿ ಸುಮಾರು ಶೇಕಡ 50 ಜನರು ಓಟಿಂಗ್ ಅಧಿಕಾರವನ್ನು ಉಪಯೋಗಿಸಿಕೊಂಡರು ಎಂದು ಹೇಳಿದಾಗ್ಯೂ ಕೂಡ ಸುಮಾರು 9 ಕೋಟಿ ಜನರು ತಮ್ಮ ಓಟುಗಳನ್ನು ಚಲಾಯಿಸಿದರು ಎಂದು ಹೇಳಬಹುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಓಟಿನ ಅಧಿಕಾರವನ್ನು ಉಪಯೋಗಿಸಿರುವುದು ಪ್ರಪಂಚದಲ್ಲಿ ನಮ್ಮ ದೇಶದಲ್ಲಿಯೇ ಮೊದಲು ಎಂದು ನಾವು ಹೇಳಬಹುದು. ಇದಕ್ಕೆ ಒಂದು ಹೇಳಿಕೆಯಾಗಿ ಕೆಲವು ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಪ್ರಪಂಚದಲ್ಲಿ ಈವತ್ತು ದೊಡ್ಡ ರಾಷ್ಟ್ರವೆಂಬುದಾಗಿ ಪರಿಗಣಿಸಲ್ಪಟ್ಟಿರುವುದು ಅಮೇರಿಕಾದೇಶ; ಅದರ ಜನಸಂಖ್ಯೆ ಸುಮಾರು 18 ಕೋಟಿ. ಹಾಗೆಯೇ ರಷ್ಯಾ ಜನಸಂಖ್ಯೆಕೂಡ ಸುಮಾರು 18 ಕೋಟಿ. ಆದರೆ, ನಮ್ಮ ದೇಶದಲ್ಲಿ ಓಟು ಕೊಡುವ ಅಧಿಕಾರವಿರುವವರ ಸಂಖ್ಯೆ 18 ಕೋಟಿಯಾಗಿದೆ. ಆ ದೇಶಗಳಲ್ಲಿ ಸುಮಾರು ಶೇಕಡ 60—70 ಜನರು ಓಟುಮಾಡಬಹುದು. ನಮ್ಮ ದೇಶದಲ್ಲಿ 9 ಕೋಟಿ ಜನರು ಓಟುಮಾಡಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಉಚ್ಚಸ್ಥಾನ ಹೊಂದಿರುವ ಇಂಗ್ಲೆಂಡಿನಲ್ಲೂ ಸುಮಾರು 2½ ಕೋಟಿ ಜನರು ಓಟಿಂಗ್ ಅಧಿಕಾರ ಚಲಾಯಿಸಿದರು. ಹೊಸದಾಗಿ

(ಶ್ರೀ ಪಿ. ಆರ್. ರಾಮಯ್ಯನವರು.)

ಪ್ರಜಾ ಪ್ರಭುತ್ವ ಸ್ಥಾಪನೆಯಾಗಿರುವ ದಕ್ಷಿಣ ಅಮೆರಿಕ ಮೊದಲಾದ ಅನೇಕ ರಾಷ್ಟ್ರಗಳಲ್ಲಿ ಚುನಾವಣಾ ಸಂದರ್ಭದಲ್ಲಿ ಹೊಡೆದಾಟ ನಡೆದು ರಕ್ತಪಾತವಾಗಿರುವ ಸಂದರ್ಭಗಳು ಅನೇಕವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ; ಅವನ್ನು ನಾವು ನೋಡಿದ್ದೇವೆ. ಆದರೆ ನಮ್ಮ ದೇಶದಲ್ಲಿ ಮಹಾತ್ಮ ಗಾಂಧಿಯವರ ಆಶೀರ್ವಾದದಿಂದ ಸ್ಥಾಪಿತವಾದ ಈ ನೂತನ ರಾಜ್ಯಾಂಗದ ಪ್ರಕಾರ ಮೊಟ್ಟಮೊದಲನೆಯ ಚುನಾವಣೆಯು ಬಹಳ ಶಾಂತವಾಗಿ ನಡೆದು; ಜಗತ್ತನ್ನೇ ವಿಸ್ಮಯಗೊಳಿಸುವ ರೀತಿಯಲ್ಲಿ ನಡೆದು, ಬಹಳ ಖ್ಯಾತಿಯನ್ನು ನಾವು ಸಂಪಾದಿಸಿದ್ದೇವೆ. ಇದನ್ನು ನೋಡಿದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಬಹಳ ರೂಢಮೂಲವಾಗಿ ನಿಂತಿದೆ ಎನ್ನುವ ಹಾಗೆ ಕಾಣುತ್ತದೆ.

ಈ ಪ್ರಜಾಪ್ರಭುತ್ವ ಭಾವನೆ ದೊಡ್ಡದು. ಪ್ರಜಾಪ್ರಭುತ್ವದ ಪದ್ಧತಿ ಒಂದೊಂದುಕಡೆ ಒಂದೊಂದು ರೀತಿ ಇರಬಹುದು. ಆದರೆ ಪ್ರಜಾಪ್ರಭುತ್ವ ಭಾವನೆ ಮನುಷ್ಯನ ಹುಟ್ಟುಗುಣಗಳಲ್ಲಿ ಸೇರಿರುವುದು. ಸಮಾನತೆ ಮತ್ತು ನ್ಯಾಯಪರತೆ ಇವೇ ಪ್ರಜಾಪ್ರಭುತ್ವದ ಧ್ಯೇಯ. ಆದ್ದರಿಂದ ಈ ಭಾವನೆ—ಯಾವ ದೇಶದಲ್ಲಿ ಆಧ್ಯಾತ್ಮಿಕ ಭಾವನೆ ಅತ್ಯಂತ ಉಚ್ಚತಮರೀತಿಯಲ್ಲಿ, ಅತ್ಯಂತ ಉನ್ನತ ರೀತಿಯಲ್ಲಿ ಪ್ರಜೆಗಳ ಹೃದಯದಲ್ಲಿ ಪ್ರಕಾಶವಾಗಿದೆಯೋ, ಯಾವ ದೇಶದಲ್ಲಿ ಮಹಾತ್ಮ ಗಾಂಧಿಯವರ ಸಂದೇಶಕ್ಕೆ ಸ್ಫೂರ್ತಿಯುಂಟಾಗಲು ಅವಕಾಶವಾಯಿತೋ ಅಂಥ ಈ ದೇಶದಲ್ಲಿ ಧರ್ಮದ ಅಡಿಪಾಯದಮೇಲೆ, ಸಮತೆಯ ಅಡಿಪಾಯದ ಮೇಲೆ ಸ್ಥಾಪಿತವಾಗಿರುವ ಈ ಪ್ರಜಾಪ್ರಭುತ್ವದ ರಾಜ್ಯಾಂಗವ್ಯವಸ್ಥೆಯ ಪ್ರಕಾರ ಚುನಾವಣೆಯು ಸಮರ್ಪಕವಾಗಿ ನಡೆಯಿತು. ಆದರೆ ಪ್ರಜಾಪ್ರಭುತ್ವ ಹಿಂದೆ ನಮ್ಮ ದೇಶದಲ್ಲಿರಲಿಲ್ಲವೇ ಎಂದು ಕೆಲವರು ಕೇಳುತ್ತಿದ್ದಾರೆ. ಸಾಮಾನ್ಯವಾಗಿ ನೋಡಿದರೆ ಒಂದೊಂದು ದೇಶದಲ್ಲಿ ಒಂದೊಂದು ರೀತಿಯ ಪದ್ಧತಿಯು ಇರಬಹುದು. ನಮ್ಮ ದೇಶದ ಇತಿಹಾಸವನ್ನು ನೋಡಿದರೆ ಸಾಮಾನ್ಯವಾಗಿ ಪ್ರಜಾಪ್ರಭುತ್ವ ಪದ್ಧತಿಯು ಬೇರೆರೀತಿ ಹಿಂದಿನಕಾಲದಲ್ಲಿದ್ದು ಅದರ ಪ್ರಚಾರ ಅದರ ಪ್ರಯೋಗ ನಮ್ಮ ದೇಶದಲ್ಲಿ ಬೇಕಾದಷ್ಟು ಇತ್ತು ಎಂದು ಕಂಡುಬರುತ್ತದೆ. ಈ ನೂತನ ರಾಜ್ಯಾಂಗ ವ್ಯವಸ್ಥೆ ಸ್ಥಾಪನೆಯಾದ ಮೇಲೆ ಮೊಟ್ಟಮೊದಲನೆಯ ಚುನಾವಣೆ ನಡೆದಿರುವ ಕಾಲದಲ್ಲಿ ನಾವು ಈಗ ಜಾರಿಯಲ್ಲಿರುವ ಪಾಶ್ಚಾತ್ಯ ಪದ್ಧತಿಯನ್ನು ಅನುಸರಿಸಿದ್ದೇವೆ. ಕೆಲವು ಅಮೇರಿಕಾದಿಂದ, ಮತ್ತೆ ಕೆಲವು ಇಗ್ಲೆಂಡಿನಿಂದ ಅಂಶಗಳು ಆರಿಸಲ್ಪಟ್ಟು ಅನುಸರಿಸಲಾಗಿವೆ. ನಮ್ಮ ಈಗಿನ ರಾಜ್ಯಾಂಗ ವ್ಯವಸ್ಥೆ, ನಮ್ಮ ಶಾಸನ ಪದ್ಧತಿ ಬಹಳಮಟ್ಟಿಗೆ ಇಂಗ್ಲೆಂಡಿನ ರಾಜ್ಯಾಂಗ ವ್ಯವಸ್ಥೆಯನ್ನು ಅನುಸರಿಸಿದೆ. ಆ ರೀತಿಯ ಪ್ರಜಾಪ್ರಭುತ್ವ ಪದ್ಧತಿ ನಡೆಯಬೇಕಾದರೆ ಬೇರೆಬೇರೆ ರಾಜಕೀಯ ಪಕ್ಷಗಳು ವಿಂಗಡವಾಗಿ ತಮ್ಮ ಧ್ಯೇಯ ಮತ್ತು ಧೋರಣೆಯನ್ನು ಜನಗಳ ಮುಂದಿಟ್ಟು ಬಹುಮತಗಳಿಸಿ ಚುನಾವಣೆಯಲ್ಲಿ ಬಂದರೆ ಅದರ ಧ್ಯೇಯಕ್ಕನುಸಾರವಾಗಿ ಆ ಪಕ್ಷವು ಆಡಳಿತ ನಡೆಸಿ ದೇಶದ ಆಗುಹೋಗುಗಳನ್ನು ನಿರ್ವಹಿಸುತ್ತದೆ. ಹಾಗೆಯೇ ನಮ್ಮ ದೇಶದಲ್ಲೂ ಕೂಡ ಈಗ ಆ ರೀತಿಯಾಗಿ ಪಕ್ಷಗಳ ಅಡಿಪಾಯದಮೇಲೆ ಮತ್ತು ಪಕ್ಷಗಳ ರೂಪು ರೇಖೆಗಳ ಮೇಲೆ ಒಂದು ವ್ಯವಸ್ಥೆಯಾಗಿದೆ. ಒಂದೇ ಪಕ್ಷಕ್ಕೆ ಬಹುಮತವಿದೆ ಎಂದು ಕೆಲವರು ಹೇಳುತ್ತಾರೆ. ಆದ್ದರಿಂದ ಒಂದು ರೀತಿಯ ಏಕನಾಯಕ ತತ್ವಕ್ಕೆ ಅವಕಾಶವಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಪೂರ್ವದಲ್ಲಿ ವಿದೇಶೀಯರ ಸರ್ವಾಧಿಕಾರತತ್ವ ವಿತ್ತು. ಈಗ ಕ್ರಮ ಕ್ರಮವಾಗಿ ಪ್ರಜಾಪ್ರಭುತ್ವ ಜಾರಿಗೆ ಬಂದಿದೆ. ಕ್ರಮ ಕ್ರಮವಾಗಿ ಇಂಗ್ಲೆಂಡಿನಲ್ಲಿ ಯಾವ ವಿಧವಾಗಿ ಬೇರೆಬೇರೆ ಪಕ್ಷಗಳು ಅಧಿಕಾರಕ್ಕೆ ಬಂದು ರಾಜ್ಯಾಡಳಿತವನ್ನು ನಡೆಸಿದವೋ ಹಾಗೆಯೇ ಈ ದೇಶದಲ್ಲೂ ಕೂಡ ಕ್ರಮಕ್ರಮವಾಗಿ ಸ್ಥಿತಿಗತಿಗಳು ಮಾರ್ಪಡುವುವು.

ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಪಕ್ಷ ಪ್ರತಿಪಕ್ಷಗಳ ಬಗ್ಗೆ ಕೆಲವು ನುಡಿಗಳಿವೆ. ನಮ್ಮ ದೇಶಕ್ಕೆ ಈಗ ಬಹಳ ಕಷ್ಟಪರಿಸ್ಥಿತಿ ಬಂದಿದೆ.

ಆಹಾರದ ಕೊರತೆ ಮತ್ತು ಹಣಕಾಸಿನ ಅಭಾವ ಉಂಟಾಗಿದೆ. ನಮ್ಮ ಪಕ್ಷ ಪ್ರತಿಪಕ್ಷಗಳು ಒಂದಕ್ಕೊಂದು ಹೊಂದಿಕೊಂಡು ಸೌಜನ್ಯತೆಯಿಂದ, ಸಮರಸತೆಯಿಂದ, ಸ್ನೇಹಭಾವದಿಂದ ವರ್ತಿಸಬೇಕು ಎಂದು ಶ್ರೀಮನ್ ಮಹಾರಾಜರವರು ಹೇಳಿದ್ದಾರೆ. ಆಗಲೇ ನಾನು ತಿಳಿಸಿದಂತೆ ನಮ್ಮ ಜನರಲ್ಲಿ ಪಾರ್ಲಿಮೆಂಟರಿ ಭಾವನೆ ಎಂಬುದು ಕ್ರಮಕ್ರಮವಾಗಿ ಬೆಳೆಯುತ್ತಾ ಬಂದಿದೆ. ಈಗಿನ ಪರಿಸ್ಥಿತಿ ನೋಡಿದರೆ ನಮ್ಮ ಪಕ್ಷಗಳು ಪರಸ್ಪರ ಸರಿಹೊಂದಿಕೊಂಡು ಕೆಲಸ ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನೂ ಕೆಲವು ಅಂಶಗಳು ಈ ಭಾಷಣದಲ್ಲಿ ಸೂಚಿತವಾಗಿವೆ. ಅವುಗಳಲ್ಲಿ ಹಣಕಾಸಿನ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಬಡ್ಜೆಟ್ಟಿನ ಮೇಲೆ ಚರ್ಚೆ ಮಾಡುವಾಗ ಅದರ ವಿಚಾರ ಹೇಳಬಹುದು. ಮುಖ್ಯವಾದುದು ಆಹಾರದ ವಿಷಯ. ಅದನ್ನೂ ಕೂಡ ಪ್ರತ್ಯೇಕವಾಗಿ ತಿಳಿಸಲು ಅವಕಾಶವಿರುವುದರಿಂದ ಅದನ್ನೂ ನಾನು ಈಗ ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಮುಖ್ಯವಾಗಿ ಹತೋಟಿ ಪೂರ್ತಿಯಾಗಿ ತೆಗೆದು ಬಿಡಬೇಕೆಂಬುದನ್ನು ಚೆನ್ನಾಗಿ ಆಲೋಚಿಸಿ ಮಾಡಬೇಕು. ಆದರೆ ಒಂದು ಅನುಭವ ಸ್ಪಷ್ಟವಾಗಿರಬಹುದು. ಆಹಾರಪದಾರ್ಥಗಳನ್ನು ಸಾಗಿಸುವ ವಿಷಯದಲ್ಲಿ ಕ್ರಮೇಣ ನಿರ್ಬಂಧ ಕಡಮೆಯಾಗಿ ಬೆಂಗಳೂರು ಮತ್ತು ಇತರ ಪಟ್ಟಣಗಳಿಗೆ ಆಹಾರ ಸಲೀಸಾಗಿ ಬರುವಂತೆ ಅವಕಾಶವುಂಟುಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ವಿದ್ಯಾಭ್ಯಾಸದ ಪದ್ಧತಿ. ವಿದ್ಯಾಭ್ಯಾಸದ ಪದ್ಧತಿಯ ವಿಷಯವಾಗಿ ಶ್ರೀಮನ್ ಮಹಾರಾಜರವರು ಬಹಳ ಸಂಗ್ರಹವಾಗಿ ನಮ್ಮ ಕರ್ತವ್ಯವನ್ನು ತಿಳಿಸಿದ್ದಾರೆ ಈಗ ಇರತಕ್ಕ ಪದ್ಧತಿ ರೂಢಮೂಲವಾಗಿ ಬದಲಾವಣೆಯಾಗಬೇಕು. ಈಗಾಗಲೇ ಈ ಪದ್ಧತಿಯ ಬಗ್ಗೆ ಅನೇಕ ಸಮಿತಿಗಳು, ಕಮಿಷನ್‌ಗಳು ಅಭಿಪ್ರಾಯ ಸೂಚಿಸಿವೆ. ಇಂಡಿಯಾ ಸರ್ಕಾರದವರು ನಿಯಮಿಸಿದ್ದ ಸೆಂಟ್ರಲ್ ಎಜ್ಯುಕೇಷನ್ ಬೋರ್ಡ್‌ನವರು ತಮ್ಮ ಸಲಹೆಗಳನ್ನು ಕೊಟ್ಟರು. ಅವರು ಹೇಳಿದ್ದು ಏನೆಂದರೆ ಈ ಪದ್ಧತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿದರೆ ಸಾಲದು. ಇದನ್ನು ರೂಢಮೂಲವಾಗಿ ಬದಲಾವಣೆ ಮಾಡಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಾವು ಬಹಳ ಜಾಗರೂಕತೆಯಿಂದ ವರ್ತಿಸಬೇಕು. ಈ ಪ್ರಶ್ನೆ ಸುಮಾರು 20—25 ವರ್ಷಗಳಿಂದಲೂ ನಮ್ಮ ಮುಂದೆ ಇದ್ದೇ ಇದೆ. ಇದನ್ನು ನಾವು ಇನ್ನೂ ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಯಾವುದನ್ನೇ ಮಾಡಲಿ ರೂಢಮೂಲವಾಗಿ, ಅಡಿಪಾಯದಿಂದ ನೋಡಿ ಸರಿಯಾದ ರಚನೆಯನ್ನು ಗೊತ್ತುಮಾಡಬೇಕೇ ಹೊರತು ಮೇಲೆಮೇಲೆ ಅಲ್ಪಸ್ವಲ್ಪ ಬದಲಾವಣೆ ಮಾಡಿದರೆ ಆಗುವುದಿಲ್ಲ. ಮುಖ್ಯವಾಗಿ ರಾಜ್ಯಾಂಗದಲ್ಲಿರತಕ್ಕ ವಿಷಯಗಳು ಎಂದರೆ, ಪ್ರಜೆಗಳು ಸುಖವಾಗಿ ಇರಬೇಕು, ನ್ಯಾಯ ದೊರಕಬೇಕು, ಪ್ರಜೆಗಳಲ್ಲಿ ಧರ್ಮಮನೋಭಾವ ಬರಬೇಕು ಎಂಬುದನ್ನು ಸಾಧಿಸಬೇಕು. ಆ ಧರ್ಮ ಭಾವನೆ ಬರಬೇಕಾದರೆ ಯಾವರೀತಿಯ ವಿದ್ಯಾಭ್ಯಾಸ ದೊರೆಯಬೇಕು ಎಂಬುದನ್ನು ಯೋಚನೆಮಾಡಿ ಅದರಂತೆ ಮಾಡಬೇಕಾಗುತ್ತದೆ.

ಮುಖ್ಯವಾಗಿ ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗೆ ಪ್ರಾಧಾನ್ಯವಿದೆ. ವ್ಯಕ್ತಿಗೆ ಸ್ವತಂತ್ರನಾಗಿ ವರ್ತಿಸಲು ಸಂಪೂರ್ಣ ಅವಕಾಶವಿರುವಂತೆ ಮಾಡುವುದೇ ಪ್ರಜಾಪ್ರಭುತ್ವದ ಪದ್ಧತಿಯ ಆಶಯ. ಆದ್ದರಿಂದ ಒಬ್ಬ ವ್ಯಕ್ತಿಯ ಸಂಪೂರ್ಣ ಬುದ್ಧಿ ವಿಕಾಸಕ್ಕೆ, ಬೆಳವಣಿಗೆಗೆ ಅವಕಾಶ ಮಾಡಿಕೊಡುವಂಥ ವಿದ್ಯಾಭ್ಯಾಸವನ್ನು ಏರ್ಪಾಡು ಮಾಡಬೇಕಾಗುತ್ತದೆ. ಅವನು ತನ್ನ ಜೀವನವನ್ನು ಸರಿಯಾಗಿ ನಡೆಸಲು, ಸಂಪಾದನೆ ಮಾಡಲು ಅವಕಾಶವಾಗುವಂತಹ ವಿದ್ಯಾಭ್ಯಾಸ ಕೊಡಬೇಕು. ಈಗ ವಿದ್ಯಾಭ್ಯಾಸದಲ್ಲಿರತಕ್ಕ ಕೊರತೆಯೇನೆಂದರೆ ಅನೇಕರು ವಿದ್ಯಾಪಾರಂಗತರಾಗಿರುತ್ತಾರೆ. ಆದರೆ ಅವರಿಗೆ ಕೊಟ್ಟಿರತಕ್ಕ ವಿದ್ಯೆಯಿಂದ ಈಗ ಜೀವನಕ್ಕೆ ಸಂಪಾದಿಸಲು ಅವಕಾಶವಿಲ್ಲ. ಆದ್ದರಿಂದ ಶ್ರೀಮನ್ ಮಹಾರಾಜರವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆ ಎಂದರೆ " The student who acquires knowledge should also

(ಶ್ರೀ ಪಿ. ಆರ್. ರಾಮಯ್ಯನವರು.)

know how to work". ಆದ್ದರಿಂದ ವಿದ್ಯೆ ಸಂಪಾದಿಸಿರತಕ್ಕವನಿಗೆ ಜೀವನೋಪಾಯಕ್ಕೆ ಒಂದು ಕೆಲಸ ಗೊತ್ತಾಗಿರಬೇಕು. ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಕೆಲಸಕ್ಕೆ ಹೆಚ್ಚು ಪ್ರಧಾನ್ಯ ಕೊಟ್ಟು ಅದನ್ನು ಸರಿಪಡಿಸಬೇಕು. ಮಹಾತ್ಮ ಗಾಂಧೀಜಿಯವರು ಅನೇಕ ಉಪಾಯಗಳನ್ನು ನಮಗೆ ಹೇಳಿಕೊಟ್ಟಿದ್ದಾರೆ; ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಚಿಕ್ಕಮಕ್ಕಳಾಗಿರುವಾಗಲೇ ಮಕ್ಕಳಿಗೆ ಕೆಲಸದ ಬಗ್ಗೆ ಆಸಕ್ತಿ ಬರುವಹಾಗೆ ಶಿಕ್ಷಣ ಕೊಡುವ ಮೂಲ ಶಿಕ್ಷಣ ಪದ್ಧತಿ ವಾರ್ಧಾದಲ್ಲಿ ಜಾರಿಗೆ ಬಂತು. ಈಗ ಬಹುಮಟ್ಟಿಗೆ ಅನೇಕ ಪ್ರಾಂತಗಳಲ್ಲಿ ಜಾರಿಗೆ ಬಂದಿದೆ. ನಮ್ಮ ಪ್ರಾಂತದಲ್ಲೂ ಕೂಡ ಸ್ವಲ್ಪಮಟ್ಟಿಗೆ ಪ್ರಯೋಗ ನಡೆದಿದೆ. ಆದರೆ ನಾವು ಅದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಇನ್ನು ಮುಂದಾದರೂ ಈಗ ನೂತನವಾಗಿ ರಚಿತವಾಗಿರುವ ಮಂತ್ರಿಮಂಡಲದಲ್ಲಿರತಕ್ಕ ವಿದ್ಯಾಸಚಿವರು ಮೂಲ ಶಿಕ್ಷಣಪದ್ಧತಿಯನ್ನು, ಎಂದರೆ ಪ್ರಾರಂಭದಲ್ಲೇ ಚಿಕ್ಕಮಕ್ಕಳಿಗೆ ಕೆಲಸದಲ್ಲಿ ಪ್ರವೃತ್ತಿ ಉಂಟಾಗುವಂತೆ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ಕೊಡಲು ಪ್ರಯತ್ನ ಮಾಡಬೇಕು. ಬರೀ ಅಕ್ಷರಸ್ಥರಾದ ಮಾತ್ರದಿಂದಲೇ ಪ್ರಯೋಜನವಿಲ್ಲ ಎಂಬುದನ್ನು ಚೆನ್ನಾಗಿ ಮನಗಾಣಬೇಕು.

ಒಟ್ಟಿನ ಮೇಲೆ ಈಗ ನಾವು ಈ ಸಭೆಗೆ ಅನೇಕ ಲಕ್ಷ ಪ್ರಜೆಗಳ ಪ್ರೀತಿಯನ್ನುಗಳಿಸಿ ಬಂದಿದ್ದೇವೆ. ಆ ಜನರು ನಮ್ಮಮೇಲೆ ಆಶೆ ಇಟ್ಟುಕೊಂಡಿದ್ದಾರೆ. ನಾವು ನಾನಾ ರೀತಿಯ ಜನಗಳ ವಿಶ್ವಾಸದಿಂದ ಬಂದಿದ್ದೇವೆ. ನಮ್ಮ ದೇಶದಲ್ಲಿ ಆರ್ಥಿಕ ಅಸಮಾನತೆ ಬಹಳವಾಗಿದೆ. ಗುಡಿಸಲುಗಳಲ್ಲಿ ವಾಸಮಾಡತಕ್ಕವರು, ಮೈಗೆ ಬಟ್ಟೆ ಇಲ್ಲದೆ ಇರತಕ್ಕವರು ನಮ್ಮಲ್ಲಿ ವಿಶ್ವಾಸವಿಟ್ಟು ನಮ್ಮನ್ನು ಈ ಸಭೆಗೆ ಕಳುಹಿಸಿದ್ದಾರೆ. ಅವರು ಬಹಳ ಕಾತರರಾಗಿ ನಮ್ಮ ಜೀವನವನ್ನು ಮುಂದೆ ಇವರು ಸುರಕ್ಷಿತವಾಗಿ, ಭವ್ಯವಾಗಿ ಕಟ್ಟಲು ಅವಕಾಶ ದೊರಕಿಸುತ್ತಾರೆ ಆದ್ದರಿಂದ ಇವರಿಗೆ ಬೆಂಬಲ ಕೊಡೋಣ ಎಂಬುದಾಗಿ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾವು ಮುಂದಿನ ಐದು ವರ್ಷಗಳಲ್ಲಿ ನಮ್ಮ ಕೆಲಸವನ್ನು ಮುಗಿಸಿ ಪುನಃ ಅವರಲ್ಲಿಗೆ ಹೋದಾಗ ಯಾವ ಉತ್ತರವನ್ನು ಕೊಡಬೇಕು? "ನಾವು ನಿಮ್ಮ ವಿಶ್ವಾಸವನ್ನು ಸಂಪಾದಿಸಿಕೊಂಡು ಈ ಐದು ವರ್ಷಗಳಲ್ಲಿ ನಿಮ್ಮ ಸ್ಥಿತಿಗತಿಗಳನ್ನು ಈ ರೀತಿ ಉತ್ತಮಪಡಿಸಿದ್ದೇವೆ" ಎಂಬುದಾಗಿ ಹೇಳುವುದಕ್ಕೆ ಬಾಯಿ ಬರುವಹಾಗೆ ನಮ್ಮ ಕಾರ್ಯಗಳನ್ನು, ಯೋಜನೆಗಳನ್ನು ಏರ್ಪಡಿಸಿಕೊಳ್ಳಬೇಕು. ಈ ಯೋಜನೆಗಳು ಅತ್ಯಂತ ಮುಖ್ಯವಾದವು. ಈ ಯೋಜನೆಯ ವಿಷಯವಾಗಿ ನಾನು ಚೈನಾದಲ್ಲಿ ಒಬ್ಬ ಕವಿ ಹೇಳಿರತಕ್ಕ ಮಾತನ್ನು ಹೇಳುತ್ತೇನೆ. ಚೈನಾದಲ್ಲಿ ಒಬ್ಬ ಕವಿ ಹೇಳಿದ್ದಾನೆ: 'ಒಂದು ವರ್ಷದಲ್ಲಿ ಫಲ ತೆಗೆಯಬೇಕಾದರೆ ಧಾನ್ಯ ಬೆಳೆಯಬೇಕು; 10 ವರ್ಷದಲ್ಲಿ ಫಲ ತೆಗೆಯಬೇಕಾದರೆ ಗಿಡ ಹಾಕಬೇಕು; 100 ವರ್ಷಗಳಲ್ಲಿ ಫಲ ಬರಬೇಕಾದರೆ ಒಂದು ಜನಾಂಗವನ್ನು ಬೆಳೆಸಬೇಕು' ಎಂದು ಹೇಳಿದ್ದಾನೆ. ನಾವು ನಮ್ಮ ದೇಶದಲ್ಲಿ ಬಹಳ ಭವ್ಯವಾದ ಸ್ಥಿತಿಯನ್ನು ನೋಡಬೇಕಾದರೆ ಈ ಜನಾಂಗವನ್ನು ಬೆಳೆಸಬೇಕು. ಜನಾಂಗವನ್ನು ನಾವು ಯಾವರೀತಿ ಬೆಳೆಸುತ್ತೇವೆಯೋ ಯಾವರೀತಿ ಅನುಕೂಲಗಳನ್ನು ಏರ್ಪಡಿಸುತ್ತೇವೆಯೋ ಯಾವ ಆದರ್ಶ ಅವರಮುಂದೆ ಇಡುತ್ತೇವೆಯೋ ಆದರ ಮೇಲೆ ನಮ್ಮ ಪ್ರಗತಿ ಹೋಗುತ್ತದೆ. ನಮ್ಮ ಪ್ರಜೆಗೆ ನಮ್ಮ ದೇಶ ಸ್ವರ್ಗದೋಪಾದಿಯಲ್ಲಿದ್ದೆ, ಬೇರೆ ಸ್ವರ್ಗ ಇಲ್ಲ ಎಂಬ ಮನೋಭಾವ ಬರುವಂತೆ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು. ಅದನ್ನು ಕಲ್ಪಿಸಿಕೊಡುವುದು ನಮ್ಮ ಕರ್ತವ್ಯ. ಹಿಂದಿನ ಭಾವನೆ, ಹಿಂದಿನ ಅಸಮಾನತೆ ಇವುಗಳನ್ನು ಇಟ್ಟುಕೊಂಡು ಈ ಪ್ರಪಂಚವನ್ನು ನಡೆಸುವ ಹಾಗಿಲ್ಲ. ನಮ್ಮ ಪ್ರಪಂಚದ ಸುತ್ತಮುತ್ತಲೂ ನೋಡಿದರೆ ಏನು ಕಾಣುತ್ತಿದೆ ಎಂದರೆ, ನೂತನವಾದ ಭಾವನೆ ಬಂದು ಮನುಷ್ಯನ ಸಮಾನತೆ, ರಾಜಕೀಯ ಸಮಾನತೆ ಮತ್ತು ಆರ್ಥಿಕ ಸಮಾನತೆ ಬೆಳೆಯಬೇಕು, ಈಗ ಇರತಕ್ಕದ್ದು ಸಾಲದು, ಇನ್ನೂ ಹೆಚ್ಚಬೇಕು ಎಂಬ ಭಾವನೆ ಜನಗಳಲ್ಲಿ

ಬಂದಿದೆ. ಒಬ್ಬರು ಅತ್ಯಂತ ಮುಂದುವರಿದಿರುವುದು, ಇನ್ನೊಬ್ಬರು ಪಾತಾಳದಲ್ಲಿರುವುದು ಸ್ವಾಭಾವಿಕವಾದ ಮಾನವನ ಧರ್ಮಕ್ಕೆ ನ್ಯಾಯಕ್ಕೆ ವಿರುದ್ಧವಾದದ್ದು ಎಂಬ ಭಾವನೆ ಬಂದಿದೆ. ಆದ್ದರಿಂದ ನಾವು ನಮ್ಮ ಆಡಳಿತದಲ್ಲಿ ಯಾವ ಕೆಲಸ ಮಾಡಲಿ ನಮ್ಮ ಭಾವನೆ ಬಹುಮಟ್ಟಿಗೆ ಬದಲಾಯಿಸಬೇಕು. ಭಾವನೆಗಳು ಚೆನ್ನಾಗಿದ್ದರೆ ಆಡಳಿತ ಚೆನ್ನಾಗುತ್ತದೆ. ಆದ್ದರಿಂದ ಆ ಪ್ರಜೆಗಳು ನಮ್ಮನ್ನು ಯಾರು ಇಲ್ಲಿಗೆ ಕಳುಹಿಸಿದ್ದಾರೋ ಅವರೇ ನಮಗೆ ದೇವರು ಎಂಬ ಭಾವನೆಯಿಂದ, ಅವರ ಸುಖ ಸಂತೋಷ ಹೆಚ್ಚಿಸಿ, ಅವರ ಸ್ಥಿತಿಗತಿ ಉತ್ತಮವಾಗುವಹಾಗೆ ಕೆಲಸಕಾರ್ಯಗಳನ್ನು ಮಾಡಬೇಕು ಎಂಬ ಭಾವನೆ ಎಲ್ಲರಲ್ಲೂ ಇರಬೇಕೆಂದು ಹೇಳಿ ಈ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Shall we fix some time-limit for speeches? May I say that no speech will exceed fifteen minutes?

Hon'ble MEMBERS.—Yes.

Sri V. M. MASCARENHAS (St. John's Hill).—Mr. Speaker, Sir, I wish to offer my grateful thanks for the gracious message which His Highness has been pleased to send to this Legislature. Though it is a model for brevity, it is full of wisdom and advice and indicative of sound principles of policy and administration. I do not want to go into great details as my friends have already done it. I will straightaway get into the food problem of the State.

His Highness has indicated the new policy enunciated by Government. It was a very wise and bold step that they took for which they deserve our congratulations and the country's grateful thanks. To-day, the farmer all over the State heaves a sigh of relief. He has again become a free man, free from the harassment to which he was accustomed during the last 4 or 5 years, when the rationing was in force. Now that the farmers have become free men, we can expect that they will put in greater effort on the land, the results of which will be clearly seen at the end of the next crop year. Though the Government have decontrolled to a great extent, I personally feel that their slow policy in this is a laudable one, because as far as rice is concerned we are not so well situated as our neighbouring State—Madras. Therefore, a period of 5 to 6 months is not a long period. The situation may be watched and when things are favourable, decontrol may be effected. At the same time, let us not forget that society, instituted as it is to-day, breeds a number of anti-social elements. Black-marketeers, hoarders, profiteers will now abundantly arise trying to undo what the Government has done. Well, I would suggest that this should be ruthlessly suppressed. The Deputy Commissioners in all the Districts may be empowered to see that hoarding which is an offence by law is not encouraged and every offender in this direction is punished deterrently.

I now go to the next indication of His Highness the Maharaja's remark relating to industries. Mysore, Sir, as you are aware, has been in the forefront of industrial development for the last 3 decades. Thanks to the vision and initiative of eminent statesmen beginning from Sir K. Seshadri Iyer, Mysore has been able to develop industries a great deal so much so that to-day there is not a single industry, for which there is scope, which has not been developed by the State. We produce gold; we manufacture iron and steel; we have large textile and silk mills; we have a number of oil mills and four Vanaspathi factories; we have a sugar factory which is one of the biggest in India and a host of industries which I need not enumerate. Yes, good work has been done, but I feel that greater work is in store.

These Government industries, formed as they were in gradual stages, did not receive attention on the managerial side to the extent they deserved. They became almost departmental concerns with the result that the mode of administration and the management of these business concerns ran on Government lines. Invariably, the Director of Industries was asked to take up the management of any new concern that

(SRI V. M. MASCARENHAS.)

the Government started. Later, the Vice-Chairman of the Iron and Steel Works got into the same strain and even later we see the Chief Electrical Engineer saddled with a number of industrial concerns under his charge. This state of affairs, in my opinion, certainly is not calculated to be in the interest of the industries of Mysore. The sooner this system is dropped the better it is for the country. Fortunately for us the great war brought a lot of boom and prosperity to our industries. But that phase is over. Reaction has begun, slumps in the market have started and until and unless we put our industrial house in order, I am afraid in the future we have a gloomy prospect. In the circumstances, the decision of the Government in trying to form an Industrial Directorate, in my opinion, though belated, is a very welcome one. The idea is that these industries formed under different groups should be so run that Government interference is reduced to almost nothing except a kind of control by the Industries Minister. The business concerns will have perfect freedom both in purchase and sale. This is a bold step and I would be too glad if the Government implements its decision as early as possible.

Sir, I do not wish to say more. In conclusion I wish to refer to the last few words of His Highness wherein he has said that we, the legislators of the country, have a special responsibility. Yes. We are the chosen representatives of the people. We have come here with a definite purpose. The happiness and the prosperity of the State is in our hands. Let each and every one of us remember that we should contribute our mite, great and small, towards the prosperity of the State and if we all resolve towards that end, I am sure a new era of prosperity will dawn on Mysore, the land of our birth, the land so dear to us.

ಶ್ರೀ ಆರ್. ಅನಂತರಾಮನ್‌ರವರು (ಚಾಮರಾಜಪೇಟೆ).—ಸ್ವಾಮಿ, ರಾಜಪ್ರಮುಖರು ಮಾಡಿದಂಥ ಭಾಷಣದಮೇಲೆ ಅಭಿನಂದನಾರೂಪವಾಗಿ ನಮ್ಮ ರುದ್ರಪ್ಪನವರೂ ಮತ್ತು ಇತರ ಕೆಲವು ಸದಸ್ಯರೂ ಆಗಲೇ ಭಾಷಣಗಳನ್ನು ಮಾಡಿದ್ದಾರೆ. ಆದಾಗ್ಗೂ, ನಾನೂ ಅವರು ಮಂಡಿಸಿದ ಠರಾವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನಾಡಲಿಚ್ಛಿಸುತ್ತೇನೆ. ಮುಂಚೆ, ನಮ್ಮ ಸ್ನೇಹಿತರು ಸೂಚಿಸಿದ ಚುನಾವಣೆಗಳ ವಿಷಯವಾಗಿ ಒಂದೆರಡು ಹೊಸ ಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

‘ಈ ಚುನಾವಣೆಗಳು ಇಂಡಿಯಾದೇಶದಲ್ಲಿ ಸಮರ್ಪಕವಾಗಿ ನಡೆಯುವುದಿಲ್ಲ; ಕಾರಣ, ಇಂಡಿಯಾದೇಶದಲ್ಲಿನ ಮುಕ್ಕಾಲುಪಾಲು ಜನ ಅವಿದ್ಯಾವಂತರು ; ಚುನಾವಣೆಗಳ ಸಂದರ್ಭದಲ್ಲಿ ಹೊಡದಾಟಗಳಿಲ್ಲದೆ ಶಾಂತವಾಗಿ ಅವು ನಡೆಯಲಾರವು—ಎಂದು ಭಯದಿಂದ ಕೂಡಿದ ಲೇಖನಗಳನ್ನು ಕೆಲವರು ಬರೆದಿದ್ದರು. ಇದನ್ನು ನೋಡಬೇಕೆಂದೇ ಪರದೇಶದವರು ಕೆಲವರು ಕೂಡ ಬಂದಿದ್ದರು. ನಾವುಕೂಡ ಈ ಚುನಾವಣೆಗಳ ವಿಷಯದಲ್ಲಿ, ಅದು ಇಷ್ಟು ಸಮರ್ಪಕವಾಗಿರುತ್ತದೆಂದು ನಿರೀಕ್ಷಿಸಿರಲಿಲ್ಲ. ಆದರೆ, ವಾಸ್ತವವಾಗಿ ಅದು ನಡೆದರೀತಿಯನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದಿರದು. ನಮ್ಮ ದೇಶ ವ್ಯವಸಾಯವದೇಶ. ಜನರು ಅವಿದ್ಯಾವಂತರಾಗಿದ್ದಾರೆ. ಅಂಥವರು ಎಲ್ಲ ವಿಷಯಗಳನ್ನೂ ಗ್ರಹಿಸಿ, ಯಾರಿಗೆ ಮತದಾನ ಮಾಡಬೇಕೋ ನೋಡಿಕೊಂಡು ಸರಿಯಾಗಿ ಮತದಾನಮಾಡಿ ರಾಜ್ಯಭಾರವನ್ನು ಸುವ್ಯವಸ್ಥಿತವಾಗಿ ಮಾಡಿದ್ದಾರೆ. ಆದಕ್ಕಾಗಿ ನಮ್ಮ ಜನರನ್ನು ಎಷ್ಟು ಹೊಗಳಿದರೂ ತೀರದು. ಆದರಲ್ಲೂ ಹೆಂಗಸರು 5 ಘಂಟೆಗೇ ಬಂದು ಸಾಲು ಸಾಲಾಗಿ ನಿಂತು ಸಾಯಂಕಾಲದವರೆಗೂ ಕಾದಿದ್ದು ಯಾರಿಗೆ ಮತದಾನಮಾಡಬೇಕೋ ನೋಡಿ ಮಾಡಿದ್ದು ನಿಜವಾಗಿಯೂ ಬಹಳ ಅಚ್ಚರಿಯನ್ನುಂಟುಮಾಡುವಂಥದು. ಗಂಡಸರು ಬೇರೆ ತಮ್ಮ ಕೆಲಸಗಳಿಗೆ ಹೋಗಿದ್ದರೂ ಹೆಂಗಸರು ತಮ್ಮ ಮುಖ್ಯ ಕರ್ತವ್ಯವಿದೆಂದು ಭಾವಿಸಿ ಬೇಸರಗೊಳ್ಳದೆ ನಿಂತು ಚುನಾವಣೆಗಳಲ್ಲಿ ಭಾಗವಹಿಸಿದ್ದು ಬಹಳ ಶ್ಲಾಘನೀಯವಾದ ವಿಚಾರ. ಈ ರೀತಿ

ಹೆಂಗಸರು ಆಸಕ್ತಿವಹಿಸಿ ಚುನಾವಣೆಗಳಲ್ಲಿ ಭಾಗವಹಿಸದೆ ಹೋಗಿದ್ದರೆ ನಮ್ಮ ದೇಶದ ರಾಜ್ಯ ವ್ಯವಸ್ಥೆಯೇ ತಲೆಕೆಳಕಾಗುತ್ತಿತ್ತು. ಹಾಗಿರುವಾಗ, ಈ ಚುನಾವಣೆಗಳು ಇಷ್ಟು ಸಮರ್ಪಕವಾಗಿ ಚೆನ್ನಾಗಿ ನಡೆದಿರುವುದಕ್ಕಾಗಿ ನಮ್ಮ ಅಧಿಕಾರಿ ವರ್ಗದವರಿಗೂ ಮತ್ತು ಜನಸ್ತೋಮಕ್ಕೂ ಎಷ್ಟು ವಂದಿಸಿದರೂ ತೀರದು.

ಆಮೇಲೆ, ರಾಜಪ್ರಮುಖರು ಮಿತವ್ಯಯದ ಆವಶ್ಯಕತೆಯ ವಿಚಾರವಾಗಿ ಮಾತನಾಡಿದ್ದಾರೆ. ನಮ್ಮ ಹೊಸ ಸರ್ಕಾರ ಒಂದಕ್ಷಣ ಕೆಲವು ಇಲಾಖೆಗಳನ್ನು ತೆಗೆದುಹಾಕಿಬಿಟ್ಟಿರುವುದನ್ನು ಸೂಚಿಸಿದ್ದಾರೆ. ಆಹಾರದ ಇಲಾಖೆ, ಸಿವಿಲ್ ಸಪ್ಲೈಸ್ ಇಲಾಖೆ ಮತ್ತು ಇತರ ಕೆಲವು ಇಲಾಖೆಗಳನ್ನು ತೆಗೆದುಹಾಕಲಾಗಿದೆ. ನಮ್ಮ ಸ್ನೇಹಿತರು ಹೇಳಬಹುದು, ಹೀಗೆ ತೆಗೆದು ಹಾಕಿದ್ದರಿಂದ ದೇಶಕ್ಕೆ ಎಷ್ಟೋ ಒಳ್ಳೆಯದಾಯಿತು, ಹಣದ ಉಳಿತಾಯವಾಯಿತು ಎಂದು. ಆದರೆ ಅದನ್ನು ನಾನು ಒಪ್ಪಲಾರೆ. ಇದರಿಂದ ಇನ್ನೊಂದು ಭೀಕರ ಸಮಸ್ಯೆ ನಮ್ಮ ಮುಂದೆ ಎದ್ದು ನಿಂತಿದೆ, ಅದು ನಿರುದ್ಯೋಗ. ಹೀಗೆ ಸಾವಿರಾರು ಜನರು ನಿರುದ್ಯೋಗಿಗಳಾಗಿ ಹೊರಗೆಬಂದರೆ ದೇಶವು ಎಷ್ಟು ಕಷ್ಟ ನಷ್ಟಗಳಿಗೆ ಒಳಗಾಗುತ್ತದೆಂಬುದನ್ನು ಯೋಚನೆಮಾಡಬೇಕು. ಆದ್ದರಿಂದ ದೇಶದ ಆಡಳಿತ ನಡೆಸತಕ್ಕ ಸೂತ್ರಾಧಿಕಾರಿಗಳು ಏನುಮಾಡಬೇಕೆಂದರೆ, ಒಂದುಕಡೆ ಹಣದ ಉಳಿತಾಯವಾಗುವಂತೆಯೂ, ಇನ್ನೊಂದುಕಡೆ ನಿರುದ್ಯೋಗ ಇಲ್ಲದಂತೆಯೂ ನೋಡಿಕೊಳ್ಳಬೇಕು. ಅದಿಲ್ಲದೆ, ನೂರಾರು ಜನರು ನಿರುದ್ಯೋಗಿಗಳಾಗುತ್ತಿದ್ದರೆ, ಈ ಸಮಸ್ಯೆ ಉಲ್ಬಣಿಸಿ ನಾಳೆ ಏನಾಗುತ್ತದೆಯೋ, ನಾಡಿದ್ದು ಏನಾಗುತ್ತದೆಯೋ ಹೆದರಿಕೆಯಾಗುತ್ತದೆ. ಉಳಿತಾಯವೇನೋ ಆಗಬೇಕು. ಆದರಂತೆ ಕೆಲವರನ್ನು ಕೆಲಸದಿಂದ ತೆಗೆದುಹಾಕಬೇಕಾಗುತ್ತದೆ. ಆದರೆ, ಅವರುಗಳಿಗೆ ಒಂದು ಉದ್ಯೋಗವನ್ನು ಕಲ್ಪಿಸುವಂತೆ, ನಮ್ಮ ದೇಶದಲ್ಲಿ ಬಂಜರು ಬಿದ್ದಿರುವ ನೂರಾರು ಎಕರೆ ಜಮೀನುಗಳನ್ನು ಆಬಾದಿಗೆ ತರುವಂತೆ, ಒಂದು ವ್ಯವಸಾಯದ ಕಾಲೋನಿಯನ್ನು ಏರ್ಪಡಿಸಿ ಆ ಯುವಕರನ್ನು ಅದರಲ್ಲಿ ಕೆಲಸಮಾಡುವಂತೆ ಮಾಡಿದರೆ ಒಳ್ಳೆಯದು. ಮಲೆನಾಡು ಪ್ರದೇಶದಲ್ಲಿ ವ್ಯವಸಾಯ ನಡೆಸುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಅಲ್ಲೊಂದು ವ್ಯವಸಾಯದ ಕಾಲೋನಿ ಮಾಡಿ ಇವರುಗಳನ್ನು ನೇಮಿಸಿಕೊಳ್ಳಿ.......

ಶ್ರೀ ಕಡಿದಾಳ್ ಮಂಜಪ್ಪನವರು.—ಬಲಾತ್ಕಾರವಾಗಿಯೇ?

ಶ್ರೀ ಆರ್. ಅನಂತರಾಮ್‌ರವರು.—ಹೌದು, ಬಲತ್ಕಾರವಾಗಿಯೇ ; ಶಾ ಸ ನ ರೂ ಪ ವಾ ಗಿ ಮಾಡಿ.

ಒಬ್ಬ ಸದಸ್ಯರು.—ತೀರ್ಥಹಳ್ಳಿಯಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ, ಕೊಪ್ಪದಲ್ಲಿ!

ಶ್ರೀ ಆರ್. ಅನಂತರಾಮನ್‌ರವರು.—ಹೀಗೆ ಒಂದು ವ್ಯವಸಾಯದ ಕಾಲೋನಿಮಾಡಿ, ಅವರಿಗೆ ಹಣಸಹಾಯ ಮತ್ತಿತರ ಸಹಾಯಗಳನ್ನು ಕೊಟ್ಟು ಆಧುನಿಕ ರೀತಿಯಲ್ಲಿ ವ್ಯವಸಾಯ ನಡೆಸಲು ಉತ್ತೇಜನಕೊಡಬೇಕೆಂದು ಹೇಳುತ್ತೇನೆ.

Mr. SPEAKER.—May I know what time the Hon'ble Member will take to finish ?

ಶ್ರೀ ಆರ್. ಅನಂತರಾಮನ್‌ರವರು.—Only five minutes more.

ಅಂತು, ಇಂಥ ದೊಡ್ಡ ಸಮಸ್ಯೆಯನ್ನು ನಮ್ಮ ಸರ್ಕಾರದವರು ಎದುರಿಸಬೇಕಾದದ್ದು ಅವರ ಮುಖ್ಯ ಕರ್ತವ್ಯ. ಶಾಸನರೂಪವಾಗಿಯೂ ಮತ್ತು ಇತರ ವಿಧವಾಗಿಯೂ ಪ್ರಯತ್ನಮಾಡಿ ಈ ಯುವಕರನ್ನು ನಿರುದ್ಯೋಗದ ಬಾಯೊಳಗೆ ಸಿಲುಕದಂತೆ ಮಾಡಿ ದೇಶಕ್ಕೆ ಒಳ್ಳೆಯದು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಕೈಗಾರಿಕೆಯ ವಿಚಾರದಲ್ಲಿ ಸರ್ಕಾರದವರು ಎಷ್ಟರಮಟ್ಟಿನ ಪ್ರೋತ್ಸಾಹಕೊಡುತ್ತಿದ್ದಾರೆಂಬುದನ್ನು ನಮ್ಮ ಮಿತ್ರರೆಲ್ಲರೂ ಹೇಳಿದ್ದಾರೆ. ಇದು ಎಲ್ಲರೂ ಒಪ್ಪತಕ್ಕ ವಿಚಾರವೇ. ಪಂಡಿತ ಜವಹಿರಲಾಲ್‌ರವರೂ ಹಿಂದೆ ಮೈಸೂರಿಗೆ ಬಂದಾಗ್ಗೆ ಮೈಸೂರಿನ ಕೈಗಾ

(ಶ್ರೀ ಆರ್. ಅನಂತರಾಮನ್‌ರವರು)

ರಿಕೆಗಳನ್ನು ನೋಡಿ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದ್ದಾರೆ. ಆದರೂ ಒಂದು ಸಮಸ್ಯೆ ಇದರಲ್ಲಿದೆ. ಈಚೀಚೆಗೆ ಕಂಡಂತೆ ಅನೇಕ ಕೈಗಾರಿಕೆಗಳಲ್ಲಿ ಮಾಲೀಕರಿಗೂ ಕೂಲಿಗಾರರಿಗೂ ಮಧ್ಯೆ ಸ್ನೇಹ ಸೌಹಾರ್ದ ವಾತಾವರಣಗಳೇರ್ಪಡದೆ ಎಷ್ಟೋ ಸಂದರ್ಭಗಳಲ್ಲಿ ವೈಮನಸ್ಯಗಳಿಗೆ ಎಡೆಕೊಟ್ಟಿವೆ. ಸರ್ಕಾರದವರು ಎಷ್ಟುಮಟ್ಟಿಗೆ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾರೋ ಅಷ್ಟೇಮಟ್ಟಿಗೆ ಅಲ್ಲಿನ ಕೂಲಿಗಾರರ ವಿಚಾರದಲ್ಲೂ ಕನಿಕರದಿಂದ ಕೂಡಿರಬೇಕು. ಬೆಂಗಳೂರಿನಲ್ಲಿ ಈಗ ಕೆಲವು ಕಾರ್ಖಾನೆಗಳಿವೆ. ಅವುಗಳಿಗೆ ಎಲ್ಲಾ ಪ್ರೋತ್ಸಾಹಗಳನ್ನು ಕೊಡುತ್ತಿದ್ದರೂ ಅವು ಅಷ್ಟು ಲಾಭದಾಯಕವಾಗಿಲ್ಲ. ಕಾರಣ, ಸರ್ಕಾರದವರು ಅವುಗಳ ಕೂಲಿಗಾರರ ವಿಷಯದಲ್ಲಿ ಸೌಹಾರ್ದದಿಂದ ವರ್ತಿಸುತ್ತಿಲ್ಲ. ಈಗಾಗಲೇ ಒಂದು ಕೇಸು ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮುಂದೆ ಹೋಗಿದೆ. ಕೂಲಿಗಾರರು ಸುಮ್ಮನೆ ಕಾರ್ಖಾನೆಗಳಿಗೆ ಹೋಗುವುದೂ ಅಲ್ಲಿ ಏನೂ ಕೆಲಸಮಾಡದೆ ಬರುತ್ತಿರುವುದೂ ಆಗಿದೆ. ಉದಾಹರಣೆಗೆ ನಮ್ಮ ಎಲೆಕ್ಟ್ರಿಕ್ ಫ್ಯಾಕ್ಟರಿಯನ್ನು ಪರದೇಶದವರು ಕೂಡ ನೋಡಿಕೊಂಡುಹೋಗಿ ಇದರಲ್ಲಿ ಎಂಥ ಒಳ್ಳೆಯ ಸಾಮಾನುಗಳನ್ನು ತಯಾರಿಸುವುದಕ್ಕೂ ಅನುಕೂಲವಾಗಿದೆಯೆಂದು ಹೇಳಿದ್ದಾರೆ. ಆದರೆ, ನಾವೀಗಹೋಗಿ ನೋಡಿದರೆ ಅದರ ಕೆಲಸಗಳು ಅಷ್ಟು ತೃಪ್ತಿಕರವಾಗಿಲ್ಲ. ಕಾರಣ ಅಲ್ಲಿನ ಕೂಲಿಗಾರರಿಗೂ ಮಾಲೀಕರಿಗೂ ವೈಮನಸ್ಯವುಂಟಾಗಿದೆ. ಆದಷ್ಟು ಬೇಗನೆ ಸರ್ಕಾರದವರು ಇಂಥ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ಚಿಂತಾಜನಕ ಪರಿಸ್ಥಿತಿಯೆಂದರೆ, ಅನೇಕ ಕಾರ್ಖಾನೆಗಳಲ್ಲಿ ಮಾಲೀಕರುಗಳು ಕೂಲಿಗಾರರನ್ನು ಹೇಳದೆ ಕೇಳದೆ ಕಿತ್ತು ಹಾಕುತ್ತಿರುವುದು. ಇಂಥವುಗಳನ್ನೆಲ್ಲಾ ನೋಡಿದರೆ ಇಂಥಾ ಕಾರ್ಖಾನೆಗಳನ್ನೆಲ್ಲಾ ರಾಷ್ಟ್ರೀಕರಣಮಾಡುವುದೇ ಸೂಕ್ತವೆಂದೆನಿಸುತ್ತದೆ. ಆದರೆ ಸರ್ಕಾರದವರು ರಾಷ್ಟ್ರೀಕರಣದ ವಿಚಾರದಲ್ಲಿ ಸದ್ಯಕ್ಕೆ ಇನ್ನೂ 10–15 ವರ್ಷಗಳವರೆಗೆ ಸುಮ್ಮನಿರಬೇಕೆಂದು ಹೇಳಿದ್ದಾರೆ. ಬಹುಶಃ ಸದ್ಯದಲ್ಲಿ ಇದು ದೇಶಕ್ಕೆ ಒಳ್ಳೆಯದಿರಬಹುದು. ಆದರೂ, ಮಾಲೀಕರು ಈರೀತಿ ಕೂಲಿಗಾರರಿಗೆ ತೊಂದರೆ ಕೊಡುತ್ತಿರುವುದನ್ನು ಸರ್ಕಾರದವರು ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈಗ ಬಿನ್ನಿಮಿಲ್ಲಿನವರು ಹೀಗೆಲ್ಲಾ ಕೂಲಿಯವರನ್ನು ಕೆಲಸದಿಂದ ತೆಗೆಯುತ್ತಿದ್ದಾರೆ. ಇದರಿಂದ ದುಡಿಯತಕ್ಕ ಯುವಕರು ಮನೆಯಲ್ಲಿ ಕುಳಿತುಕೊಂಡರೆ ದೇಶಕ್ಕೆ ಕೆಡಕಾಗುವುದಿಲ್ಲವೇ? ಆದ್ದರಿಂದ ಸದ್ಯಕ್ಕೆ ರಾಷ್ಟ್ರೀಕರಣಮಾಡುವುದಕ್ಕಾಗದೇ ಇದ್ದರೂ ಚಿಂತೆಯಿಲ್ಲ, ಆ ಮಿಲ್ಲನ್ನು ಜಾಯಿಂಟ್ ಆಡಳಿತಕ್ಕೆ ಸೇರಿಸಿಕೊಂಡು ಕೆಲಸ ಮಾಡುವಂತೆ ಮಾಡಬೇಕು. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಬಿನ್ನಿಮಿಲ್ಲಿನವರು ಯುದ್ಧಕಾಲದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆಮಾಡಿಕೊಂಡರು. ಈಗಲೂ ಅವರ ರಿಸರ್ವ್ ಫಂಡಿನಲ್ಲಿ ಲಕ್ಷಾಂತರ ರೂಪಾಯಿಗಳಿವೆ. ಅಂಥಾದ್ದರಲ್ಲಿ, ಈ ದಿವಸ ಆ ಮಿಲ್ಲಿಗೆ ಸ್ವಲ್ಪ ನಷ್ಟವಾಯಿತೆಂದು ಹೇಳಿ ಉಣ್ಣೆ ಇಲಾಖೆಯನ್ನು ನಿಲ್ಲಿಸಿ ಆ ಕೂಲಿಯವರನ್ನೆಲ್ಲಾ ಕಳುಹಿಸಿ ಬಿಡಬೇಕೆಂದಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಕೈಹಾಕಿ ಆ ಮಿಲ್ಲನ್ನು ಒಂದು joint management ಗೆ ತೆಗೆದುಕೊಳ್ಳುವುದು ಒಳ್ಳೆಯದು. ಇದರಿಂದ ಮಾಲೀಕರಿಗೂ, ಕಾರ್ಮಿಕರಿಗೂ ಇಬ್ಬರಿಗೂ ಒಳ್ಳೆಯದಾಗುತ್ತದೆ. ದೇಶದ ಹಿತ ಚಿಂತನೆಯೂ ಸಾಧನೆಯಾಗುತ್ತದೆ.

ಇನ್ನು ಹೆಚ್ಚಿಗೆ ಏನೂ ಹೇಳಲಿಷ್ಟಪಡುವುದಿಲ್ಲ. ನಮ್ಮ ಮಿತ್ರರುಗಳೇ ಎಲ್ಲವನ್ನೂ ತಿಳಿಸಿದ್ದಾರೆ. ನಮ್ಮ ಶ್ರೀಮನ್ಮಹಾರಾಜರವರು ಸರ್ಕಾರದವರು ಏನೇನು ಕೆಲಸಮಾಡಬೇಕೆಂದು ಸೂಕ್ಷ್ಮವಾಗಿ, ಬಹಳ ಚೆನ್ನಾಗಿ, ತಿಳಿಸಿದ್ದಾರೆ. ಅವರ ಭಾಷಣವನ್ನು ಎಷ್ಟುಸಾರಿ ಓದಿದರೂ ಅಷ್ಟೂ ಹೊಸ ಹೊಸ ಸಮಾಚಾರಗಳು ನಮಗೆ ತಿಳಿದುಬರುತ್ತವೆ.

3 P.M.

ಆಹಾರದ ವಿಚಾರದಲ್ಲಿ, ತಮ್ಮ ಭಾಷಣದಲ್ಲಿ, ಆತುರಪಡಬೇಡಿ ಎಂದು ಶ್ರೀಮನ್ಮಹಾರಾಜರವರು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇದು ಬಹಳ ಒಳ್ಳೆಯದೆಂದು ಕಾಣುತ್ತದೆ. ಕೆಲವರು ಈಗಿರತಕ್ಕ ಎಲ್ಲ ಹತೋಟಿಯನ್ನೂ ಸಂಪೂರ್ಣವಾಗಿ ತೆಗೆದುಹಾಕಿಬಿಡಿ ಎಂದು ಹೇಳಬಹುದು. ಆಹಾರ ಧಾನ್ಯವನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಬಹುದು ಎಂದು ಮಾಡಬೇಕೆಂದು ಹೇಳಬಹುದು. ಹೊರಗಡೆ ಈ ರೀತಿ ಮಾಡಿರುವುದು ಒಳ್ಳೆಯದು. ಆದರೆ ಬೆಂಗಳೂರಿನಲ್ಲಿ ತಕ್ಷಣ ಈ ಹತೋಟಿಯನ್ನು ತೆಗೆದರೆ ಏನಾಗುತ್ತದೆಯೋ ಎಂದು ಹೆದರಿಕೆಯಾಗುತ್ತದೆ. ನಾಳೆ ಸಾಹುಕಾರರು ಧಾನ್ಯವನ್ನು ಹೇರಳವಾಗಿ ಕೊಂಡು ದಾಸ್ತಾನು ಮಾಡಿದರೆ ಬಡವರಿಗೆ ತೊಂದರೆಯಾಗುತ್ತದೆ. ಹೊರಗಡೆಯೇನೋ ಪಡಿತರ ತೆಗೆದುಹಾಕಿದ್ದಾರೆ. ಆದರೆ ಲಕ್ಷಾಂತರ ಜನರಿರುವ ಬೆಂಗಳೂರಿನಲ್ಲಿ ತಕ್ಷಣ ತೆಗೆಯುವುದೆಂದರೆ ಭಯವಾಗುತ್ತದೆ. ಮುಂದೆ ಮಳೆ ಬೆಳೆಗಳು ಚೆನ್ನಾಗಿ ಆದರೆ ಆಗ ಇಲ್ಲಿಯೂ ತೆಗೆದುಹಾಕಿದರೆ ಅನುಕೂಲವಾಗುತ್ತದೆ. ಅದುವರೆಗೆ, ಈಗ ಐದು, ಹತ್ತು ಸೇರು ರಾಗಿ ಅಥವಾ ಅಕ್ಕಿಯನ್ನು ಇಲ್ಲಿಗೆ ಹೊರಗಡೆಯಿಂದ ತೆಗೆದುಕೊಂಡು ಬರುವುದಕ್ಕೆ ಅವಕಾಶಮಾಡಬೇಕೆಂದು ಕೆಲವರು ಹೇಳಿದ್ದಾರೆ; ಹೀಗೆ ಮಾಡಿದರೆ ಅನುಕೂಲವಾಗುತ್ತದೆ. ಈಗಾಗಲೇ ಚಾಮರಾಜಪೇಟೆಯಲ್ಲಿ ರೂಪಾಯಿಗೆ ಒಂದೂ ಕಾಲು ಒಂದೂವರೆ ಸೇರಿನಂತೆ ಅಕ್ಕಿಯನ್ನು ಮಾರುತ್ತಿದ್ದಾರೆ. ಐದು ಅಥವಾ ಹತ್ತು ಸೇರನ್ನು ಇಲ್ಲಿಗೆ ತರುವುದಕ್ಕೆ ಬಿಟ್ಟರೆ ಜನರಿಗೆ ಇನ್ನೂ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲಿ ರೇಷನಿಂಗ್ ತೆಗೆಯಲು ಒಂದೆರಡು ತಿಂಗಳು ಕಾದರೆ ಒಳ್ಳೆಯದೆಂದು ಮಾನ್ಯ ಮಿತ್ರರು ಹೇಳಿದ್ದಾರೆ. ನಾನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅನೇಕ ಸ್ನೇಹಿತರು ಈಗಾಗಲೇ ಮಹಾರಾಜರವರ ಭಾಷಣದಮೇಲೆ ಭಾಷಣಮಾಡಿದ್ದಾರೆ. ನಾನೂ ಸಹ ಶ್ರೀ ರುದ್ರಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ಬಹಳ ಸಂತೋಷದಿಂದ ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

The Assembly adjourned at Ten Minutes past Three of the Clock and re-assembled at Forty Minutes past Three of the Clock, Mr. Speaker in the Chair.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂರು).—ಮಾನ್ಯ ಅಧ್ಯಕ್ಷರೆ, ಸ್ವಾಮಿ, ಶ್ರೀಮನ್ಮಹಾರಾಜರವರು ದಯಪಾಲಿಸಿರತಕ್ಕ ಭಾಷಣದ ವಿಚಾರದಲ್ಲಿ ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ಈಗ ಸಭೆಯಮುಂದೆ ಮಂಡಿಸಿರತಕ್ಕ ವಂದನಾಸಮರ್ಪಣೆ ನಿರ್ಣಯವನ್ನು ನಾನು ಅನುಮೋದಿಸುತ್ತ ಕೇವಲ ಕೆಲವು ವಿಷಯಗಳನ್ನು ಮಾತ್ರ ಹೇಳಬೇಕೆಂದು ಎದ್ದು ನಿಂತಿದ್ದೇನೆ. ಈ ಭಾಷಣವು ಪುಟ್ಟದಾಗಿದ್ದರೂ ಬಹಳ ಸವಿಯುಳ್ಳದ್ದಾಗಿದೆ. ಇಂಗ್ಲೀಷಿನಲ್ಲಿ short and sweet ಎಂದು ಹೇಳುವ ಹಾಗಿದೆ. ಇದರಲ್ಲಿ ಕೊಟ್ಟಿರುವ ವಿಷಯಗಳು ಬಹಳ ಕಡಮೆ; ಬಿಟ್ಟಿರುವ ವಿಷಯಗಳು ಬಹಳ. ಆದರೂ ಕೂಡ ಇದು ಈಗಿನ ಸಂದರ್ಭಕ್ಕೆ ಬಹಳ ಸಮಯೋಚಿತವಾಗಿದೆ.

ಇನ್ನು ಇಂದಿನ ವಿದ್ಯಾಭ್ಯಾಸದ ವಿಷಯವನ್ನು ಕುರಿತು 'ಇದರಬಗ್ಗೆ ಕೆಲವು ಸುಧಾರಣೆಗಳು ನಡೆಯಬೇಕಾದುದು ಅಗತ್ಯವೆಂದು ನಮ್ಮ ಸರ್ಕಾರದವರು ಭಾವಿಸಿದ್ದಾರೆ' ಎಂದು ಅಪ್ಪಣೆ ಕೊಡಿಸಿದ್ದಾರೆ. ಆದರೆ ಆ ಸುಧಾರಣೆಗಳು ಎಂತಹವುಗಳೋ : ಏನೋ, ಅವುಗಳ ವಿಚಾರ ಇನ್ನು ಮುಂದಕ್ಕೆ ಗೊತ್ತಾಗಬೇಕಾಗಿದೆ. ಈಗಿರತಕ್ಕ ವಿದ್ಯಾಭ್ಯಾಸದಿಂದ ನಿಜವಾಗಿಯೂ ನಮ್ಮ ತರುಣರಿಗಾಗಲೀ ಅಥವಾ ಅದರಿಂದ ದೇಶಕ್ಕಾಗಲಿ ಏನೂ ಪ್ರಯೋಜನ ಉಂಟಾಗುವಂತಿಲ್ಲ. ಆದುದರಿಂದ ನಮ್ಮ ಸರ್ಕಾರದವರು ಆದಷ್ಟುಬೇಗ ಈ ಸುಧಾರಣೆಗಳನ್ನು ಅವರು ಅಪ್ಪಣೆ ಕೊಡಿಸಿರುವ ಪ್ರಕಾರ ಅನುಷ್ಠಾನಕ್ಕೆ ತರುತ್ತಾರೆಂದು ನಂಬಿದ್ದೇನೆ.

ಕೈಗಾರಿಕೆಗಳ ವಿಷಯವಾಗಿ ಹೇಳಿರತಕ್ಕ ವಿಚಾರಗಳು ಅಷ್ಟು ವಿಶದವಾಗಿಲ್ಲ. ಆ ಸುಧಾರಣೆಗಳೂ ಮುಂದೆ ಬರಲಿವೆ.

(ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.)

ಇನ್ನು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿ ಕ್ಷಾಮದ ವಿಷಯವನ್ನು ಕುರಿತು ಒಂದೆರಡು ವಿಷಯಗಳನ್ನು ಸೂಚಿಸಿದ್ದಾರೆ. ಈ ಭಾಷಣದಲ್ಲಿ ಕ್ಷಾಮದ ವಿಚಾರ ಅಷ್ಟು ಹೆಚ್ಚಾಗಿಲ್ಲದಿದ್ದರೂ ಶ್ರೀಯುತ ಎಚ್. ಎಸ್. ರುದ್ರಪ್ಪನವರು ಈ ಸಭೆಯ ಮುಂದೆ ಅನೇಕ ವಿಚಾರಗಳನ್ನೆತ್ತಿದ್ದಾರೆ. ನಾಲ್ಕು-ಐದು ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಪ್ರಾರಂಭಿಸಿದ್ದಾರೆ, ಆರೇಳು ಲಕ್ಷ ರೂಪಾಯಿಗಳನ್ನು ಭಾವಿ ತೋಡಿಸತಕ್ಕ ಬಗ್ಗೆ ಮತ್ತು ಸಾಲಗಳ ರೂಪವಾಗಿ ಒದಗಿಸಿದ್ದಾರೆ, ಜಮೀನ್ ಆಬಾದಿನ ಬಗ್ಗೆ ದ್ರವ್ಯಸಹಾಯ ಮಾಡಿದ್ದಾರೆ, ಹುಲ್ಲಿನ ಅಭಾವವಿರತಕ್ಕ ಪ್ರದೇಶಗಳಲ್ಲಿ ಹುಲ್ಲಿನ ಸರಬರಾಯಿ ಮಾಡಿದ್ದಾರೆ ಎಂದು ಇತ್ಯಾದಿ ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ, ಸಂಸ್ಥಾನದ ಈಶಾನ್ಯ ಪ್ರದೇಶದಲ್ಲಿ ಕ್ಷಾಮ ತಲೆದೋರಿದೆ, ಈ ಕಷ್ಟ ಕಾರ್ಪಣ್ಯಗಳಿಂದ ನಮ್ಮ ಸರ್ಕಾರದವರಿಗೆ ಆತಂಕವುಂಟಾಗಿರುವುದಲ್ಲದೆ, ಪರಿಹಾರದಬಗ್ಗೆ ಕೈಗೊಂಡಿರತಕ್ಕ ಕಾರ್ಯಕ್ರಮಗಳ ಸಲುವಾಗಿ ವೆಚ್ಚವು ಇನ್ನೂ ಹೆಚ್ಚಿ, ಆಯವ್ಯಯದ ಪಟ್ಟಿಯಲ್ಲಿ ಮತ್ತಷ್ಟು ಖೋತಾ ಬೀಳಬಹುದೆಂದು ಅಪ್ಪಣೆ ಕೊಡಿಸಿದ್ದಾರೆ. ಆದರೆ ಈ ಪರಿಹಾರ ಕ್ಕೋಸ್ಕರವಾಗಿ ಎಷ್ಟು ಕೋಟಿ ಅಥವಾ ಎಷ್ಟು ಲಕ್ಷ ರೂಪಾಯಿಗಳು ಖರ್ಚಾಗಿಹೋಗಿರುತ್ತವೆಯೋ ಅದೂ ಗೊತ್ತಾಗುವಂತಿಲ್ಲ. ಈ ಕ್ಷಾಮನಿವಾರಣಾ ಬಾಬಿನಲ್ಲಿ ಈ ಕಾರ್ಯಕ್ರಮಗಳಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿದೆಯೆಂದು ಹಿಂದಿನ ಸರ್ಕಾರದವರು ತಿಳಿಸಿದ್ದರು. ಇನ್ನೂ ಈ ಪರಿಹಾರಗಳ ಬಾಬಿನ ಕೆಲಸಕಾರ್ಯಗಳು ನಡೆಯಬೇಕಾದದ್ದು ಬಹಳವಾಗಿವೆ. ಹಾಗೆ ಮೊದಲು ಈ ಬಾಬಿಗಾಗಿ ಮುಡುಪಾಗಿಟ್ಟಿದ್ದ ಹತ್ತು ಲಕ್ಷ ರೂಪಾಯಿಗಳು ಇನ್ನೂ ಮುಗಿದಿಲ್ಲ. ಹೊರ ದೇಶಗಳಲ್ಲಿ ಎಂದರೆ ರಾಯಲಸೀಮಾ ಇತ್ಯಾದಿ ಪ್ರದೇಶಗಳಲ್ಲಿ ಈ ಕ್ಷಾಮನಿವಾರಣೆಯ ಬಗ್ಗೆ ಒಂದೊಂದು ತಾಶೀಲ್‌ಗೂ ಅಲ್ಲಿ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡಲಾಗಿದೆ. ಒಂದೊಂದು ಜಿಲ್ಲೆಗೆ 50-60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೆಲಕೆಲವು ತಾಲ್ಲೂಕುಗಳಲ್ಲಿ 3-4-5 ಕೋಟಿ ರೂಪಾಯಿಗಳ ವರೆಗೂ ಖರ್ಚುಮಾಡಿದ್ದಾರೆ. ಹೀಗೆ ಅಲ್ಲೆಲ್ಲಾ ಕ್ಷಾಮನಿವಾರಣೆಗಾಗಿ ಯಥೇಷ್ಟವಾಗಿ ಹಣವನ್ನು ಖರ್ಚುಮಾಡಿದ್ದಾರೆ.

ಆದರೆ ಮೈಸೂರು ಸಂಸ್ಥಾನದಲ್ಲಿ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮತ್ತು ಸಂಸ್ಥಾನದ ಇತರಕಡೆಗಳಲ್ಲಿ ಕ್ಷಾಮ ಉಗ್ರರೂಪವನ್ನು ತಾಳಿದಮೇಲೆ ಜನರ ಕಷ್ಟ ನಿವಾರಣೆಗಾಗಿ ಈ ಸಂದರ್ಭದಲ್ಲಿ ಕೇವಲ ಸುಮಾರು 5 ಲಕ್ಷ ರೂಪಾಯಿಗಳನ್ನು ಕಾಮಗಾರಿ ಕೆಲಸಗಳಿಗೂ ಮತ್ತು ಸುಮಾರು 5-6 ಲಕ್ಷ ರೂಪಾಯಿಗಳನ್ನು ಜಮೀನು ಆಬಾದು ವಗೈರೆಗೂ ಖರ್ಚುಮಾಡಿರುವುದು ಏನೇನೂ ಸಾಲದು ಎಂದು ಹೇಳಬೇಕಾಗಿದೆ. ಅದೃಷ್ಟವಶಾತ್ ಮಂಡ್ಯ ಜಿಲ್ಲಾ ರೈತರುಗಳು, ಶ್ರೀಮನ್ಮಹಾರಾಜರವರು, ಪಂಡಿತ ಜವಹಿರಲಾಲ್ ನೆಹರೂರವರು ಮತ್ತು ಇನ್ನೂ ಅನೇಕ ಮಂದಿ ಸಾರ್ವಜನಿಕ ಮುಂದಾಳುಗಳು ಮುಂದೆ ಬಂದು ಈ ಕ್ಷಾಮಪರಿಸ್ಥಿತಿಯನ್ನು ನಿವಾರಿಸಿ ಜನರಿಗೆ ಸಹಾಯ ಒದಗಿಸಿ ಬಹಳ ಉದಾರವಾಗಿ ಸಹಾಯ ಮಾಡುತ್ತಿರುವುದು ನಮ್ಮ ಸುಯೋಗವೆಂದೇ ಹೇಳಬೇಕಾಗಿದೆ. ಮೈಸೂರು ಸರ್ಕಾರದವರು ಕೂಡ ಸಹಾಯ ಮಾಡುತ್ತಿದ್ದಾರೆ; ಇಲ್ಲವೆಂದು ಹೇಳುವಹಾಗಿಲ್ಲ. ಕಾಮಗಾರಿ ಕೆಲಸಗಳಿಗಾಗಿ ಕೆಲಸವಿಲ್ಲದಿರುವ ಜನರಿಗೆ ಕೆಲಸವನ್ನೊದಗಿಸಿ ಹಿಂದೆ ಹೆಂಗಸರಿಗೆ 8 ಆಣೆ ಗಂಡಸರಿಗೆ 10 ಆಣೆಯಂತೆ ಕೊಡುತ್ತಿದ್ದ ಕೂಲಿಯನ್ನು ಕ್ರಮವಾಗಿ 10 ಆಣೆ, 12 ಆಣೆಗೆ ಏರಿಸಿ ಸಹಾಯ ಮಾಡಿದ್ದಾರೆ. ಅನೇಕ ಸ್ಥಳಗಳಲ್ಲಿ ಇನ್ನೂ ಕಾಮಗಾರಿ ಕೆಲಸ ಮಾಡಬೇಕು, ಕೂಲಿ ಸಾಲದು, ಕೂಲಿ ಕೊಡುವ ಹಣಕ್ಕೆ ಬದಲಾಗಿ ದವಸ ಕೊಡಬೇಕು ಎಂಬ ದೂರುಗಳು ಆ ಪ್ರದೇಶವಲ್ಲಿ ಇದುವರೆಗೂ ಬರುತ್ತಲೇ ಇರುತ್ತವೆ. ಕೋಲಾರ ಜಿಲ್ಲೆಯ ಕ್ಷಾಮ

ಪರಿಹಾರದ ಕೆಲಸವನ್ನೂ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದಾರೆ. ಹಾಗೆ ಕಾಮಗಾರಿ ಕೆಲಸವನ್ನು ರೆವೆನ್ಯೂ ಅಧಿಕಾರಿಗಳಿಗೆ ವಹಿಸಿರುವುದರಿಂದ ಕೆಲಸ ಸುಸೂತ್ರವಾಗಿ ಜನರಿಗೆ ಸಹಾಯವಾಗುವ ರೀತಿಯಲ್ಲಿ ನಡೆಯುತ್ತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರಬೇಕಾಗಿದೆ. ಏಕೆಂದರೆ ರೆವೆನ್ಯೂ ಅಧಿಕಾರಿಗಳಿಗೆ ಅವರ ಕೆಲಸವೇ ಬೇಕಾದಷ್ಟಿದೆ. ಜೊತೆಗೆ ಕ್ಷಾಮ ಪರಿಹಾರದ ಕೆಲಸವನ್ನೂ ಅವರಿಗೇ ವಹಿಸಬೇಕೆಂದು ಹೇಳಿದರೆ ಅವರು ತಮ್ಮ ಕೆಲಸದ ಜೊತೆಯಲ್ಲಿ ಕಾಮಗಾರಿ ಕೆಲಸಗಳಕಡೆ ಸರಿಯಾಗಿ ಗಮನಕೊಟ್ಟು ಪ್ರತಿನಿತ್ಯ ಅಥವಾ ವಾರಕ್ಕೆ ಎರಡು ನೂರು ಸಲ ಕೂಲಿ ಪಾವತಿಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಿಶೇಷ ಅಧಿಕಾರಿಯನ್ನು ಇದಕ್ಕೆ ನೇಮಕಮಾಡಿ ತಾವು ಕ್ಷಾಮದ ದವಡೆಗೆ ಸಿಕ್ಕಿರುವ ಪ್ರದೇಶಗಳ ಜನರ ಮತ್ತು ದನಗಳ ಕ್ಷೇಮಚಿಂತನೆಗಾಗಿ ಸಾಧ್ಯವಾದಷ್ಟು ಹೆಚ್ಚು ಗಮನ ಕೊಡುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮದ್ರಾಸು ಸರ್ಕಾರದವರು ಫ್ಯಾಮಿನ್ ಕಮಿಷನರ್ ಎಂಬ ಒಬ್ಬ ರೆವೆನ್ಯೂ ಬೋರ್ಡ್ ಅಧಿಕಾರಿಯನ್ನು ನೇಮಿಸಿದ್ದರು. ನಮ್ಮ ಸಂಸ್ಥಾನದಲ್ಲೂ ಕೂಡ ಈ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಮುಖ್ಯ ವಿಷಯ. ದನಗಳು ವಿಶೇಷವಾಗಿ ಸತ್ತುಹೋಗಿವೆ. ಮೊದಲೇ ಸಕಾಲದಲ್ಲಿ ಈ ವಿಷಯಕ್ಕೆ ಗಮನ ಕೊಟ್ಟಿದ್ದರೆ ದನಗಳು ಸಾಯದೆ ಉಳಿಯಬಹುದಾಗಿತ್ತು ಎಂದು ಸರ್ಕಾರದವರಿಗೂ ಮತ್ತು ಮಾನ್ಯ ಮಿತ್ರರಿಗೂ ಹೇಳುತ್ತೇನೆ. ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ರೈತರು ಬಹಳ ಮುತುವರ್ಜಿಯಿಂದ ಉದಾರವಾಗಿ ಸಹಾಯಮಾಡಿ ದಾನಿಗಳಿಂದ ಹುಲ್ಲನ್ನು ವಸೂಲುಮಾಡಿ ಮುಖ್ಯ ಮಂತ್ರಿಗಳ ಮುಖಾಂತರ ಕೋಲಾರ ಜಿಲ್ಲೆಗೆ ಸಾಗಿಸುತ್ತಿದ್ದಾರೆ. ಆದರೆ ಆ ಹುಲ್ಲನ್ನು ಸಕಾಲದಲ್ಲಿ ಅಲ್ಲಿಗೆ ತರುವುದಕ್ಕೆ ಯಾವ ಸೌಕರ್ಯವೂ ಇಲ್ಲ. ಒಂದೂವರೆ ತಿಂಗಳ ಹಿಂದೆ ಶ್ರೀ ಎಚ್. ಸಿದ್ದವೀರಪ್ಪನವರು, ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಮತ್ತು ಶ್ರೀ ಕೆ. ಹನುಮಂತಯ್ಯನವರು ಅಲ್ಲಿ ಪ್ರವಾಸ ಮಾಡಿದಾಗ ಈ ಕಷ್ಟವನ್ನು ಅವರ ಗಮನಕ್ಕೆ ಪದೇಪದೇ ತಂದಿದ್ದೇವೆ. ಆದರೆ ಆ ಹುಲ್ಲು ಬಂಗಾರಪೇಟೆ, ಗೋರಿಬಿದನೂರು ಕಡೆ ಸ್ವಲ್ಪ ಬರುತ್ತಿದೆ. ಆದರೆ ಅಲ್ಲಿನ ಅಭಾವ, ತೀಕ್ಷ್ಣತೆ ಎಷ್ಟು ಜಾಸ್ತಿ ಇದೆಯೋ ಅದಕ್ಕನುಗುಣವಾಗಿ ಆ ಹುಲ್ಲು ಸರಬರಾಜು ಆಗುತ್ತಿಲ್ಲ. ಅದೃಷ್ಟವಶಾತ್ ಮಳೆಯೂ ಈ ಸಂದರ್ಭದಲ್ಲಿ ಬಂದು ಪ್ರಕೃತಿಯೂ ಸರ್ಕಾರದೊಡನೆ ಕ್ಷಾಮನಿವಾರಣೆಯಲ್ಲಿ ಭಾಗ ವಹಿಸಿದೆಯೆಂದು ಹೇಳುವಂತಾಯಿತು. ಆದರೆ ಕೆಲವುಕಡೆ ಮಳೆ ಜಾಸ್ತಿಬಂತು, ಕೆಲವುಕಡೆ ಇಲ್ಲ. ಬಂದುದು ಅಲ್ಲಿಗೇ ನಿಂತುಹೋಯಿತು. ನೀರಿನ ಅಭಾವ ಹೇಗೋ ತೀರಿದೆ. ಆದರೆ ದನಗಳಿಗೆ ಮಳೆ ಬಂದರೂ ಕೂಡ, ನೆಲ ಹಚ್ಚಗಿದ್ದರೂ ಕೂಡ ಹುಲ್ಲು ಬಹಳ ಯಥೇಚ್ಛವಾಗಿ ಬರಬೇಕಾದ್ದು ಆವಶ್ಯಕವಾಗಿದೆ. ಮಿಲಿಟರಿ ಲಾರಿಗಳಲ್ಲಿ ಸಾಗಿಸಿ ಎಂದು ಹೇಳಿದರೆ ಇಂಡಿಯಾ ಸರ್ಕಾರದವರು ಅವನ್ನು ಕೊಟ್ಟರೋ ಇಲ್ಲವೋ ಗೊತ್ತಿಲ್ಲ. ಮೈಸೂರು ಸರ್ಕಾರದವರು ಮಿಲಿಟರಿ ಲಾರಿ ಕೊಡದೆಹೋದರೆ ಯಾವುದೋ ಒಂದು ವಿಧವಾಗಿ ಸಾಗಿಸುವುದಕ್ಕೆ ಅವಕಾಶ ಮಾಡಿ ದನಗಳ ಪ್ರಾಣವನ್ನುಳಿಸಿ ಪರಿಹಾರವನ್ನೊದಗಿಸುವುದಕ್ಕೆ ಅವಕಾಶ ಮಾಡಬಹುದಾಗಿತ್ತು. ಯಾರಾದರೂ ಒಬ್ಬರು ಕ್ಷಾಮದಿಂದ ಸತ್ತರೆ ಎಷ್ಟೋ ಕಳವಳ ಪಡುತ್ತೇವೆ. ಆದರೆ ದನಗಳ, ಮೂಕಪ್ರಾಣಿಗಳ ಕಷ್ಟ ಹೇಳುವುದಕ್ಕೇ ಅಸಾಧ್ಯ. ಆದ್ದರಿಂದ ಅವುಗಳು ಸಾಯದಂತೆ ಯಥೇಚ್ಛವಾಗಿ ಹುಲ್ಲನ್ನು ಕಳುಹಿಸಿ ಅವುಗಳ ಪ್ರಾಣವನ್ನುಳಿಸುವುದಕ್ಕೆ ಎಷ್ಟೋ ಸಹಾಯ ಮಾಡಬಹುದಾಗಿತ್ತು. ಸಕಾಲದಲ್ಲಿ ಹೆಚ್ಚು ಸಹಾಯ ಎಲ್ಲಾ ರೈತರಿಗೂ ಒದಗುವಂತೆ ಮಾಡುವುದು ಬಹಳ ಒಳ್ಳೆಯದು. ಗೋಸಂಪತ್ತು ಬಹಳ ಮುಖ್ಯವಾದುದು. ದನಗಳ ಬೆಲೆ ಹಿಂದೆ ವಿಶೇಷ ಹೆಚ್ಚಾಗಿತ್ತು. ಒಂದು ಜೊತೆ ಎತ್ತಿಗೆ 600 ರೂಪಾಯಿಗಳಿಂದ ಒಂದು

(ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.)
ಸಾವಿರ ರೂಪಾಯಿಗಳವರೆಗೂ ಇತ್ತು. ಈಗ ಕ್ಷಾಮದ ದೆಸೆಯಿಂದ ಅದೇ ಬೆಲೆ 150-200 ರೂಪಾಯಿಗಳು ಕೂಡ ಆಗಿದೆ. ಸಾಯುವ ಪರಿಸ್ಥಿತಿಯಿರುವಾಗ 5-10 ರೂಪಾಯಿಗಳಿಗೂ ಅನೇಕರು ಕೊಂಡಿದ್ದಾರೆ. 50 ರಿಂದ 70 ದನಗಳವರೆಗೆ ಇಟ್ಟುಕೊಂಡಿದ್ದವರ ಬಳಿ ಇದ್ದ ರಾಸುಗಳಲ್ಲಿ ಶೇಕಡಾ 60-70 ಭಾಗ ಸತ್ತು ಹೋಗಿ ಅವರಿಗೆ ದನಗಳೇ ಇಲ್ಲದಿರುವ ಪರಿಸ್ಥಿತಿಯುಂಟಾಗಿದೆ. ಪತ್ರಿಕಾ ಪ್ರತಿನಿಧಿಗಳು ಮತ್ತು ಶಾಸನ ಸಭೆಯ ಸದಸ್ಯರನೇಕರು ಆ ಪ್ರದೇಶದಲ್ಲಿ ಪ್ರವಾಸಮಾಡಿ ಖುದ್ದಾಗಿ ವಿಷಯವನ್ನರಿತಿದ್ದಾರೆ. ಅವರಿಗೆ ಅಲ್ಲಿನ ಕಷ್ಟ ಚೆನ್ನಾಗಿ ಗೊತ್ತು. ಅನೇಕ ಮನೆಗಳಲ್ಲಿ ಕುರಿ ಮಂದೆಗಳೂ ಸತ್ತುಹೋಗಿವೆ. ಅವುಗಳಿಗೆ ಒಂದೊಂದಕ್ಕೆ 15-20 ರೂಪಾಯಿಗಳ ಬೆಲೆಯಿತ್ತು. ಈಗ ಅವನ್ನು ಒಂದು ರೂಪಾಯಿ ಮತ್ತು ಎಂಟಾಣೆಗೆ ಕೊಡುತ್ತಿದ್ದಾರೆ. ಹೀಗಿರುವ ಪರಿಸ್ಥಿತಿಯಲ್ಲಿ ದಯವಿಟ್ಟು ಸರ್ಕಾರದವರು ಹುಲ್ಲಿನ ಅಭಾವ ಏನಾದರೂ ಮಾಡಿ ನೀಗಬೇಕು. ಎಲ್ಲಕ್ಕಿಂತ ಹುಲ್ಲಿನ ಅಭಾವ ವಿಶೇಷವಾಗಿದೆಯೆಂದು ತಿಳಿಸಿ ತಕ್ಕ ಪರಿಹಾರ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ. ಖಾಸಗೀ ಸಂಸ್ಥೆಗಳ ಮತ್ತು ಖಾಸಗೀ ಮಹನೀಯರ ಸಹಾಯ ಹೆಚ್ಚಾಗಿ ಆಗಬೇಕು, ಸಂಸ್ಥಾನದಲ್ಲಿ ಅದು ಅತ್ಯಾವಶ್ಯಕ ಎಂದು ಶ್ರೀ ರುದ್ರಪ್ಪನವರು ಹೇಳಿದರು. ಅದನ್ನು ಅಕ್ಷರಶಃ ಒಪ್ಪುತ್ತೇನೆ. ನಮ್ಮ ಸಂಸ್ಥಾನ ತಕ್ಕಮಟ್ಟಿಗೆ ಸಹಾಯ ನೀಡಿದೆ. ಕ್ಷಾಮ ಬಂದಮೇಲೆ ಎಷ್ಟೋ ಕಡೆಯಿಂದ ಸಹಾಯ ಒದಗಿದೆ. ಖಾಸಗೀ ಸಂಸ್ಥೆಗಳು, ಜಿಲ್ಲಾ ಸಮಿತಿಗಳು ಮತ್ತು ತಾಲ್ಲೂಕು ಸಮಿತಿಗಳು ಅಲ್ಪಸ್ವಲ್ಪ ವಸೂಲುಮಾಡಿ ಕಳಿಸಿವೆ. ಮಂಡ್ಯ ಜಿಲ್ಲೆಯಲ್ಲಿ ಕ್ಷಾಮವಿಲ್ಲದಿದ್ದರೂ ಕ್ಷಾಮನಿವಾರಣಾ ಸಮಿತಿ ಮಾಡಿ ಬೇಕಾದಷ್ಟು ಸಹಾಯ ಕಳುಹಿಸುತ್ತಿದ್ದಾರೆ. ಅದು ಮಾರ್ಗದರ್ಶಕವಾಗಿದೆ. ನಮ್ಮ ಶ್ರೀಮನ್ಮಹಾರಾಜರವರು 30 ಸಾವಿರ ರೂಪಾಯಿಗಳ ಧನ ಸಹಾಯ ಮಾಡಿದ್ದಾರೆ. ಮತ್ತು ನಮ್ಮ ಜಿಲ್ಲೆಯಲ್ಲಿ 22ನೆಯ ತಾರೀಖು ಖುದ್ದಾಗಿ ಪ್ರವಾಸ ಮಾಡಿ ಕ್ಷಾಮದ ಹೊಡೆತಕ್ಕೆ ಸಿಕ್ಕಿರುವ ಜನರ ಕಷ್ಟಪರಿಸ್ಥಿತಿಯನ್ನು ತಿಳಿದುಕೊಳ್ಳುವವರಾಗಿದ್ದಾರೆ. ಜವಾಹಿರಲಾಲ್ ನೆಹ್ರೂರವರು ಉದಾತ್ತ ಧ್ಯೇಯವನ್ನು ಮುಂದಿಟ್ಟು ಮದ್ರಾಸಿಗೆ ಸಹಾಯ ಮಾಡಿದಂತೆ ಮೈಸೂರು ಸಂಸ್ಥಾನಕ್ಕೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಮೊದಲು ಅಸ್ಸಾಂ ಪರಿಹಾರದಿಂದ 50 ಸಾವಿರ ರೂಪಾಯಿಗಳನ್ನು ಕೊಟ್ಟು, ಆಮೇಲೆ 20 ಸಾವಿರ ರೂಪಾಯಿಗಳನ್ನು ಕಳುಹಿಸಿ, ಮತ್ತೆ ಈ ದಿವಸ 30 ಸಾವಿರ ರೂಪಾಯಿಗಳನ್ನು ಸಹಾಯ ಮಾಡಿದ್ದಾರೆ. ಹೀಗೆ ಸುಮಾರು ಒಂದು ಲಕ್ಷ ರೂಪಾಯಿಗಳವರೆಗೂ ಸಹಾಯ ಮಾಡಿದ್ದಾರೆಂದು ಹೇಳಬೇಕಾಗಿದೆ. ಆದರೆ ನಮ್ಮ ಸರ್ಕಾರದವರು ಕ್ಷಾಮದ ಪರಿಸ್ಥಿತಿ ಹೀಗಿದೆ ಎಂದು ಇಂಡಿಯಾ ಸರ್ಕಾರಕ್ಕೆ ಚೆನ್ನಾಗಿ ತಿಳಿಸಬೇಕಾಗಿತ್ತು ಎನ್ನಿಸುತ್ತದೆ. ಆಹಾರ ಇಲಾಖೆ ಮಂತ್ರಿಗಳಾದ ಶ್ರೀ ಮುನ್ಷಿಯವರು ನಮ್ಮ ಸಂಸ್ಥಾನಕ್ಕೆ ಬಂದಿದ್ದಾಗ ಬಾಗೇಪಲ್ಲಿ, ಗುಡಿಬಂಡೆ, ಶ್ರೀನಿವಾಸಪುರ ಮುಂತಾದ ಸ್ಥಳಗಳಿಗೆ ಅವರನ್ನು ಕರೆದುಕೊಂಡುಹೋಗಿ ವಾಸ್ತವಾಂಶವನ್ನು ತಿಳಿಸಿದ್ದರೆ ಇಂಡಿಯಾ ಸರ್ಕಾರದವರು ಕ್ಷಾಮಪ್ರದೇಶಗಳಲ್ಲಿ ಮದ್ರಾಸ್ ಪ್ರಾಂತದಲ್ಲಿ ಸಹಾಯ ಮಾಡಿದಹಾಗೆ ಇಲ್ಲೂ ಸಹ ಮಾಡಿ, ಅಲ್ಲಿ ಪರಿಹಾರ ಒದಗಿಸಿದಂತೆ ಇಲ್ಲೂ ಒದಗಿಸುತ್ತಿದ್ದರು ಎನಿಸುತ್ತದೆ. ಏನೇ ಆಗಲಿ ಇಂಡಿಯಾ ಸರ್ಕಾರದ ಗಮನ ಕ್ಷಾಮಪ್ರದೇಶದ ಕಡೆ ಬಿದ್ದಿದೆ. ಮೈಸೂರು ಸರ್ಕಾರದ ಗಮನವೂ ಬಿದ್ದಿದೆ. ಸಾರ್ವಜನಿಕರ ಗಮನವೂ ಬಿದ್ದಿದೆ. ಆದರೂಕೂಡ ಕ್ಷಾಮ ಪ್ರದೇಶದಕಡೆ ಹೆಚ್ಚು ಗಮನ ಕೊಟ್ಟು ಮುಂದೆ ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಬೇಕಾಗಿದೆ.

4 P.M.

ಇನ್ನೊಂದು ವಿಷಯ. ಅದೇನೆಂದರೆ, ಜನಗಳಿಗೆ ಕೊಂಡುಕೊಳ್ಳುವ ಶಕ್ತಿ ಇಲ್ಲ. ಕ್ಷಾಮ ಪರಿಹಾರಗಳನ್ನು ಕೈಗೊಂಡಿರುವುದರಿಂದ ಸ್ವಲ್ಪ

ಹಣ ಸಂಪಾದಿಸುತ್ತಾರೆ. ದವಸ ಕೊಂಡು ಕೊಳ್ಳುತ್ತಾರೆ. ಆದರೆ ಈಗ ದನಗಳು ಸತ್ತು ಹೋಗಿವೆ. ಅವರ ಒಡವೆ ವಸ್ತುಗಳನ್ನು ಮಾರಿಕೊಂಡಿದ್ದಾರೆ. ಈಚೆಗೆ ಮಳೆ ಬಂದ ಮೇಲೆ ಹೊಸದಾಗಿ ಅವರು ಸಂಸಾರವನ್ನು ಕಟ್ಟಿಕೊಂಡು ನಡೆಸಬೇಕಾಗಿದೆ. ಮುಂದಿನ ಜೀವನೋಪಾಯದ ಮಾರ್ಗ ನೋಡಿಕೊಳ್ಳಬೇಕಾಗಿದೆ. ಈ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದು, ಸ್ವಲ್ಪ ಮಳೆ ಬಂದಮಾತ್ರದಿಂದಲೇ ಕ್ಷಾಮ ಹೋಯಿತು ಎನ್ನುವಹಾಗಿಲ್ಲ. ಇದನ್ನು ಸುಗ್ಗಿ ಕಾಲದವರೆಗೂ ಮುಂದುವರಿಸಿಕೊಂಡು ಬರಬೇಕೆಂದು ನಾನು ಸರ್ಕಾರದಲ್ಲೂ, ಸಾರ್ವಜನಿಕರಲ್ಲೂ ಇನ್ನೊಂದುಬಾರಿ ಪ್ರಾರ್ಥನೆ ಮಾಡುತ್ತೇನೆ. ಈ ಜನಗಳಿಗೆ ಸಾಲಗಳನ್ನು ಎಂದರೆ ಜಮೀನು ಆಬಾದಿಗೆ ತಕಾವಿ ಸಾಲಗಳನ್ನೂ, ಬಾವಿ ತೆಗೆಯುವುದಕ್ಕೆ ಸಾಲಗಳನ್ನೂ ಕೊಡಬೇಕು. ಕೇವಲ 100, 120, 125 ರೂಪಾಯಿಗಳಂತೆ ಅಲ್ಪಸ್ವಲ್ಪ ಹಣಕೊಟ್ಟರೆ ಏನೂ ಕೆಲಸ ಆಗುವುದಿಲ್ಲ. ಕ್ಷಾಮ ಪ್ರದೇಶಗಳಿಗೆ ಎಂದರೆ ತುಮಕೂರು, ಚಿತ್ರದುರ್ಗ, ಕೋಲಾರ ಈ ಜಿಲ್ಲೆಗಳಿಗೆ ಉದಾರವಾಗಿ ಇನ್ನೂ ಹೆಚ್ಚು ಹಣ ದೊರಕುವಂತೆ ಮಾಡಿ ಅವರ ಸಂಸಾರವನ್ನು ನಡೆಸಲು ವಸಾಹತುಗಳನ್ನು ಕಟ್ಟಿಕೊಳ್ಳುವುದಕ್ಕೆ, ಅವಕಾಶವಾಗುವಹಾಗೆ ಸಾಲಗಳನ್ನು ಹೆಚ್ಚಾಗಿ ಕೊಡಬೇಕೆಂದು ನಾನು ಪ್ರಾರ್ಥನೆಮಾಡಿ, ಬಾಕಿ ವಿಷಯಗಳನ್ನು ಅನೇಕ ಸ್ನೇಹಿತರು ಹೇಳಿಗುವುದರಿಂದಲೂ, ಅನೇಕರು ಹೇಳುವವರಾಗಿರುವುದರಿಂದಲೂ ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ನಮ್ಮ ರಾಜಪ್ರಮುಖರಾದ ಶ್ರೀಮನ್ಮಹಾರಾಜರವರು ನಿನ್ನೆ ಅವರ ಭಾಷಣ ಮಾಡಿದಂಥ ಕಾಲದಲ್ಲಿ ದೇಶದ ಮುಂದೆ ಇರತಕ್ಕಂಥ ಕೆಲವು ಮುಖ್ಯವಾದ ನಮ್ಮೆಲ್ಲರ ಗಮನವನ್ನು ಸೆಳೆಯಬಹುದಾದಂಥ ಮತ್ತು ನಾವೆಲ್ಲರೂ ಕಲೆತು ದೀರ್ಘವಾಗಿ ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಬರಬಹುದಾದಂಥ ಐದು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಈಗ ದೇಶದ ಮುಂದೆ ಇರತಕ್ಕ ಬಹಳ ಮುಖ್ಯವಾದ ಆಹಾರದ ಹತೋಟಿ ಹೋಗತಕ್ಕ ವಿಚಾರ, ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಾರ್ಪಾಡು ಮಾಡಬಹುದಾದಂಥ ಕೆಲವು ಮುಖ್ಯ ವಿಚಾರ, ನಮ್ಮ ಸಂಸ್ಥಾನದಲ್ಲಿ ಈಗ ಜಾರಿಯಲ್ಲಿರತಕ್ಕ ಎಲ್ಲಾ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದಾದಂಥ ವಿಚಾರ ಮತ್ತು ದೇಶದಲ್ಲಿ ಈಗ ನಮ್ಮ ಮುಂದೆ ಇರತಕ್ಕ ಕ್ಷಾಮ ಪರಿಸ್ಥಿತಿಯ ನಿವಾರಣೆಯ ವಿಚಾರಗಳು ಪ್ರಸ್ತಾಪಿಸಲ್ಪಟ್ಟಿವೆ. ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಹಾಲಿ ಇರತಕ್ಕ ಕ್ಷಾಮಪರಿಸ್ಥಿತಿ ವಿಚಾರದಲ್ಲಿ ನನ್ನ ಮಿತ್ರರಾದ ಮತ್ತು ಅದೇ ಜಿಲ್ಲೆಯವರಾದಂಥ ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ದೀರ್ಘವಾಗಿ ಮಾತನಾಡಿದ್ದಾರೆ. ಆ ವಿಚಾರದಲ್ಲಿ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಉಳಿದ, ಅದರಲ್ಲೂ ಬಹಳ ಮುಖ್ಯವಾದಂಥ, ಈ ಆಹಾರದ ನಿಯಂತ್ರಣವನ್ನು ರದ್ದು ಮಾಡುವ ವಿಚಾರದಲ್ಲಿ ದೇಶದಲ್ಲಿರತಕ್ಕ ಅಭಿಪ್ರಾಯ ಮತ್ತು ನಮ್ಮ ಕರ್ತವ್ಯಗಳ ಬಗ್ಗೆ ನಾನು ಹೆಚ್ಚು ಪ್ರಸ್ತಾಪಿಸಬಹುದಾಗಿದೆ; ಮತ್ತು ಶ್ರೀಮನ್ಮಹಾರಾಜರವರೂ ಸಹ ಇದನ್ನು ಪೂರ್ಣವಾಗಿ, ವಿವರವಾಗಿ, ದೀರ್ಘವಾಗಿ ಚರ್ಚೆಮಾಡಿ ಒಂದು ಸರಿಯಾದ ನಿರ್ಧಾರಕ್ಕೆ ಬರಲಿ ಎಂಬ ಮುನ್ಸೂಚನೆಯನ್ನು ಕೊಟ್ಟಿದ್ದಾರೆ. ನಮ್ಮೆಲ್ಲರಿಗೂ ಗೊತ್ತಿರುವಹಾಗೆ ಈ ಆಹಾರದ ನಿಯಂತ್ರಣದಿಂದ ದೇಶದಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತ ಜನಾಂಗಕ್ಕೆ ಎಷ್ಟು ತೊಂದರೆಯಾಗಿತ್ತು ಎಂಬುದು ಎಲ್ಲರಿಗೂ ಗೊತ್ತಾಗಿದೆ. ನಮ್ಮ ಘನಸರ್ಕಾರದವರು ದಿಟ್ಟತನದಿಂದ ಈ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬಂದು ಆಹಾರವನ್ನು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಯಾವ ನಿರ್ಬಂಧವೂ ಇಲ್ಲದೆ ಸಾಗಿಸಬಹುದು ಎಂಬ ಒಂದು ನಿರ್ಧಾರವನ್ನು ತೆಗೆದುಕೊಂಡದ್ದರ ಪರಿಣಾಮವಾಗಿ ಜನಗಳಲ್ಲಿ ಎಷ್ಟು ಸಂತೋಷವುಂಟಾಗಿದೆ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ನಮ್ಮ ಶ್ರೀಮನ್ಮ

(ಶ್ರೀ ಕೆ. ಲಕ್ಕಪ್ಪನವರು.)

ಮಹಾರಾಜರವರು ತಮ್ಮ ಭಾಷಣದ ಕಾಲದಲ್ಲಿ ಹೀಗೆ ಹೇಳಿದ್ದಾರೆ:

> "This new policy, I am happy to state, has proved to be the forerunner of a reorientation of food policies in other States."

ಇದು ಬಹಳ ಅರ್ಥಗರ್ಭಿತವಾಗಿದೆ. ನಮ್ಮ ಮೈಸೂರು ಸರ್ಕಾರದವರು ಯಾವ ಧೈರ್ಯದಿಂದ ಈ ನಿರ್ಧಾರವನ್ನು ತೆಗೆದುಕೊಂಡರೋ ಅದರ ಪರಿಣಾಮವಾಗಿ ನಮ್ಮ ಇಂಡಿಯಾ ದೇಶದಲ್ಲಿ ಇತರ ಪ್ರಾಂತಗಳವರೂ ಸಹ ಈ ಆಹಾರ ನಿಯಂತ್ರಣದ ವಿಚಾರದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡು ಹತೋಟಿ ವಜಾಮಾಡುವುದಕ್ಕೆ ಪ್ರಯತ್ನಮಾಡಿರುವುದು ನಮಗೆಲ್ಲರಿಗೂ ಗೊತ್ತಿದೆ. ಈ ವಿಚಾರದಲ್ಲಿ ಮೈಸೂರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿತು. ಅದರ ಪರಿಣಾಮವಾಗಿ ಇತರರೂ ಸಹ ಇದನ್ನು ಅನುಕರಣಮಾಡುವುದಕ್ಕೆ ಒಂದು ಅವಕಾಶವಾಯಿತು ಎಂದು ನಾವು ನಿಸ್ಸಂಕೋಚವಾಗಿ ಹೇಳಬಹುದಾಗಿದೆ. ಮೊನ್ನೆ ತಾನೆ ಈ ಅಸೆಂಬ್ಲಿ ನಡೆಯುವುದಕ್ಕೆ 8-10 ದಿನಗಳಿಗೆ ನಾನು ಯಾವ ಕ್ಷೇತ್ರದಿಂದ ಬಂದಿದ್ದೇನೆಯೋ ಆ ಕ್ಷೇತ್ರದ ಅಹವಾಲನ್ನು ತಿಳಿದುಕೊಂಡು ಅಸೆಂಬ್ಲಿಗೆ ಹೋಗೋಣ ಎಂದು ಆ ಕ್ಷೇತ್ರದಲ್ಲಿ ಪ್ರವಾಸ ಮಾಡಿಕೊಂಡು ಬಂದೆ. ಆ ಸಂದರ್ಭದಲ್ಲಿ ಈ ವಿಚಾರವಾಗಿ ಜನಗಳಲ್ಲಿ ಪ್ರಸ್ತಾಪ ಮಾಡಿದ್ದರಲ್ಲಿ ಎಲ್ಲಾ ಕಡೆಯೂ ಬಹಳ ಹೆಚ್ಚು ಸಂತೋಷವನ್ನು ವ್ಯಕ್ತಪಡಿಸಿದರು. ಅವರ ಆಶೆಯಾದರೂ ಈಗ ಇತರ ವಿಚಾರಗಳೆಲ್ಲಕ್ಕಿಂತಲೂ ಅನೇಕ ವಿಧವಾದ ಕಷ್ಟಗಳನ್ನು ಕೊಡುತ್ತಿದ್ದಂಥ ಈ ಹತೋಟಿ ಪದ್ಧತಿ ಹೋಗಬೇಕೆಂಬ ವಿಚಾರವೇ ಬಹಳ ಮುಖ್ಯವಾದುದಾಗಿತ್ತು. ಈಗ ನಾವು ಯಾವುದೇ ಪರಿಣಾಮಕಾರಿಯಾದಂಥ ನಿರ್ಧಾರವನ್ನು ಸದ್ಯದಲ್ಲಿ ತೆಗೆದುಕೊಳ್ಳದಿದ್ದರೂ ದೇಶದಲ್ಲಿ ನಮ್ಮ ಮುಂದಿರುವ ಆಹಾರದ ವಿಚಾರದಲ್ಲಿ ಕೂಡಲೇ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು. ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಧಾರಾಳವಾಗಿ ಆಹಾರ ತೆಗೆದುಕೊಂಡು ಹೋಗುವುದಕ್ಕೆ ಕೊಟ್ಟಿರತಕ್ಕ ಅವಕಾಶದಿಂದ ನಮಗೆ ಬಹಳ ಅನುಕೂಲವಾಗಿದೆ. ನೀವು ಒಂದು ರೀತಿ ಹತೋಟಿ ಇಟ್ಟುಕೊಂಡಿದ್ದರೂ ಸಹ ನಾವು ಅಧಿಕಾರಿಗಳ ಮನೆ ಬಾಗಿಲಿಗೆ ಹೋಗಿ ಅವರಲ್ಲಿ ಅಂಗಲಾಚಿ ಬೇಡತಕ್ಕ ಪರಿಸ್ಥಿತಿಯನ್ನು ತಪ್ಪಿಸಿ, ಪರ್ಮಿಟ್ ತೆಗೆದುಕೊಳ್ಳತಕ್ಕ ಪರಿಸ್ಥಿತಿಯನ್ನು ತಪ್ಪಿಸಿ, ಎಚ್. ಎಸ್. ಫಾರಂ ಬರೆಯತಕ್ಕ ಪರಿಸ್ಥಿತಿಯನ್ನು ತಪ್ಪಿಸಿ, ನಮಗೆ ಸಾಕಾದಷ್ಟು ಆಹಾರವನ್ನು ಬಿಟ್ಟು ಎಷ್ಟು ಬೇಕಾದರೂ ತೆಗೆದುಕೊಂಡು ಹೋಗಿ; ಆದರೆ ಅಧಿಕಾರಿಗಳ ಮನೆ ಬಾಗಿಲಿಗೆ ಹೋಗಿ ಅಂಗಲಾಚಿಬೇಡುವ ಪರಿಸ್ಥಿತಿಯನ್ನು ಇಟ್ಟುಕೊಳ್ಳಬೇಡಿ ಎಂದು ಎಲ್ಲಾ ಕಡೆಯೂ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದು ಎಲ್ಲರ ಅಭಿಪ್ರಾಯವೂ ಆಗಿದೆ. ಆದರೆ ಹೀಗೆ ಇದ್ದಕ್ಕಿದ್ದ ಹಾಗೆ ಸಂಪೂರ್ಣ ಹತೋಟಿಯನ್ನು ನಾವು ದೇಶದಲ್ಲಿ ತೆಗೆದು ಹಾಕಿದರೆ ಅದರಿಂದ ಅನರ್ಥವಾದೀತು ಎಂಬ ವಿಚಾರವನ್ನು ಸಹ ಸೂಕ್ಷ್ಮವಾಗಿ ಯೋಚಿಸಬೇಕಾಗಿದೆ. ನಮ್ಮ ಶ್ರೀಮನ್ಮಹಾರಾಜರವರೂ ಸಹ ಈ ವಿಚಾರದಲ್ಲಿ ತಮ್ಮ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ನಾವು ಸಂಪೂರ್ಣ ಹತೋಟಿಯನ್ನು ಕೂಡಲೇ ರದ್ದುಮಾಡಿದ ಪಕ್ಷದಲ್ಲಿ ಕೆಲವು ತೊಡಕುಗಳು ಬರಬಹುದು. ಅದರ ಪರಿಣಾಮವಾಗಿ ಪುನಃ ಹತೋಟಿ ಹಾಕತಕ್ಕ ಪರಿಸ್ಥಿತಿ ಒದಗಬಹುದು. ಆದಕಾರಣ ಈ ವಿಚಾರದಲ್ಲಿ ಪ್ರವೇಶ ಮಾಡುವುದಕ್ಕೆ ಮುಂಚೆ ಬಹಳ ಎಚ್ಚರಿಕೆಯಿಂದ (cautious) ಹೋಗಬೇಕೆಂದು ಅವರು ಅಪ್ಪಣೆ ಕೊಡಿಸಿರುವುದು ಬಹಳ ಸೂಕ್ತವಾಗಿದೆ. ಹಿಂದೆ ಒಮ್ಮೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಹತೋಟಿಯನ್ನು ಸಂಪೂರ್ಣವಾಗಿ ತೆಗೆದಕಾಲದಲ್ಲಿ ಎಷ್ಟು ಅನರ್ಥವಾಯಿತು ಎಂದು ಗೊತ್ತಿದೆ. ಹತೋಟಿ ತೆಗೆದ ಕೂಡಲೇ ವ್ಯಾಪಾರಗಾರರು, ಶ್ರೀಮಂತರು ಇವರೆಲ್ಲರೂ ಸಂತೆಗಳಿಗೆ ಬಂದು ಲಾರಿಗಟ್ಟಲೆ ಆಹಾರ ತೆಗೆದುಕೊಂಡು ಹೋಗಿ ದಾಸ್ತಾನು

ಮಾಡುವುದಕ್ಕೆ ಪ್ರಾರಂಭಿಸಿದರು. ಹಾಸನದಲ್ಲಿ ಯಾವ್ಯಾವ ಕಾಫಿ ಪ್ಲಾಂಟೇರ್ಸ ಇದೆಯೋ ಅದರ ಮಾಲೀಕರು ತಮ್ಮ ಕೂಲಿಗಾರರಿಗೆ ಆಹಾರ ಒದಗಿಸಬೇಕಾಗುತ್ತದೆ ಎಂಬ ದೃಷ್ಟಿಯಿಂದ ಎರಡು ವರ್ಷಗಳಿಗೆ ಸಾಕಾಗುವಷ್ಟು ಆಹಾರವನ್ನು ಕೊಂಡು ಲಾರಿಗಳಲ್ಲಿ ತೆಗೆದುಕೊಂಡು ಹೋದರು. ಈಗ ಮುಖ್ಯವಾಗಿ ಬಹಳ ದೊಡ್ಡ ಪಟ್ಟಣಗಳಾದ ಬೆಂಗಳೂರು, ಮೈಸೂರು, ಕೆ.ಜಿ.ಎಫ್—ಈ ಪ್ರದೇಶಗಳಲ್ಲಿ ಆಹಾರ ನಿಯಂತ್ರಣವನ್ನು ಕೂಡಲೇ ರದ್ದು ಮಾಡಿದರೆ ಅಲ್ಲಿರತಕ್ಕ ಶ್ರೀಮಂತರು ತಮ್ಮ ಅವಶ್ಯಕತೆಗಳಿಗೆ ಬೇಕಾದುದಕ್ಕಿಂತಲೂ ಹೆಚ್ಚು ಹೆಚ್ಚಾಗಿ ಆಹಾರವನ್ನು ಒಂದೇ ಸಾರಿ ಕೊಂಡು ದಾಸ್ತಾನು ಮಾಡತಕ್ಕ ಪರಿಸ್ಥಿತಿ ಬರಬಹುದು, ಅಂಥ ಪರಿಸ್ಥಿತಿ ಬರದರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಕ್ರಮಬದ್ಧವಾಗಿ, ಸ್ವಲ್ಪ ನಿಧಾನವಾಗಿ ಎಲ್ಲವನ್ನೂ ಜಾರಿಗೆ ತಂದ ಪಕ್ಷದಲ್ಲಿ ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಇದನ್ನು ಬಗೆಹರಿಸಬಹುದಾಗಿದೆ. ಇದನ್ನು ಎಲ್ಲರೂ ದೀರ್ಘವಾಗಿ ಯೋಚನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಈಗ ಅನಿರ್ಬಂಧವಾಗಿ ಸಾಗಾಣಿಕೆಗೆ ಅವಕಾಶ ಕೊಟ್ಟ ಮೇಲೆ ಜನಗಳಿಗೆ ತೊಂದರೆ ಆಗುತ್ತಾ ಇಲ್ಲ. ಆದರೆ ಪಟ್ಟಣಗಳವರಿಗೆ ಇನ್ನೂ ಸ್ವಲ್ಪ ತೊಂದರೆ ಇದೆ. ರೇರ್ಷ ಡಿಪೋಗಳಲ್ಲಿ ರೇರ್ಷ ಕಾರ್ಡಿನಲ್ಲಿ ಎಷ್ಟು ಇದೆಯೋ ಅಷ್ಟನ್ನು ಮಾತ್ರ ಕೊಂಡು ತಿನ್ನಬಹುದು. ಅವರ ಕಷ್ಟವೂ ಸಹ ಪರಿಹಾರವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಅವರೂ ಕೂಡ ಕೊನೆಯ ಪಕ್ಷ 10-15 ಸೇರು ದವಸ ಹೊರಗಿನಿಂದ ತೆಗೆದುಕೊಂಡು ಬರಬಹುದು ಎಂದು ನಿರ್ಧರಮಾಡಿದ ಪಕ್ಷದಲ್ಲಿ ಅವರ ಸಮಸ್ಯೆಯೂ ಕೂಡ ಬಗೆಹರಿದು ಯಾವ ತೊಂದರೆಯೂ ಆಗತಕ್ಕ ಸ್ಥಿತಿ ಇಲ್ಲ. ಇದನ್ನು ಎಲ್ಲರೂ ಕೂಲಂಕಷವಾಗಿ ಚರ್ಚೆ ಮಾಡಿ ಶ್ರೀಮರ್ಮ ಮಹಾರಾಜರವರು ತಿಳಿಸಿರುವ ಹಾಗೆ ಬಹಳ ಎಚ್ಚರಿಕೆಯಿಂದ ಒಂದು ನಿರ್ಧಾರ ತೆಗೆದುಕೊಳ್ಳಬಹುದಾಗಿದೆ.

ಈ ರೀತಿಯಾದ ಒಂದು ಅಭಿಪ್ರಾಯವನ್ನು, ನಮ್ಮ ಶ್ರೀಮನ್ಮಹಾರಾಜರವರು ನಮ್ಮ ಮುಂದಿಟ್ಟಿರುವುದಕ್ಕಾಗಿ ನಾವು ಅವರಿಗೆ ಬಹಳ ಕೃತಜ್ಞರಾಗಿರಬೇಕಾಗಿದೆ.

ಎರಡನೆಯದಾಗಿ ಬಹಳ ಮುಖ್ಯವಾದ ಒಂದು ಪ್ರಶ್ನೆಯೆಂದರೆ, ನಮ್ಮ ಸಂಸ್ಥಾನದಲ್ಲಿರತಕ್ಕ ಕೈಗಾರಿಕೆಗಳನ್ನು ಮತ್ತು ವ್ಯಾಪಾರವನ್ನು ಅಭಿವೃದ್ಧಿಪಡಿಸತಕ್ಕ ವಿಚಾರ. ಈಗ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಯುದ್ಧಕಾಲದಲ್ಲಿ ನಮ್ಮ ಕೈಗಾರಿಕೆಗಳು ಎಷ್ಟು ಮುಂದುವರಿಯಬಹುದಾಗಿತ್ತೋ ಅಷ್ಟು ಮುಂದುವರಿದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಅದಕ್ಕೆ ಅನೇಕ ಕಾರಣಗಳಿವೆ. ನನಗೆ ಎಲ್ಲಾ ಕೈಗಾರಿಕೆಗಳಲ್ಲೂ ಸ್ವಂತವಾಗಿ ಪೂರ್ಣ ಅನುಭವವಿಲ್ಲದಿದ್ದರೂ, ನನಗೆ ತಿಳಿದಿರುವ ಒಂದೆರಡು·ಕೈಗಾರಿಕೆಗಳ ವಿಷಯವನ್ನು ದೃಢವಾಗಿ ಹೇಳಬಲ್ಲೆ. ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿ, ಶಿವಮೊಗ್ಗದ ಬೆಂಕಿಪೆಟ್ಟಿಗೆ ಕಾರ್ಖಾನೆ—ಇವುಗಳ ವಿದ್ಯಮಾನಗಳನ್ನು ನಾನು ಕೂಲಂಕಷವಾಗಿ ತಿಳಿದಿದ್ದೇನೆ. ಅಲ್ಲಿರತಕ್ಕ ಅನೇಕ ವಿಶೇಷ ಸನ್ನಿವೇಶಗಳ ಕಾರಣಗಳಿಂದ ಅವು ಸರಿಯಾಗಿ ನಡೆಯುತ್ತಿಲ್ಲ. ನಮ್ಮ ದೇಶದಲ್ಲಿರುವ ಕೈಗಾರಿಕೆಗಳು ಅದರಲ್ಲೂ ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳು ಸರಿಯಾಗಿ ನಡೆಯಬೇಕಾದರೆ ಸರ್ಕಾರದವರು ಒಂದು ಹೊಸನೀತಿಯನ್ನು ಅನುಸರಿಸಲೇಬೇಕು. ಆ ಉದ್ದೇಶದಿಂದಲೇ ಬಹುಶಃ ಸರ್ಕಾರದವರು ಒಂದು ಹೈಪವರ್ ಡೈರೆಕ್ಟೋರೇಟನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿರುತ್ತಾರೆಂದು ಕಾಣುತ್ತದೆ. ನಿಜವಾಗಿಯೂ ಅದರ ಅವಶ್ಯಕತೆಯಿದೆ. ನಮ್ಮ ಕೇಂದ್ರ ಸರ್ಕಾರದವರೂ ಸಹ ನಮ್ಮ ದೇಶದಲ್ಲಿನ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು ; ಮತ್ತು ನಮ್ಮ ದೇಶದ ಉತ್ಪನ್ನಗಳನ್ನು ಜಾಸ್ತಿ ಮಾಡಬೇಕೆಂಬ ಉದ್ದೇಶದಿಂದಲೇ ನಮ್ಮ ಸಂಸ್ಥಾನದಲ್ಲಿ ಮುಖ್ಯ ಸಚಿವರಾಗಿದ್ದ ಶ್ರೀಮಾರ್ಕೆ. ಚೆಂಗಲರಾಯರೆಡ್ಡಿಯವರನ್ನು ಮಂತ್ರಿಗಳಾಗಿ ತೆಗೆದುಕೊಂಡು ಈ ವಿಷಯಕ್ಕೇ ಹೆಚ್ಚಿಗೆ ಗಮನಕೊಡುತ್ತಿದ್ದಾರೆ. ಅದೇ ರೀತಿ

(ಶ್ರೀ ಕೆ. ಲಕ್ಕಪ್ಪನವರು.)

ಯಾಗಿ ನಮ್ಮ ಸರ್ಕಾರದವರೂ ನಮ್ಮ ಕೈಗಾರಿಕೆಗಳಲ್ಲಿನ ಉತ್ಪನ್ನ ಮತ್ತು ಲಾಭ ಜಾಸ್ತಿಯಾಗಿ ದೇಶಕ್ಕೆ ಅನುಕೂಲವಾಗುವ ಒಂದು ವ್ಯವಸ್ಥೆಯನ್ನು ಮಾಡಬೇಕಾದ ಪ್ರಕೃತ ಬಹಳ ಹೆಚ್ಚಾಗಿದೆ. ಆ ಅಂಶವನ್ನೂ ನಮ್ಮ ಶ್ರೀಮನ್ಮಹಾರಾಜರವರು ಬಹಳ ಸೂಕ್ಷ್ಮವಾಗಿ ನಮ್ಮ ಮುಂದಿಟ್ಟಿದ್ದಾರೆ. ಇದನ್ನು ಸರ್ಕಾರದವರು ಯೋಚನೆ ಮಾಡಿ ಸರಿಯಾದ ತಳಹದಿಯ ಮೇಲೆ ಇಡುವ ನಿರ್ಧಾರವನ್ನು ಕೈಕೊಂಡರೆ ನಮ್ಮ ಕೈಗಾರಿಕೆಗಳೆಲ್ಲವೂ ಅಭಿವೃದ್ಧಿಗೊಂಡು ಹೆಚ್ಚಿಗೆ ಉತ್ಪನ್ನವಾಗಿ ತನ್ಮೂಲಕ ಲಾಭವೂ ಬಂದು ನಮ್ಮ ದೇಶಕ್ಕೆ ಅನುಕೂಲವಾಗುತ್ತದೆಂದು ಭಾವಿಸುತ್ತೇನೆ.

ಮೂರನೆಯದಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲೂ ಮಾರ್ಪಾಡಾಗಬೇಕಾದ ಅವಶ್ಯಕತೆಯಿದೆಯೆಂದು ಎಲ್ಲರೂ ಅಭಿಪ್ರಾಯಪಟ್ಟಿದ್ದಾರೆ. ಈ ದೃಷ್ಟಿಯಿಂದಲೇ ಈಗ ಹೊಸ ಸರ್ಕಾರ ಸ್ಥಾಪನೆಯಾದ ಮೇಲೆ ಆ ಇಲಾಖೆಯ ಮಂತ್ರಿತ್ವವನ್ನು ಪಡೆದಿರತಕ್ಕ ಶ್ರೀಮಾನ್ ಎ. ಜಿ. ರಾಮಚಂದ್ರರಾಯರು ತಾವು ಅಧಿಕಾರ ವಹಿಸಿದ ಕೂಡಲೇ ಇತ್ತಕಡೆ ಗಮನವಿತ್ತಿರುವುದು ಅಭಿನಂದನೀಯವಾಗಿದೆ. ಈ ಹಿಂದೆಯೇ ಶ್ರೀಮಾನ್ ಸಿ. ಆರ್. ರೆಡ್ಡಿಯವರನ್ನು ಇದಕ್ಕಾಗಿ ನೇಮಕ ಮಾಡಿ ಅವರು ಒಪ್ಪಿಸಿದ ವರದಿಯೂ ಸರ್ಕಾರದಲ್ಲಿದೆ; ಮತ್ತು ಈಗಿನ ಸರ್ಕಾರದವರೂ ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಏರ್ಪಡಿಸಿ ಅವರ ವರದಿಯನ್ನೂ ಬರಮಾಡಿಕೊಂಡು, ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂದಿದ್ದಾರೆ. ಸರ್ಕಾರದವರು ಇದರ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಮಾರ್ಪಾಡುಗಳನ್ನು ಮಾಡದೆ ಇದ್ದರೆ ನಾವು ಇತರ ದೇಶಗಳು ಎಷ್ಟು ಜಾಗ್ರತೆ ಮುಂದುವರಿಯುತ್ತಿವೆಯೋ ಅಷ್ಟು ಜಾಗ್ರತೆ ಮುಂದುವರಿಯುವುದಕ್ಕಾಗುವುದಿಲ್ಲ. ಇದು ಈಗ ದೇಶದ ಮುಂದಿರುವ ಬಹು ಮುಖ್ಯವಾದ ಪ್ರಶ್ನೆ. - ಇದನ್ನು ಖಂಡಿತ ಮಾಡಲೇಬೇಕು. ಇದನ್ನು ಕಾರ್ಯಗತ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ. ಈ ವಿಚಾರದಲ್ಲಿ ಸರ್ಕಾರದವರು, ನಾವು, ಎಲ್ಲರೂ ಸೇರಿ ಸರಿಯಾದ ನಿರ್ಧಾರವನ್ನು ತೆಗೆದುಕೊಂಡಲ್ಲಿ ದೇಶದಲ್ಲಿ ಬಹಳ ಉತ್ತಮವಾದ ಕೆಲಸವನ್ನು ಸಾಧನೆ ಮಾಡಿದ ಹಾಗಾಗುತ್ತದೆ. ಇದನ್ನೆಲ್ಲಾ ಸರ್ಕಾರದವರು ನಮ್ಮ ಮುಂದೆ ಚರ್ಚೆಗಿಟ್ಟು ನಾವು ಸರಿಯಾದ ನಿರ್ಧಾರವನ್ನು ಕೈಕೊಳ್ಳುವ ಸೂಚನೆಯನ್ನು ಕೊಟ್ಟದ್ದಕ್ಕೆ ನಾನು ನಮ್ಮ ಶ್ರೀಮನ್ಮಹಾರಾಜರವರಿಗೆ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಸ್ವಾಮಿ, ಶ್ರೀಮನ್ಮಹಾರಾಜರವರು ಮೈಸೂರು ವಿಧಾನಪರಿಷತ್ತಿನ ಮತ್ತು ಮೈಸೂರು ವಿಧಾನಸಭೆಯ ಸಂಯುಕ್ತ ಅಧಿವೇಶನದಲ್ಲಿ ದಯಪಾಲಿಸಿದ ಭಾಷಣದ ವಿಷಯದಲ್ಲಿ ಮಂಡಿಸಿರತಕ್ಕ ಅಭಿನಂದನಾ ನಿರ್ಣಯಕ್ಕೆ ನನ್ನ ಅಸಮಾಧಾನವನ್ನು ಸೂಚಿಸಬಯಸುತ್ತೇನೆ; ಅಂದಮಾತ್ರಕ್ಕೆ ಶ್ರೀಮನ್ಮಹಾರಾಜರವರ ವಿಷಯದಲ್ಲಿ, ಅವರ ವ್ಯಕ್ತಿತ್ವದ ವಿಷಯದಲ್ಲಿ ನನಗೆ ಗೌರವವಿಲ್ಲವೆಂದು ಯಾರೂ ಭಾವಿಸಬಾರದು. ಏಕೆಂದರೆ, ಸಾಂಪ್ರದಾಯಿಕವಾಗಿ ಶ್ರೀಮನ್ಮಹಾರಾಜರವರು ಈ ಭಾಷಣವನ್ನು ಮಾಡಿದರೂ ಅದರ ಹೆಚ್ಚಿನ ಜವಾಬ್ದಾರಿ ಸರ್ಕಾರದವರ ಮೇಲೆಯೇ ಇರುವುದರಿಂದ, ಈ ಭಾಷಣಕ್ಕೆ ಸರ್ಕಾರದವರೇ ಕಾರಣರೆಂದು ಭಾವಿಸಿ ನಾನು ಆ ವಿಷಯದಲ್ಲಿ ಟೀಕೆ ಮಾಡುವವನಾಗಿದ್ದೇನೆ.

ಶ್ರೀ ಕೆ. ಹನುಮಂತಯ್ಯನವರು.—ಆ ವಿಷಯದಲ್ಲಿ ಗುಟ್ಟೇನೂ ಇಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಹಾಗಿದ್ದರೆ ಒಳ್ಳೆಯದು. ಸಾಮಾನ್ಯವಾಗಿ ಇಂಥ ಸಂದರ್ಭಗಳಲ್ಲಿ ಶ್ರೀಮನ್ಮಹಾರಾಜರವರು ಹಿಂದೆ ಭಾಷಣ ಮಾಡಿರತಕ್ಕದ್ದನ್ನು ನೋಡುವುದಾದರೆ, ಆವಾಗಲೆಲ್ಲಾ ಬಹಳ ವಿವರವಾಗಿ ಭಾಷಣ ಮಾಡಿದ್ದಾರೆ. ಈ ಸಾರಿಯ ಭಾಷಣದ ಒಂದು ವೈಶಿಷ್ಟ್ಯವೆಂದರೆ ಅದು ಬಹಳ ಸಂಕ್ಷೇಪವಾಗಿರುವುದು. ಎಷ್ಟೋ ವಿಷಯಗಳನ್ನು ಪ್ರಸ್ತಾಪ ಮಾಡದೆಯೇ ಬಿಟ್ಟಿದ್ದಾರೆ. ಉದಾಹರಣೆಯಾಗಿ ಅಂಥವು ಒಂದೆರಡು ಮುಖ

ವಾದುವುಗಳನ್ನು ಈಗ ಪ್ರಸ್ತಾಪಮಾಡಲಿಚ್ಛಿಸುತ್ತೇನೆ.

ಚುನಾವಣೆಗಳ ವಿಚಾರದಲ್ಲಿ ಅವರು ಬಹಳ ಶ್ಲಾಘನೆಯನ್ನು ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ, ಈಗ ನಡೆದಂಥ ಮಹಾಚುನಾವಣೆಯ ವಿಷಯದಲ್ಲಿ ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರೂ ಮೆಚ್ಚಿಕೊಂಡು ಶ್ಲಾಘನೆಯನ್ನು ಕೊಟ್ಟಿದ್ದರೂ, ಚುನಾವಣೆಗೆ ಸಂಬಂಧಪಟ್ಟ ಹಾಗೆ, ಮತಗಣನೆಯ ವಿಷಯ ಮತ್ತು ಆ ಸಂದರ್ಭದಲ್ಲಿ ಉಪಯೋಗಿಸಿದ ಪೆಟ್ಟಿಗೆಗಳ ವಿಷಯ ಜನರಲ್ಲಿ ಎಷ್ಟು ಅಸಮಾಧಾನವನ್ನುಂಟುಮಾಡಿವೆಯೆಂಬುದನ್ನು ಮರೆಯುವುದಕ್ಕಾಗುವುದಿಲ್ಲವೆಂಬುದನ್ನೂ ತಾವು ತಿಳಿಯಬೇಕು.

Mr. SPEAKER.—You have been elected!

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಆಮೇಲೆ ಈ ವಿಧಾನಸಭೆಯ ಮುಂದೆ ಚರ್ಚೆಗೆ ಬರತಕ್ಕ ವಿಷಯಗಳನ್ನು ಚರ್ಚಿಸುವುದರಲ್ಲಿ ಈ ಸಭೆಯು ಒಂದು ಆದರ್ಶವನ್ನು, ಮೇಲ್ಪಂಕ್ತಿಯನ್ನು ನಿರೂಪಿಸಬೇಕೆಂದು ಅದರಲ್ಲಿ ಹೇಳಿದ್ದಾರೆ. ಆದರೆ, ಇಂದು ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಸರ್ಕಾರದವರು ಕೊಟ್ಟರತಕ್ಕ ಉತ್ತರಗಳನ್ನು ನಾವು ಗಮನಿಸುವುದಾದರೆ, ಯಾವುದಕ್ಕೂ ಸಮರ್ಪಕವಾದ ಉತ್ತರಗಳೇ ಲಭಿಸಲಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ.

ಆಹಾರ ನೀತಿಯ ವಿಷಯದಲ್ಲಿ ಸರ್ಕಾರದವರು ತೃಪ್ತಿಕರವಾಗಿ ಕೆಲಸಮಾಡಿದ್ದಾರೆಂದು ಇಲ್ಲಿ ಹೇಳಿದ್ದಾರೆ. ಈಗ ಸುಮಾರು $1\frac{1}{2}$ ವರ್ಷದ ಹಿಂದೆಯೇ ಸೋಲೂರಿನಲ್ಲಿ ಕಾಂಗ್ರೆಸ್ ಪಕ್ಷದವರ ಒಂದು ಸಭೆ ಸೇರಿಸಿ ಅಲ್ಲಿ ಅವರು ಮಾಡಿದ್ದ ನಿರ್ಣಯವನ್ನು ಸರ್ಕಾರದವರು ಗಮನಿಸಿದ್ದರೆ ಮತ್ತು ಆ ನಿರ್ಣಯವನ್ನು ಪಾಲಿಸಿದ್ದರೆ, ಆಹಾರದ ವಿಷಯದಲ್ಲಿ ನಮ್ಮ ಸರ್ಕಾರದವರು ನಿಜವಾದ ಮುನ್ನಡೆಯನ್ನಿಟ್ಟಿದ್ದಾರೆಂಬ ಕೀರ್ತಿಯನ್ನು ಗಳಿಸಬಹುದಾಗಿತ್ತು, ಇತರರಿಗೆ ಆದರ್ಶವಾಗಿರಬಹುದಾಗಿತ್ತು. ಹಾಗೆ ಮಾಡದೆ ಆ ಕೀರ್ತಿಯನ್ನು ಮದ್ರಾಸ್ ಪ್ರಾಂತಕ್ಕೆ ಕೊಟ್ಟು ನಾವು ಹಿಂದುಳಿದಿದ್ದೇವೆ.

ಇನ್ನು ವೆಚ್ಚದ ಉಳಿತಾಯದ ಸಂಬಂಧವಾಗಿ ಅಭಿನಂದನಾನಿರ್ಣಯವನ್ನು ಮಂಡಿಸಿದ ಶ್ರೀಮರ್ಾ ರುದ್ರಪ್ಪನವರು ಒಂದೆರಡು ಇಲಾಖೆಗಳನ್ನು ಮಾತ್ರ ಪ್ರಸ್ತಾಪಮಾಡಿದರು. ವ್ಯವಸಾಯದ ಇಲಾಖೆ ಮತ್ತು ಮರಾಮತ್ತು ಇಲಾಖೆಗಳ ವಿಷಯದಲ್ಲಿ ಖರ್ಚು ಕಡಮೆ ಮಾಡುವ ಸಂದರ್ಭವನ್ನು ಅವರು ಸೂಚಿಸಿದರು. ಅವುಗಳ ಜೊತೆಗೆ ಇನ್ನೂ ಒಂದೆರಡು ಇಲಾಖೆಗಳನ್ನು ಸೇರಿಸಬಹುದೆಂದು ನನಗೆ ತೋರುತ್ತದೆ. ಅವುಗಳನ್ನೂ ರದ್ದುಮಾಡುವುದರಿಂದ ವೆಚ್ಚ ಎಷ್ಟೋಮಟ್ಟಿಗೆ ಕಡಿಮೆಯಾಗುತ್ತದೆ. ಒಂದು ಲಂಚನಿರೋಧಶಾಖೆ. ಇದು ಪ್ರಾರಂಭವಾದ ಮೇಲೆ ಸರ್ಕಾರದಲ್ಲಿ ಲಂಚ ಕಡಮೆಯಾಯಿತೆಂದು ನಾವು ಹೇಳುವ ಸ್ಥಿತಿಯಲ್ಲಿಲ್ಲ. ಅದಕ್ಕೆ ಬದಲು ಇನ್ನೂ ಹೆಚ್ಚುತ್ತಿದೆಯೆಂದು ಹೇಳಬಹುದು. ಆದ್ದರಿಂದ ಇದನ್ನು ತೆಗೆದುಬಿಟ್ಟು, ಈ ಇಲಾಖೆಯ ಕೆಲಸವನ್ನು ಆಯಾಯ ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ವಹಿಸುವುದರಿಂದ ಅಥವಾ ಸರ್ಕಾರದ ಮಂತ್ರಿಮಂಡಲದವರೇ ತನಿಖೆ ನಡೆಸುವುದರಿಂದ ಲಂಚವನ್ನು ತಡೆಗಟ್ಟಲು ಅವಕಾಶವಿದೆ. ಆದ್ದರಿಂದ ಈ ಇಲಾಖೆಯನ್ನು ತೆಗೆದುಹಾಕುವುದರಿಂದ ಖರ್ಚು ಕಡಿಮೆಯಾಗಬಹುದೆಂದು ನನ್ನ ಸಲಹೆ.

ಎರಡನೆಯ ಇಲಾಖೆ, ವಯಸ್ಕರ ವಿದ್ಯಾಭ್ಯಾಸದ ಇಲಾಖೆ ಎಂಬುದು. ಅದು ಕೇವಲ ಕಪಟನಾಟಕವೆಂದು ಹೇಳಬೇಕಾಗಿದೆ.

Sri A. BHEEMAPPA NAIK.—It was started by your Leader Janab Imam!

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಇದರಿಂದ ನಿಜವಾಗಿ ವಯಸ್ಕರು ವಿದ್ಯಾವಂತರಾಗಿ ಯಾವ ಲಾಭವನ್ನೂ ಪಡೆದಿಲ್ಲವೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಲಾಭ ಪಡೆಯುವುದಕ್ಕೆ ಬದಲು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದ ಕೆಲವು ರೈತರು, ವಯಸ್ಕರ ವಿದ್ಯಾಭ್ಯಾಸದ ಇಲಾಖೆಯಿಂದ ವಿದ್ಯಾಭ್ಯಾಸ ಪಡೆದು,

(ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.)
ಮೂಗರ್ಜಿಗಳನ್ನು ಬರೆಯುವುದಕ್ಕೆ ಅವಕಾಶವಾಗಿದೆ. ಆ ಇಲಾಖೆಯಿಂದ ನಿಜವಾದ ವಿದ್ಯಾಭ್ಯಾಸ ನಡೆಯುತ್ತಿಲ್ಲ. ಈ ಇಲಾಖೆಯನ್ನು ತೆಗೆದುಬಿಟ್ಟರೆ ಇದರಿಂದ ಹಣವನ್ನು ಉಳಿತಾಯ ಮಾಡಬಹುದು.

ಶ್ರೀಮನ್ಮಹಾರಾಜರವರು ಸಾಮಾನ್ಯವಾಗಿ ಹಿಂದುಳಿದ ಜನಾಂಗದ ವಿಷಯದಲ್ಲಿ ಏನಾದರೂ ಹೇಳಬೇಕು. ಆದರೆ ಯಾವ ಮಾತನ್ನೂ ಹೇಳದೆ ಮರೆತಿದ್ದಾರೆ. ಇದು ಗಮನಾರ್ಹವಾದ ವಿಷಯ. ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಪಂಗಡದವರು ಹೆಚ್ಚಾಗಿರುವುದರಿಂದ ಅವರ ಅಭಿವೃದ್ಧಿಯನ್ನು ಹೇಗೆ ಮಾಡಬೇಕೆಂಬ ವಿಷಯದಲ್ಲಿ ಎರಡು ಮಾತುಗಳನ್ನು ತಿಳಿಸಿದ್ದರೆ ಚೆನ್ನಾಗಿತ್ತು.

ಕೈಗಾರಿಕೆಗಳ ವಿಷಯದಲ್ಲಿ ಒಂದೇ ಒಂದು ವಿಷಯವನ್ನು ಹೇಳುವುದಾದರೆ ಸರ್ಕಾರದ ಅಧೀನದಲ್ಲಿರುವ ಕೆಲವು ದೊಡ್ಡ ಕೈಗಾರಿಕೆ ಸಂಸ್ಥೆಗಳಲ್ಲಿ ಅವುಗಳ ಅಧ್ಯಕ್ಷರನ್ನು ಚುನಾಯಿಸುವಾಗ ಯಾವ ರಾಜಕೀಯ ಪಕ್ಷಕ್ಕೂ ಸೇರದವರನ್ನು ಚುನಾವಣೆ ಮಾಡುವ ಪದ್ಧತಿ ಬಹಳ ಒಳ್ಳೆಯದೆಂದು ನನ್ನ ಭಾವನೆ. ಏಕೆಂದರೆ ಯಾವುದಾದರೂ ರಾಜಕೀಯ ಪಕ್ಷಕ್ಕೆ ಸೇರಿದವರನ್ನು ಅಧ್ಯಕ್ಷರನ್ನಾಗಿ ಅಥವಾ ಚೇರ್ಮನ್ನರನ್ನಾಗಿ ನೇಮಕಮಾಡುವುದರಿಂದ, ನಿಷ್ಪಕ್ಷಪಾತವಾಗಿ ದಕ್ಷತೆಯಿಂದ ಕೆಲಸಮಾಡಿ ಕೈಗಾರಿಕೆ ಮುಂದುವರಿಯುವುದಕ್ಕೆ ಅವಕಾಶವಾಗುವುದಕ್ಕೆ ಬದಲು ಅದು ಅವನತಿಗೆ ಹೋಗುವುದಕ್ಕೆ ಕಾರಣವಾಗುತ್ತದೆ. ಹೀಗಾಗಿರುವುದಕ್ಕೆ ಅನೇಕ ನಿದರ್ಶನಗಳಿವೆ. ಆದುದರಿಂದ ಸರ್ಕಾರಿ ಆಡಳಿತದಲ್ಲಿರುವ ಕೈಗಾರಿಕೆಗಳಿಗೆ ಅಧ್ಯಕ್ಷರನ್ನು ಚುನಾಯಿಸುವಾಗ ಯಾವ ಪಕ್ಷಕ್ಕೂ ಸೇರದೇ ಇರತಕ್ಕವರನ್ನು ಚುನಾವಣೆ ಮಾಡಿ ಕೈಗಾರಿಕೆಗಳು ಮುಂದುವರಿಯುವುದಕ್ಕೆ ಅವಕಾಶ ಮಾಡಬೇಕು. ಇಷ್ಟು ವಿಷಯಗಳನ್ನು ತಿಳಿಸಿ ಶ್ರೀಮನ್ಮಹಾರಾಜರವರ ಭಾಷಣದ ವಿಷಯದಲ್ಲಿ ನನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಸ್ವಾಮಿ ನಿನ್ನೆಯದಿನ ನಡೆದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸಂಯುಕ್ತ ಸಭೆಯಲ್ಲಿ ಮೈಸೂರಿನ ರಾಜಪ್ರಮುಖರು ಓದಿದ ಭಾಷಣವನ್ನು ನಾನು ಆಮೂಲಾಗ್ರವಾಗಿ ಓದಿದ್ದೇನೆ. ರಾಜ್ಯಾಂಗದಲ್ಲಿ ವಿಧಾಯಕವಾಗಿರುವ ರೀತಿಯಲ್ಲಿ, ನನಗೆ ತಿಳಿದಹಾಗೆ ಸಂಪ್ರದಾಯವಿರುವುದು, ಇಂತಹ ಭಾಷಣದಲ್ಲಿ ಒಂದು ದೇಶದ ಘಟ್ಟ ಘಟ್ಟದಲ್ಲಿ ಬರತಕ್ಕ ರಾಜಕೀಯ ಬದಲಾವಣೆಯಲ್ಲಿ ಪ್ರತಿಯೊಂದು ಸರ್ಕಾರವೂ ತನ್ನ ಆರಂಭದಲ್ಲಿ ಮುಂದೆ ಏನನ್ನು ಮಾಡುತ್ತೇವೆ, ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಲಿದ್ದೇವೆ, ಈಗ ರಾಜಕೀಯ ಪರಿಸ್ಥಿತಿ ದೇಶದಲ್ಲಿ ಯಾವ ರೀತಿ ಇದೆ, ಹಿಂದೆ ಏನು ಪರಿಸ್ಥಿತಿ ಇತ್ತು ಎಂಬ ಅಂಶಗಳನ್ನು, ಕೂಲಂಕಷವಾಗಿಲ್ಲದಿದ್ದರೂ, ತಕ್ಕಷ್ಟು ಸೂಕ್ಷ್ಮವಾಗಿ ಹೇಳತಕ್ಕದ್ದು ಪದ್ಧತಿ. ಇದನ್ನು ಬಿಟ್ಟರೆ, ಇದಕ್ಕೆ ಮತ್ತೆ ಬೇರೆ ಪ್ರಾಶಸ್ತ್ಯವಿದೆಯೆಂದು ನಾನು ತಿಳಿದುಕೊಂಡಿಲ್ಲ. ಅಂದಮೇಲೆ, ನಾನೂ ನನ್ನಹಾಗೆ ಬಹುಶಃ ಅನೇಕ ಇತರರೂ ಭಾಷಣದಲ್ಲಿ ಈ ವಿಷಯಗಳು ಅಡಕವಾಗಿರುತ್ತವೆಂದು ನಿರೀಕ್ಷಿಸಿದ್ದೆವು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಈ ಭಾಷಣದಿಂದ ತುಂಬಾ ನಿರಾಶೆಯಾಗಿದೆಯೆಂದು ಹೇಳದೆ ವಿಧಿಯಿಲ್ಲ. ಇದು ಬಹಳ ಪುಟ್ಟ ಭಾಷಣ, brief model speech ಎಂದು ಕೆಲವರು ನಾಮಕರಣ ಮಾಡಿದ್ದಾರೆ. ಆದರೆ ಪುಟ್ಟಭಾಷಣವೆಂದ ಮಾತ್ರಕ್ಕೇ ಇದೊಂದು ಸಣ್ಣ ಹುಡುಗರ ಶಾಲೆಯಲ್ಲ. ಇಂತಹ ಭಾಷಣದಲ್ಲಿ ಮುಖ್ಯ ವಿಷಯಗಳು ಅಡಕವಾಗಿರಬೇಕು. ಆದರೆ, ಹೆಚ್ಚು ಚರ್ಚೆಗೆ ಆಸ್ಪದ ಕೊಡದ ರೀತಿಯಲ್ಲಿ ಬಹಳ ಜಾಗರೂಕತೆಯಿಂದ ಕೆಲವೇ ಮಾತುಗಳಲ್ಲಿ ಸಾಂಪ್ರದಾಯಿಕವಾಗಿ ಹಾಗೆಯೇ ಬೇಗ ಮುಗಿಸುವ ಪ್ರಯತ್ನ ನಡೆದಿದೆಯೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಕಳೆದ ಎರಡು ಶತಮಾನಗಳಿಂದ ನಾವು ಪರಕೀಯರ ದಬ್ಬಾಳಿಕೆಗೆ ಒಳಗಾಗಿದ್ದು ಈಗ ತಾನೇ ಪ್ರಜಾಪ್ರಭುತ್ವದ ಹಾದಿಯಲ್ಲಿ ನಡೆದಿದ್ದೇವೆ. ಈ ಬಗ್ಗೆ ಚುನಾ

ವಣೆಯ ಪ್ರಸ್ತಾವನೆ ಭಾಷಣದಲ್ಲಿದೆ. ಪ್ರಪಂಚದ ಇತರ ರಾಷ್ಟ್ರಗಳ ಮೆಚ್ಚಿಗೆಯನ್ನು ಈ ಚುನಾವಣೆಗಳ ವಿಷಯದಲ್ಲಿ ಪಡೆದಿರುವುದು ನಿಜ. ಇದಕ್ಕೆ ಕಾರಣ ಇಷ್ಟೆ: ನಮ್ಮ ದೇಶ ಅನಕ್ಷರತೆಯಿಂದ ಕೂಡಿದೆಯಾದ ಕಾರಣ ಬಹುಶಃ ಇಷ್ಟು ಸಮರ್ಪಕವಾಗಿ ನಡೆಯಲಾರದೋ ಏನೋ ಎಂಬ ಶಂಕೆ ನಮ್ಮಲ್ಲಿಯೂ ಇತ್ತು, ಇತರ ದೇಶದ ಜನರಲ್ಲಿಯೂ ಇತ್ತು. ಈ ದೃಷ್ಟಿಯಿಂದ ನಮ್ಮಲ್ಲಿ ಚುನಾವಣೆ ಚೆನ್ನಾಗಿ ನಡೆಯಿತೆಂದು ಹೇಳಬಹುದಾದರೂ ಎಲ್ಲವೂ ಸಮರ್ಪಕವಾಗಿತ್ತು ಎಂಬ ಮಾತನ್ನು ನಾನು ವಿರೋಧಿಸಬೇಕಾಗಿದೆ. ನಮ್ಮ ಸ್ನೇಹಿತರು ಓಟಿನ ಪೆಟ್ಟಿಗೆಯನ್ನು ಉಪಯೋಗಿಸಿದ ವಿಷಯದಲ್ಲಿ ಮತ್ತು ಆಡಳಿತ ಪಕ್ಷ ಯಾವರೀತಿ ಇದಕ್ಕೆ ಬೆಂಬಲ ಕೊಟ್ಟಿತ್ತು ಮತ್ತು ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯಲು ಏನೇನು ಅಡ್ಡಿ ಆತಂಕಗಳಿದ್ದವು ಎಂಬುದನ್ನು ಹೇಳಿದ್ದಾರೆ. ಅಲ್ಲದೆ ಚುನಾವಣೆ ಆದಮೇಲೆ ಅನೇಕ ಸಮಿತಿಗಳೇರ್ಪಟ್ಟು ಈ ವಿಷಯವನ್ನು ಇಡೀ ದೇಶದ ಜನತೆಯ ಮುಂದೆ ಇಟ್ಟಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪನವರು.—ಉದಾಹರಣೆಗಳನ್ನು ಹೇಳುತ್ತೀರಾ?

ಶ್ರೀ ಎಸ್. ಗೋಪಾಲಗೌಡರು.—ಇವೆ, ಅವುಗಳನ್ನೆಲ್ಲಾ ಹೇಳಲು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ.

Mr. SPEAKER.—The Member may go on. Time and tide will not wait for anybody.

ಶ್ರೀ ಎಸ್. ಗೋಪಾಲಗೌಡರು.—ಇನ್ನು ಈ ಸಭೆಯ ಕಾರ್ಯಕಲಾಪಗಳ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಭೆಯಲ್ಲಿ ಬೇರೆ ಬೇರೆ ಪಕ್ಷಗಳಿವೆ, ಎಲ್ಲರೂ ಸಾಮರಸ್ಯದಿಂದ, ಸೌಹಾರ್ದದಿಂದ ವರ್ತಿಸಿ ಒಬ್ಬೊಬ್ಬರ ಆಶಯವನ್ನು ಸರಿಯಾಗಿ ಗ್ರಹಿಸುವ ಮನೋವೃತ್ತಿ ಸದಸ್ಯರಲ್ಲಿ ಬೆಳೆಯಬೇಕು, ದೇಶದ ಜನತೆಯ ಪ್ರಗತಿ ಮುಖ್ಯವಾಗಿ ನಮ್ಮ ಮುಂದಿನ ಉದ್ದೇಶವಾಗಿರಬೇಕೆಂದು ಭಾಷಣದಲ್ಲಿ ಸೂಚಿಸಿದ್ದಾರೆ. ಆದರೆ ನಾವು ಈ ಸಭೆಯಲ್ಲಿ ಇಂದು ನಡೆದ ರೀತಿಯನ್ನು ನೋಡಿದರೆ, ನಮ್ಮ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡದೆ ಕಾಲಹರಣ ಮಾಡುವುದು ಸಂಪ್ರದಾಯವಾಗಿರುವಹಾಗಿದೆ. ಇದೇ ರೀತಿ ಮುಂದುವರಿದರೆ ದೇಶದ ಪ್ರಗತಿ ಇದರಿಂದ ಸಾಧ್ಯವಾಗುವುದಿಲ್ಲ ಎಂಬ ಶಂಕೆ ನನಗೆ ಬರುತ್ತದೆ. ಹೀಗೆಯೇ ಭಾಷಣವನ್ನು ನೋಡಿದರೆ, ಈಗಿನ ಸರ್ಕಾರ ಕ್ಲೇಶದಾಯಕ ಸಂದರ್ಭದಲ್ಲಿ ಅಧಿಕಾರಕ್ಕೆ ಬಂತು, ಇದಕ್ಕೆ ಹಿನ್ನೆಲೆಯಾದವರು ದೇಶವನ್ನು ಇಂತಹ ಕ್ಲೇಶದಾಯಕ ಪರಿಸ್ಥಿತಿಗೆ ತಂದಿಟ್ಟಿದ್ದಾರೆಂಬುದು ಅದರಲ್ಲಿ ಸೂಚಿತವಾಗಿದೆ. ಆದರೆ ಇಂತಹ ಕ್ಲೇಶದಾಯಕ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕೆ ಅಥವಾ ತಪ್ಪಿಸುವುದಕ್ಕೆ ಅದರಲ್ಲಿ ಯಾವುದೊಂದು ಸೂಚನೆಯೂ ಇಲ್ಲ. ಖರ್ಚುಗಳನ್ನು ಆದಷ್ಟು ಕಡಿಮೆ ಮಾಡಬೇಕು, ಕಡಿಮೆ ಖರ್ಚಿನಲ್ಲಿ ದೇಶವನ್ನು ಮುಂದೆ ಸಾಗಿಸಿಕೊಂಡು ಹೋಗಬೇಕೆಂಬ ಸೂಚನೆ ಇದೆ. ಇರತಕ್ಕ ಸ್ಥಿತಿಯನ್ನಾದರೂ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂಬ ಸೂಚನೆಯಿದೆಯೇ ಹೊರತು ನಾವು ಇಂತಹ ದಾರಿಯಲ್ಲಿ ಹೋಗಬಹುದು, ಇಂತಹ ಕೆಲಸವನ್ನು ಮಾಡಬಹುದು, ಇಂತಹ ಕೆಲಸ ಮುಖ್ಯ, ಇಂತಹ ಕೈಗಾರಿಕೆಯನ್ನು ಕೈಕೊಳ್ಳಬಹುದು ಎಂಬ ಸೂಚನೆಯೇ ಕಂಡುಬರುವುದಿಲ್ಲ.

ಒಂದು ವಿಷಯದಲ್ಲಿ ನಾವು ಈ ಭಾಷಣಕ್ಕೆ ಸ್ವಲ್ಪ ಗೌರವವನ್ನು ಕೊಡಬೇಕು. ಅದೇನೆಂದರೆ, ಆಹಾರ ಧಾನ್ಯಗಳ ಬೆಲೆಯನ್ನು ಏರಿಸಿ ಕಂಟ್ರೋಲಿನ ವಿಷಯದಲ್ಲಿ ದೇಶದ ಪ್ರಜೆಗಳ ಅಭಿಪ್ರಾಯವನ್ನು ಕೇಳದೆ ದುಡುಕಿನಿಂದ ಬದಲಾವಣೆಗಳನ್ನು ತಂದಿರುವುದು. ಈ ವಿಷಯದಲ್ಲಿ ಸ್ವಲ್ಪ ಸೂಚನೆ ಕೊಡಲ್ಪಟ್ಟಿದೆ. ದೇಶದ ಪರಿಸ್ಥಿತಿಯನ್ನು ತಿಳಿದುಕೊಳ್ಳದೆ, ಅಂಕಿಅಂಶಗಳನ್ನು ನೋಡದೆ, ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡದೆ, ತತ್ಸಂಬಂಧವಾಗಿ ಯಾವ ಏರ್ಪಾಡನ್ನೂ ಕಾರ್ಯಗತಮಾಡದೆ ಸುಮ್ಮನೆ ಹೆಚ್ಚು ಬೆಳೆ ಬೆಳೆಯುವ ಯೋಜನೆಯನ್ನು ಮುಂದಿಟುಕೊಂಡು, ಐದು ವರ್ಷದ ಯೋಜನೆಯನ್ನು ಮುಂದಿಟ್ಟುಕೊಂಡು, ಈ ಪರಿಸ್ಥಿತಿಯಲ್ಲಿ ಆಹಾರ ಹತೋಟಿಯೊಡನೆ ಆಟವಾಡುತ್ತಾ ಹೋದರೆ

(ಶ್ರೀ ಎಸ್. ಗೋಪಾಲಗೌಡರು)

ಬಹುಶಃ ದೇಶದಲ್ಲಿ ಕೆಲವು ಕಡೆ ಇರತಕ್ಕ ಕ್ಷಾಮ ಮತ್ತೂ ಅನೇಕ ಕಡೆಗಳಲ್ಲಿ ಸಂಭವಿಸಬಹುದು. ಬೆಲೆಗಳು ಇಳಿದು ಜನತೆಗೆ ಅನುಕೂಲವಾಗಬಹುದೆಂಬ ವಿಷಯ ಅವರ ಭಾಷಣದಲ್ಲಿ ಬಂದಿದೆ. ಆಹಾರ ಧಾನ್ಯಗಳನ್ನು ಇನ್ನೂ ಅಧಿಕವಾಗಿ ಬೆಳೆಯುವ ಪಕ್ಷಕ್ಕೆ ಧಾರಣೆವಾಸಿಗಳು ಕಡಿಮೆಯಾಗಬಹುದು ಎಂದು ಶಂಕಿಸಲಾಗಿದೆ. ಹೆಚ್ಚು ಬೆಳೆಯುವುದು ಹೇಗೆ ಸಾಧ್ಯ? ಲಕ್ಕವಳ್ಳಿ, ತುಂಗಾ ಅಣೆಕಟ್ಟುಗಳು ಮತ್ತು ಇತರ ಕೆರೆಕಾಲುವೆಗಳಾವುದರಲ್ಲಿಯೂ ಸಮರ್ಪಕವಾಗಿ ಕೆಲಸ ನಡೆದಿಲ್ಲ. ಹೆಚ್ಚು ಬೆಳೆಯಲು ಬೇಕಾದಷ್ಟು ನೀರನ್ನು ಒದಗಿಸಿಲ್ಲವೆಂಬುದು ನಮ್ಮೆಲ್ಲರಿಗೂ ಚೆನ್ನಾಗಿ ಗೊತ್ತಿದೆ.

ಇನ್ನೊಂದು ವಿಷಯವನ್ನು ಭಾಷಣದಲ್ಲಿ ಹೇಳಿಲ್ಲ. ಅದೇನೆಂದರೆ, ಬೆಳೆಯತಕ್ಕ ರೈತನಿಗೆ ಯಾವುದಾದರೂ ಪರಿಹಾರ ಕೊಡುತ್ತಾರೆಯೇ, ತಕ್ಕಷ್ಟು ಭೂಮಿ ಅವರಿಗೆ ಸಲ್ಲುತ್ತದೆಯೇ, ಜಮೀರ್ದಾರಿ, ಜೋಡಿದಾರಿ, ಇನಾಂದಾರಿ ವ್ಯವಸ್ಥೆಯನ್ನು ರದ್ದುಮಾಡುವುದು ಜಾರಿಗೆ ಬರುತ್ತದೆಯೇ ಎಂಬುದು. ಈಗಿರುವ ಪರಿಸ್ಥಿತಿಯಲ್ಲಿ ಕೆಲವರಿಗೆ ನೂರಾರು ಎಕರೆ ಜಮೀನಿದೆ ಮತ್ತೆ ಕೆಲವರಿಗೆ ಏನೂ ಇಲ್ಲ. ದೊಡ್ಡ ಜಮೀರ್ದಾರರಿಗೆ ಒಂದು ಪರಿಮಿತಿಯಲ್ಲಿ ಎಂದರೆ, 30 ಅಥವ 50 ಎಕರೆಯಷ್ಟು ಮಾತ್ರ ಇರಬೇಕೆಂದು ಗೊತ್ತುಮಾಡಿ ಉಳಿದ ಜಮೀನನ್ನು ವ್ಯವಸಾಯ ಮಾಡುವ ರೈತರಿಗೆ ಹಂಚುತ್ತೇವೆ ಎಂಬ ವಿಷಯದಲ್ಲಿ ಯಾವ ಸೂಚನೆಯೂ ಈ ಭಾಷಣದಲ್ಲಿಲ್ಲ.

4-30 P.M.

ಆದುದರಿಂದ ಈ ಒಂದು ಎಚ್ಚರಿಕೆಯನ್ನು ಬಿಟ್ಟುಬಿಟ್ಟರೆ ಇನ್ನು ಯಾವ ತರಹದಲ್ಲೂ ಇದರಲ್ಲಿ ಅಂಥಾ ಆಶಾದಾಯಕವಾದ ಸೂಚನೆಗಳು ಕಂಡುಬರುತ್ತಿಲ್ಲ. ಇನ್ನು ಕ್ಷಾಮ ಪರಿಸ್ಥಿತಿ ಇದೆಯೆಂದು ಭಾವಿಸಬೇಕಾಗಿದ್ದರೆ ಈಗ ಉಂಟಾಗಿರತಕ್ಕ ಕಷ್ಟನಷ್ಟಗಳು ಸಾಲವೇನೋ ಎಲ್ಲೆಲ್ಲಿ ಜನರು ಹೊಟ್ಟೆಗೆ ಆಹಾರವಿಲ್ಲದೆ, ಜಾನುವಾರುಗಳಿಗೆ ಮೇಯಲು ಮೇವು ದೊರೆಯದೆ, ಎಲ್ಲರೂ ಸತ್ತುಹೋಗಿ ಆ ಪ್ರದೇಶದಲ್ಲಿ ರಣಹದ್ದುಗಳು ಹಾರಾಡುತ್ತಿದ್ದರೆ ಮಾತ್ರ ಅಂಥಾ ಪ್ರದೇಶದಲ್ಲಿ ಕ್ಷಾಮ ಸಂಭವಿಸಿದೆಯೆಂದು ಭಾವಿಸುವಂತೆ ಕಾಣುತ್ತದೆ. ಬೆಂಗಳೂರಿನಲ್ಲೂ ಕ್ಷಾಮವಿದೆಯೆಂದು ನಾನು ಹೇಳಿದುದಕ್ಕೆ ಕೆಲವು ಸದಸ್ಯರು ಆ ಮಾತನ್ನು ಹೇಗೆ ಹಾಸ್ಯ ಮಾಡಿದರೋ, ಎಲ್ಲೆಲ್ಲಿ ಜನರಿಗೆ ತಿನ್ನಲು ಆಹಾರವಿಲ್ಲ, ಜಾನುವಾರುಗಳಿಗೆ ಮೇವು ದೊರೆಯುತ್ತಿಲ್ಲವೆಂದು ಹೇಳಿದ್ದನ್ನೆಲ್ಲಾ ಹೇಗೆ ಹಾಸ್ಯ ಮಾಡಿದರೋ, ಹಾಗೇ ಎಲ್ಲವನ್ನೂ ಹಾಸ್ಯ ರೀತಿಯಲ್ಲೇ ಅವರು ಪರಿಗಣಿಸುವುದಾಗಿದ್ದರೂ, ನನ್ನ ಅಭಿಪ್ರಾಯದಲ್ಲಿ ಈ ಕ್ಷಾಮ ದೇಶದಲ್ಲಿ ಎಲ್ಲ ಕಡೆಯೂ ಇದ್ದೇ ಇದೆಯೆಂದು ಹೇಳುತ್ತೇನೆ. ಇಷ್ಟೆಲ್ಲ ಕ್ಷಾಮದ ಹಾಹಾಕಾರ ದೇಶಾದ್ಯಂತವೂ ಇದ್ದಾಗ್ಗೂ, ಇದರಲ್ಲಿ ಹೇಳಿರುವುದು 'ನಮ್ಮ ಮೈಸೂರು ಸಂಸ್ಥಾನದ ಕೆಲವು ಭಾಗಗಳಲ್ಲಿ' ಮಾತ್ರ ಕ್ಷಾಮವಿದೆಯೆಂದು. ಹೀಗೆ ಕ್ಷಾಮ ಪ್ರದೇಶವು ದಿನದಿನಕ್ಕೂ ಮುಂದುವರಿಯುತ್ತಾ ಹೋದಹಾಗೆಲ್ಲ ಒಂದು ಪಟ್ಟಿಯನ್ನೇ ಮಾಡಬೇಕಾದೀತು. ಈ ರೀತಿ ಅವರು ಭಾಷಣದಲ್ಲಿ ತಿಳಿಸಿದ್ದಾಗ್ಗೂ ದೇಶಾದ್ಯಂತವೂ ಉಂಟಾಗಿರತಕ್ಕ ತೊಂದರೆಗಳನ್ನು ಅವರು ಮರೆತಿಲ್ಲವೆಂದು ನಾನು ಭಾವಿಸುತ್ತೇನೆ. ಪರಿಸ್ಥಿತಿ ಹೀಗಿರುವಾಗ 'ಈ ವರ್ಷ ಭಗವಂತನ ಅನುಗ್ರಹದಿಂದ ಸ್ಥಿತಿಗತಿಗಳು ಉತ್ತಮಗೊಂಡು ಜನರ ನೆಮ್ಮದಿಯು ಹೆಚ್ಚುವಂತಾಗುವುದೆಂದು ನಾವೆಲ್ಲರೂ ಹಾರೈಸೋಣ' ಎಂದು ಹೇಳಿದರೆ ಇದು ಸಾಲದು. ಜನರು ಆಹಾರವಿಲ್ಲದೆ ಶ್ಮಶಾನ ಯಾತ್ರೆ ಹೊರಡುವ ಕಾಲದಲ್ಲಿ, ಹೀಗೆ ಸುಮ್ಮನೆ 'ಹಾರೈಸೋಣ' ಎಂದರೆ ಅವರು ಬದುಕಿ ಬಾಳುವ ಹಾಗಿಲ್ಲ. ಜನರೂ ಉಳಿಯುವ ಸ್ಥಿತಿ ಇಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ— ಕೆಲವು ಸುಧಾರಣೆಗಳನ್ನು ಮಾಡಬೇಕಾಗಿರುತ್ತದೆಂದು ತಿಳಿಸಲಾಗಿದೆ. ಇಂದಿನ ವಿದ್ಯಾಭ್ಯಾಸದ ಕ್ರಮವೂ ಸರಿಯಾಗಿಲ್ಲ; ಇದರಿಂದ ವಿದ್ಯಾರ್ಥಿಗಳಿಗೂ ಸುಖವಿಲ್ಲ. ದಿನೇದಿನೇ ವಿದ್ಯಾಭ್ಯಾಸ

ಕೆಟ್ಟುಹೋಗುತ್ತಿದೆ. ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆಲ್ಲ ಸ್ಥಾನಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಓದುವುದಕ್ಕೆ ಬಂದ ವಿದ್ಯಾರ್ಥಿಗಳು ಸೀಟ್ ದೊರೆಯಲಿಲ್ಲವೆಂದು ವಾಪಸ್ಸು ಮನೆಗಳಿಗೆ ಹೋಗುತ್ತಿದ್ದಾರೆ. ಹೀಗೆ ಪ್ರತಿಯೊಂದು ಸ್ಕೂಲಿನಲ್ಲೂ ಸೀಟುಗಳನ್ನೇ ಕಡಮೆ ಮಾಡಿಬಿಟ್ಟಿದ್ದಾರೆ. ನಾನು ನೋಡಿದಂತೆ ಹತ್ತಾರು ವಿದ್ಯಾರ್ಥಿಗಳು ಸ್ಕೂಲಿನಲ್ಲಿ ಸೀಟ್ ಪಡೆಯುವುದಕ್ಕೋಸ್ಕರವಾಗಿ ಕಮಿಟಿ ಮೆಂಬರುಗಳ ಮನೆ ಮನೆಗೆ ಸಹಾಯಕ್ಕಾಗಿ ಅಲೆದಾಡಿ, ಕಡೆಗೂ ಸೀಟ್ ಸಿಕ್ಕದೆ ಹಿಂತಿರುಗಿದರು. ಸ್ಕೂಲುಗಳಲ್ಲಿ ಸಾಕಷ್ಟು ಸಲಕರಣೆಗಳೇ ಇರುವುದಿಲ್ಲ. ಹೀಗೆ ಆ ಹುಡುಗರು ಈ ವಿದ್ಯೆಕ್ಕಾಗಿ ಅಲೆದಾಡುತ್ತಿದ್ದುದನ್ನು ನೋಡಿದರೆ ಈ ವಿದ್ಯಾಭ್ಯಾಸವಾದರೂ ಏತಕ್ಕೆ ಬೇಕೋ ಎಂದು ನನಗೆನಿಸಿತು. ಮೊನ್ನೆ ರಾಜಾಜಿಯವರು ಒಂದು ಕಟ್ಟಡದ ಸಮಾರಂಭ ಭಾಷಣ ಕಾಲದಲ್ಲಿ, ಇನ್ನು ಮುಂದೆ ಈ ಕಟ್ಟಡಗಳ ತಂಟೆಗೇ ಹೋಗಬೇಡಿ, ಆಲದ ಮರದ ಕೆಳಗೆ ಕೆಲಸ ನಡೆಸಿದರೂ ಚಿಂತೆಯಿಲ್ಲ ಎಂದು ಹೇಳಿದ್ದಾರೆ. ಇನ್ನು ಕೆಲವು ಕಡೆ ಸ್ಕೂಲುಗಳಿವೆ, ಆದರೆ ಅಲ್ಲಿಗೆ ಉಪಾಧ್ಯಾಯರೇ ಬಂದಿರುವುದಿಲ್ಲ. ಇಷ್ಟೊಂದು ಅವ್ಯವಸ್ಥೆಯಲ್ಲಿರುವ ವಿದ್ಯಾಭ್ಯಾಸಕ್ಕಾಗಿ ಹುಡುಗರು ತಿಂಗಳೊಂದಕ್ಕೆ 11 ರೂಪಾಯಿಗಳಿಂದ ಹಿಡಿದು 15-20 ರೂಪಾಯಿಗಳವರೆಗೆ ಫೀಜನ್ನು ಕೊಡಬೇಕು. ಊಟೋಪಚಾರಗಳಿಗೆ ತಿಂಗಳಿಗೆ ಏನಿಲ್ಲವೆಂದರೂ 30-40 ರೂಪಾಯಿಗಳಾದರೂ ಬೇಕು. ಇಷ್ಟಕ್ಕೆಲ್ಲಾ ಕೈಯಲ್ಲಿ ದುಡ್ಡಿಲ್ಲದಿದ್ದರೂ, ಸಾಲಸೋಲಗಳನ್ನಾದರೂ ಮಾಡಿ, ವಿದ್ಯಾಭ್ಯಾಸವನ್ನು ಮುಂದುವರಿಸೋಣವೆಂದು ಬರತಕ್ಕ ಹುಡುಗರಿಗೆ ಸಾಕಷ್ಟು ಸೀಟ್‌ಗಳೂ ಕೂಡ ಸಿಕ್ಕುವುದು ದುರ್ಲಭವಾಗಿದೆ. ಈ ಸೀಟ್‌ಗಳಿಗಾಗಿ ಮೆಂಬರುಗಳಾಗಿರತಕ್ಕವರ ಮನೆಗಳಿಗೆ ಅಲೆಯುತ್ತಿರುವುದನ್ನು ನೋಡಿದರೆ ಈ ವಿದ್ಯಾಭ್ಯಾಸದ ಬಾಬಿನಲ್ಲಿ ಎಷ್ಟು ಕಷ್ಟವಿದೆಯೆಂಬುದು ಗೊತ್ತಾಗುತ್ತದೆ. ಆದರೆ ಇನ್ನೂ ಎಷ್ಟೋ ವಿಚಾರಗಳಿದ್ದವು. ನನಗೆ ಅವುಗಳೆಲ್ಲವನ್ನೂ ತಿಳಿಸಲು ಸಾಕಷ್ಟು ಕಾಲಾವಕಾಶವಿಲ್ಲ. ಹೀಗೆ ಒಂದು ಕಡೆ ವಿದ್ಯಾಕ್ಷೋಭೆಯ ನೋಟವಿದ್ದರೆ, ಮತ್ತೊಂದುಕಡೆ ಈ ಡಾಂಭಿಕದ ನೋಟವಿದೆ. ಆದುದರಿಂದ ಆ ನಿಮ್ಮ ಸುಧಾರಣೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಿದರೆ ಮುಂದೇನಾಗುತ್ತದೆಂಬುದನ್ನು ನೋಡಬಹುದು.

ಇನ್ನು ಸರ್ಕಾರಿ ಕೈಗಾರಿಕೆಗಳ ವಿಚಾರ: "ನಮ್ಮ ಸರ್ಕಾರದವರೇ ಏರ್ಪಡಿಸಿ ನಡಸುತ್ತಿರುವ ಕೈಗಾರಿಕೋದ್ಯಮಗಳ ಆಡಳಿತವು ಮತ್ತಷ್ಟು ಚೆನ್ನಾಗಿ ನಡೆಯುವುದಕ್ಕೆ ಈಗಿರುವುದಕ್ಕಿಂತಲೂ ಉತ್ತಮ ರೀತಿಯ ಏರ್ಪಾಡನ್ನು ಮಾಡುವುದು ಸೂಕ್ತವಲ್ಲವೇ ಎಂಬ ವಿಚಾರವೂ ನಮ್ಮ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ" ಎಂದು ಭಾಷಣದಲ್ಲಿ ಹೇಳಿದ್ದಾರೆ. ಈಗಿರತಕ್ಕವುಗಳೆಲ್ಲಾ ಜಾಯಿಂಟ್ ಸ್ಟಾಕ್ ಕಂಪೆನಿಗಳು. ಮೈಸೂರು ದೇಶದಲ್ಲಿ ಸರ್ಕಾರದವರು ಸ್ಟೇಟ್ ಕ್ಯಾಪಿಟಲ್ ಹಾಕಿ ಕೆಲಸ ಮಾಡುತ್ತಿರುವ ಕಾರ್ಖಾನೆಗಳೂ ಇವೆ ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳೂ ಇವೆ. ಆದರೆ ಈ ಕಾರ್ಖಾನೆಗಳು ಏನು ಕೆಲಸ ಮಾಡುತ್ತಿವೆ, ಇವುಗಳಿಂದ ಬರುತ್ತಿರುವ ಉತ್ಪತ್ತಿ ಎಷ್ಟು, ಆ ಬಗ್ಗೆ ಆಗುತ್ತಿರುವ ಖರ್ಚು ವೆಚ್ಚಗಳೇನೆಂಬುದರ ಬಗ್ಗೆ ಸರ್ಕಾರದವರಿಗೆ ಖಚಿತವಾದ ಅಂಕಿ ಅಂಶಗಳು ದೊರೆತಿಲ್ಲ. ಇವುಗಳಮೇಲೆ ಒಂದು ಆಕಾಂಕ್ಷೆಯಾಗಲೀ, ಇಷ್ಟವಾಗಲೀ ಸರ್ಕಾರದವರಿಗೆ ಇರುವುದಿಲ್ಲ. ಆ ಅಭಿಪ್ರಾಯದ ಬಗ್ಗೆ ಒಂದು ಮಾತು ಇಲ್ಲಿ ಹೇಳಲಾಗಿದೆ. "ಈ ಕೈಗಾರಿಕೆಗಳು ಮತ್ತಷ್ಟು ದಕ್ಷತೆಯಿಂದಲೂ, ಲಾಭದಾಯಕವಾಗಿಯೂ ನಡೆಯುವಂತೆ ಮಾಡಬೇಕಾದರೆ ಸಕಾಲದಲ್ಲಿ ತ್ವರ್ಯವಾಗಿ ಕೆಲಸಮಾಡುವ ಅಭ್ಯಾಸವೂ, ಕಾರ್ಯಪಟುತ್ವವೂ, ದಿಟ್ಟತನದಿಂದ ಕಾರ್ಯಾರಂಭಮಾಡಿ ನಿರ್ವಹಿಸುವ ಸಾಹಸಬುದ್ಧಿಯೂ ಆವಶ್ಯಕ" ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಇನ್ನು ತಮಗೆ ಎರಡು ನಿಮಿಷಗಳ ಕಾಲ ಮಾತನಾಡುವ ಅವಕಾಶವಿದೆ.

ಶ್ರೀ ಎಸ್. ಗೋಪಾಲಗೌಡರು.—ಕೂಲಿಗಾರರ ಹಿತವನ್ನು ಸಂರಕ್ಷಣೆ ಮಾಡುವಂಥ

(ಶ್ರೀ ಎಸ್. ಗೋಪಾಲಗೌಡರು.)

ಕಾರ್ಖಾನೆಗಳಿಲ್ಲ. ನಾವು ಇಂಥಾ ಕಂಪೆನಿಗಳಿಂದ, ಕಾರ್ಖಾನೆಗಳಿಂದ ಪ್ರಗತಿಯನ್ನು ಬಯಸುವುದಕ್ಕಾಗುವುದಿಲ್ಲ. ಹಾಸನದಲ್ಲಿ ಈಗಾಗಲೇ 50–60 ಜನ ಕೆಲಸಗಾರರನ್ನು ತೆಗೆದು ಹಾಕಿದ್ದಾರಂತೆ. ದೇಶದಲ್ಲಿ ಅಲ್ಲಲ್ಲೆ ರಿಟ್ರೆಂಚ್‌ಮೆಂಟ್ ಮಾಡುತ್ತಿರುವ ಈ ಕಾಲದಲ್ಲಿ, ಕಾರ್ಖಾನೆಗಳು ಮೂಲೆಗೆ ಬೀಳದೆ ಮತ್ತೇನು? ಶಿವಮೊಗ್ಗದಲ್ಲಿರುವ ಮೈಸೂರಿನ ಒಂದು ಬೆಂಕಿಕಡ್ಡಿ ಕಾರ್ಖಾನೆ ಸಹ ಮುಚ್ಚಲ್ಪಡುವ ಸ್ಥಿತಿಯಲ್ಲಿದೆ. ಇದೆಲ್ಲವನ್ನೂ ಸರ್ಕಾರದವರು ಆಲೋಚನೆ ಮಾಡಿಲ್ಲ. ಇದೇ ರೀತಿ ಅನೇಕ ರೇಷ್ಮೆ ಕಾರ್ಖಾನೆಗಳನ್ನೂ ಮುಚ್ಚಲಾಗಿದೆ. ಈ ಎಲ್ಲ ಕಾರ್ಖಾನೆಗಳೂ ನಿರಾತಂಕವಾಗಿ ಕೆಲಸ ಮಾಡುವಂತೆ ಮಾಡಲು ನಮ್ಮಲ್ಲಿ ಸಾಕಾದಷ್ಟು ಬಂಡವಾಳವಿಲ್ಲ. ಒಂದು ಕಡೆ ಕೂಲಿಗಾರರು ಹೆಚ್ಚು ವೇತನಗಳನ್ನು ಕೇಳುತ್ತಿದ್ದರೆ ಮತ್ತೊಂದುಕಡೆ ಕಂಪೆನಿ ಮಾಲೀಕರ ಹಿತರಕ್ಷಣೆಗೆ ಶಾಸನಗಳು ರಚಿತವಾಗಬೇಕೆಂಬ ಒತ್ತಾಯಗಳು ನಡೆಯುತ್ತಿವೆ. ಅಂತೂ ಒಟ್ಟಿನಲ್ಲಿ ಹೀಗೆ ಈ ಭಾಷಣವನ್ನು ಯಾವ ರೀತಿಯಲ್ಲಿ ನೋಡಿದರೂ ಇದು ಆಶಾದಾಯಕವಾಗಿಲ್ಲ. ಇದರಲ್ಲಿ ಯಾವ ಪ್ರಗತಿದಾಯಕ ಮಾರ್ಗವೂ ಇದ್ದಂತೆ ಕಂಡುಬರುತ್ತಿಲ್ಲ. ದೇಶದ ನಿಜಸ್ಥಿತಿಯನ್ನು ಚೆನ್ನಾಗಿ ಚಿತ್ರಿಸುವಂಥ ಭಾಷಣವಾಗಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಕಡೆಯದಾಗಿ, ಪಾನನಿರೋಧ ವಿಚಾರದಲ್ಲಿ ಸರ್ಕಾರದ ನೀತಿ ಕೊಂಚವೂ ಸಮರ್ಪಕವಾಗಿಲ್ಲವೆಂದು ಹೇಳದೇ ವಿಧಿಯಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ನಿನ್ನೆ ದಿವಸ ಶ್ರೀಮನ್ಮಹಾರಾಜರು ಈ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದ ವಿಚಾರದಲ್ಲಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಾನು ಎದುರು ಪಕ್ಷದ ಕಡೆಯವನಾದ ಕಾರಣದಿಂದ ಹಾಗೆ ಮಾಡುತ್ತಿಲ್ಲ. ಈ ಭಾಷಣವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದರಲ್ಲಿ ಕೆಲವು ಅಂಕಿ ಅಂಶಗಳು ಲೋಪವಾಗಿರುವುದರಿಂದ ಈ ರೀತಿ ಮಾತನಾಡಬೇಕಾಗಿದೆ. ಚುನಾವಣೆ ವಿಚಾರದಲ್ಲಿ ಬಹಳ ಸೌಹಾರ್ದದಿಂದ ಚುನಾವಣೆ ನಡೆದಿದೆಯೆಂದು ಅಪ್ಪಣೆ ಕೊಡಿಸಿದ್ದಾರೆ. ನಮ್ಮ ಮಿತ್ರರು ಮೊದಲೇ ಹೇಳಿದಹಾಗೆ ಚುನಾವಣೆಯಲ್ಲಿ ಅನೇಕ ತೊಂದರೆಗಳು ಕಂಡುಬಂದಿವೆ. ಅಧಿಕಾರ ವರ್ಗದವರು ದಕ್ಷತೆಯಿಂದ ಮತ್ತು ನಿಸ್ಪೃಹತೆಯಿಂದ ಯಾವ ಪಕ್ಷದ ಕಡೆ ಇದ್ದಾರೋ ಆ ಕಡೆ ತಕ್ಕಮಟ್ಟಿಗೆ ಚುನಾವಣೆಯನ್ನು ಸರಿಯಾಗಿ ನಡೆಸಿದ್ದರೂ ಜನರ ಮನೋಭಾವ ಬದಲಾವಣೆ ಆಗುವಂತೆ ಕೆಲಸ ಮಾಡಿಲ್ಲ ಎಂದು ಹೇಳುತ್ತೇನೆ. ಹರಿಜನರ ಓಟರುಗಳಲ್ಲಿ ಹೆಂಗಸರೂ ಮತ್ತು ಗಂಡಸರೂ ಸೇರಿ ಶೇಕಡ 75 ರಿಂದ 90 ರವರೆಗೆ ಓಟು ಮಾಡಿದ್ದಾರೆ. ಅವರು ಸಂಪೂರ್ಣವಾಗಿ ಕಾನೂನು ತಿಳಿದು ಬಂದು ಓಟು ಮಾಡಿಲ್ಲ. ಏಕೆಂದರೆ ತಮಗೆ ತಿಳಿದಮಟ್ಟಿಗೆ ಹರಿಜನರ ವಿದ್ಯಾಭ್ಯಾಸ ಸೇಕಡ 4-5 ರಷ್ಟಿದೆಯೆಂದು ಸೆನ್ಸಸ್ ಲೆಕ್ಕದಿಂದ ತಿಳಿದುಬಂದಿದೆ. ಅಂದಮೇಲೆ ಚುನಾವಣಾ ನಿಬಂಧನೆಗಳನ್ನು ತಿಳಿದುಕೊಂಡುಬಂದು ದೇಶದ ಆಗುಹೋಗುಗಳನ್ನು ನಿರ್ಧರಿಸಬೇಕೆಂಬ ಉದ್ದೇಶದಿಂದ ಅವರು ಓಟು ಮಾಡಿಲ್ಲ. ಅನೇಕರು ಹೆದರಿಸಿ ನೀವು ಓಟು ಮಾಡದಿದ್ದರೆ ನಿಮಗೆ ಸರ್ಕಾರದಿಂದ ಕೊಡುವ ಸೌಲಭ್ಯ ಖಂಡಿತ ತಪ್ಪಿಸುತ್ತೇವೆ, ಇದು ನಮ್ಮ ಸರ್ಕಾರ, ನಿಮಗೆ ಜಮೀನು ಕೊಡುವುದು, ವಿದ್ಯಾರ್ಥಿ ವೇತನ ಕೊಡುವುದು ಮುಂತಾದ ಅನುಕೂಲತೆಗಳು ತಪ್ಪಿಹೋಗುತ್ತವೆ, ಅದನು ಉಳಿಸಿಕೊಳ್ಳುವುದು ನಿಮ್ಮ ಕೈಲಿದೆ ಎಂದು ಆಶಾದಾಯಕವಾಗಿ ಹೇಳಿ, ಓಟು ಮಾಡದೆ ತಪ್ಪಿದರೆ ಮಿಲಿಟರಿಯವರು ಬಂದೂಕದಿಂದ ಗುಂಡು ಹಾರಿಸುತ್ತಾರೆಂದು ಬೆದರಿಸಿ ಕೆಲವರನ್ನು ಓಟು ಮಾಡಲು ಕರೆತಂದಿದ್ದಾರೆ. ಇದನ್ನು ನಾನು ಧಾರಾಳವಾಗಿ ಹೇಳಬಲ್ಲೆ. ಇಂಥ poor misguided voters ವಿಚಾರದಲ್ಲಿ ಉದಾಹರಣೆಗಳನ್ನು ಹೇಳಬಹುದು. ಒಂದು ಗ್ರಾಮದಲ್ಲಿ 15 ದಿವಸಗಳ ಬಾಣಂತಿ ಸಹ ಬಂದು ಓಟು ಕೊಟ್ಟಿದ್ದಾಳೆ. ಹೀಗೆ ಹರಿಜನರನ್ನು ಹೆದರಿಸಿ ಬೆದರಿಸಿ ಓಟು ಪಡೆದಿ

ದ್ದಾರೆಯೇ ಹೊರತು ಸೌಹಾರ್ದ ಭಾವನೆಯಿಂದ ಪಡೆದಿಲ್ಲ ಎಂಬ ವಿಷಯವನ್ನು ಮಾತ್ರ ಹೇಳುತ್ತಿದ್ದೇನೆ. ಆದರೂ ಕೂಡ ನಮ್ಮ ಹರಿಜನರಿಗೆ ಈ ರೀತಿಯಾದರೂ ರಾಜಕೀಯದಲ್ಲಿ ಒಂದು ಉತ್ತೇಜನ ಕೊಡುತ್ತಿರುವುದು ಸಂತೋಷದ ವಿಚಾರ. ಇನ್ನು ಮುಂದಾದರೂ ಅವರಿಗೆ ಸರಿಯಾದ ತಿಳಿವಳಿಕೆಯನ್ನುಂಟುಮಾಡಿ ಆಡಳಿತ ವರ್ಗದವರು ಅವರಿಗೆ ಮಾರ್ಗ ದರ್ಶಕರಾಗುತ್ತಾರೆಂಬ ಆಶೆಯಿದೆ.

ಎರಡನೆಯದಾಗಿ ಆಹಾರದ ಹತೋಟಿ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಅದರ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ಒಂದು ಕಾಲದಲ್ಲಿ ಆಹಾರದ ಹತೋಟಿಯು ಬಹಳ ಅವಶ್ಯಕವಾಗಿತ್ತು. ಆದರೆ ಯಾವ ಮನುಷ್ಯನೇ ಆಗಲಿ ಕೊಡುವ ಪಡಿತರದಲ್ಲಿ ಜೀವನ ಮಾಡುತ್ತಿದ್ದನೇ ಎಂದು ಮಹಾತ್ಮ ಗಾಂಧಿಯವರೇ ಕೇಳಿದ್ದಾರೆ. ರೇಷನಿಂದಲೇ ಹೊಟ್ಟೆ ತುಂಬುತ್ತಿರಲಿಲ್ಲವೆಂಬುದನ್ನು ಅವರು ವ್ಯಕ್ತಪಡಿಸಿದ್ದಾರೆ. ಆದರಿಂದ ಜನರ ನೈತಿಕ ಮಟ್ಟ ಬಹಳ ಇಳಿದುಹೋಗಿದೆ. ನಿಜವಾಗಿಯೂ ಕೂಡ ಆಹಾರದ ಹತೋಟಿಯಿಂದ ರೈತರು ಮತ್ತು ಇತರ ಜನರು ಸುಳ್ಳು ಹೇಳುವುದು, ಕಾಳಸಂತೆ ಮಾಡುವುದು ಮುಂತಾದ್ದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಾಗಾಯಿತೇ ವಿನಾ ಇನ್ನೇನೂ ಪ್ರಯೋಜನವಾಗಲಿಲ್ಲ. ಸರ್ಕಾರದವರು ಒಂದು ದೊಡ್ಡ ಮನೋಭಾವನೆಯಿಂದ ಈಗಾಗಲೇ ಹತೋಟಿಯನ್ನು ಅನೇಕಕಡೆ ತೆಗೆದಿದ್ದಾರೆ. ಹಾಗೆ ಮಾಡದಿದ್ದರೆ ಹಳ್ಳಿಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ಸ್ಟ್ಯಾಚ್ಯೂಟರಿ ಪ್ರದೇಶದಲ್ಲಿ ಸಿಕ್ಕಿದಷ್ಟು ಸಲೀಸಾಗಿ ಜಮೀನಿಲ್ಲದಿರುವವರಿಗೆ ಮತ್ತು ಕೊಳ್ಳಬೇಕಾದವರಿಗೆ ರೇಷನ್ ಖಂಡಿತ ಸಿಕ್ಕುತ್ತಿರಲಿಲ್ಲ. ವಾರಕ್ಕೆ ಅಥವಾ 15 ದಿವಸಗಳಿಗೆ ನಾಲ್ಕಾಣೆಯಿಂದ ಒಂದು ರೂಪಾಯಿನವರೆಗೆ ರೇಷನ್ ಕೊಟ್ಟಿರುವುದನ್ನು ನೋಡಿದ್ದೇನೆ ಅದಕ್ಕೆ ರಿಕಾರ್ಡು ಕೂಡಾ ಇದೆ. ಈಗ ಹಳ್ಳಿಗಳಲ್ಲಿ ರೇಷನ್ ತೆಗೆದಿರುವುದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗುವುದಕ್ಕೂ, ಸಾಲ ಕೊಡುವುದಕ್ಕೂ, ಕೊಂಡುಕೊಳ್ಳುವುದಕ್ಕೂ ಅವಕಾಶ ದೊರೆತು ಅನುಕೂಲವಾಗಿದೆ. ಈಗಿನ ಸಂದರ್ಭದಲ್ಲಿ ಸ್ಟ್ಯಾಚ್ಯೂಟರಿ ಪ್ರದೇಶವಾದ ನಾಲ್ಕೈದು ಸಿಟಿಗಳಲ್ಲಿ ಕೂಲಿಕಾರರು ಮತ್ತು ವ್ಯವಸಾಯ ಮಾಡದೆ ಜೀವಿಸುವವರು ಹೆಚ್ಚು ಮಂದಿ ಇರುವರು. ಆದರೆ ಬೆಂಗಳೂರು ಮತ್ತು ಕೋಲಾರದ ಚಿನ್ನದಗಣಿ ಪ್ರದೇಶಗಳಲ್ಲಿ 5-6 ತಿಂಗಳುಗಳವರೆಗೆ ಹತೋಟಿ ಮುಂದುವರೆಸಿ ಪರೀಕ್ಷೆ ಮಾಡಿ ನೋಡಬಹುದು; ಬಾಕಿ ಮೈಸೂರು ಸಿಟಿ, ದಾವಣಗೆರೆ ಮತ್ತು ಇತರ ಕಡೆಗಳಲ್ಲಿ ಸಂಪೂರ್ಣವಾಗಿ ಹತೋಟಿಯನ್ನು ವಜಾಮಾಡುವುದು ಬಹಳ ಸೂಕ್ತ. ಬೆಂಗಳೂರು ಮತ್ತು ಚಿನ್ನದ ಗಣಿ ಪ್ರದೇಶಗಳಲ್ಲಿ ಸಂಪೂರ್ಣ ಹತೋಟಿ ಇದ್ದಾಗ ಕೂಡ ಹಳ್ಳಿಗಳಿಂದ ದವಸ ಕೊಂಡು ತರುತ್ತಿದ್ದುದನ್ನು ನಾನು ನೋಡಿದ್ದೇನೆ. ಮುಂದೆ ಒಂದು ವೇಳೆ ಈ ಎರಡು ಸಿಟಿಗಳಲ್ಲಿ ಮಾತ್ರ ರೇಷನ್ ಇಟ್ಟರೆ ಎರಡು ಸೇರು ಹೊರಗಿನಿಂದ ತರಲು ಕೊಟ್ಟಿರುವ ಅವಕಾಶವನ್ನು ಹೆಚ್ಚಿಸಿ 5 ಅಥವಾ 10 ಸೇರು ತರುವುದಕ್ಕೆ ಅವಕಾಶ ಮಾಡಿದರೆ ಜನರಿಗೆ ಯಾವ ವಿಧದಲ್ಲೂ ತೊಂದರೆಯಾಗಲಾರದು. ಆಹಾರದ ಹತೋಟಿಯೂ ಯಶಸ್ವಿಯಾಗುತ್ತದೆ.

ಮೂರನೆಯದಾಗಿ ವಿದ್ಯಾಭ್ಯಾಸದ ವಿಷಯದಲ್ಲಿ ಸುಧಾರಣೆಗಳನ್ನು ಸೂಚಿಸಿದ್ದಾರೆ. ಅದು ಬಹಳ ಮುಖ್ಯ ವಿಚಾರ. ಒಂದಾನೊಂದು ಕಾಲದಲ್ಲಿ ಈಗಿರುವಂತೆ ವಿದ್ಯಾಭ್ಯಾಸ ಅತ್ಯಾವಶ್ಯಕವಾಗಿ ಬೇಕಾಗಿತ್ತು. ಈಗ ನಿಜವಾಗಿಯೂ ಪ್ರಜಾಪ್ರಭುತ್ವವಿರುವುದರ ದೆಸೆಯಿಂದಲೂ, ನಮ್ಮ ಹಕ್ಕುಬಾಧ್ಯತೆಗಳನ್ನು ನಾವು ತಿಳಿದು ಅದಕ್ಕಾಗಿ ಹೋರಾಡುವ ಚೈತನ್ಯವಿರುವುದರಿಂದಲೂ ಈಗಿನ ಕಾಲಕ್ಕನುಗುಣವಾಗಿ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಬದಲಾಯಿಸಿಕೊಳ್ಳದೇ ಹೋದರೆ ಅದರಿಂದ ಅನಾಹುತವಾಗುತ್ತದೆಂದು ಖಂಡಿತ ಹೇಳಬಲ್ಲೆ. ಏಕೆಂದರೆ ಇದುವರೆಗೆ ಕೊಟ್ಟಿರುವ ವಿದ್ಯಾಭ್ಯಾಸದಿಂದ ಮುಖ್ಯವಾಗಿ ಗುಮಾಸ್ತರು ಅಥವಾ ಉಪಾಧ್ಯಾಯರಾಗುವುದಕ್ಕೆ ಅನುಕೂಲವಾಗಿದೆಯೇ ಹೊರತು ಆಶಾದಾಯಕವಾಗಿ ಯಾವ ರೀತಿಯಲ್ಲೂ ಜೀವನ

(ಶ್ರೀ ಎಂ. ಚಿಕ್ಕಲಿಂಗಯ್ಯನವರು.)

ಮಾಡುವುದಕ್ಕೆ ಅವಕಾಶವಾಗಿಲ್ಲ. ದೇಶದ ಉನ್ನತಿಗಾಗಿ ಏನಾದರೂ ಕೆಲಸ ಮಾಡುವುದಕ್ಕೆ ಅವಕಾಶ ಇದುವರೆಗೆ ಇರಲಿಲ್ಲ. ಈಗ ಅನೇಕ ರೀತಿಯಲ್ಲಿ ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆ ಯಾಗುತ್ತಿದೆ. ಹಿಂದೆ ಒಂದೇ ಜನಾಂಗವು ವಿದ್ಯಾಭ್ಯಾಸದಲ್ಲಿ ಮುಂದುವರೆಯಲು ಅವಕಾಶ ವಿತ್ತೆಂದು ಕಾಣುತ್ತದೆ. ಸರ್ಕಾರ ಕೊಟ್ಟ ಉತ್ತೇಜನದಿಂದ ಎಲ್ಲಾ ಜನಾಂಗದಲ್ಲಿಯೂ ವಿದ್ಯಾವಂತರಾಗಬೇಕೆಂಬ ಆಕಾಂಕ್ಷೆ ಉಂಟಾದ ವಿದ್ಯಾವಂತರು ಜಾಸ್ತಿಯಾಗುತ್ತಿದ್ದಾರೆ. ಆದರೆ ಸ್ಕೂಲು, ಕಾಲೇಜು ಮತ್ತು ಟೆಕ್ನಿಕಲ್ ಸ್ಕೂಲು ಗಳಲ್ಲಿ ಸೀಟು ಸಿಕ್ಕುವುದು ಬಹಳ ಕಷ್ಟವಾಗಿದೆ. ಇದನ್ನು ಯಾವ ರೀತಿ ಇತರ ದೇಶದವರು ಸರಿ ಪಡಿಸಿದ್ದಾರೆ, ನಮ್ಮ ದೇಶದಲ್ಲಿ ಸರಿಪಡಿಸುವ ವಿಧಾನ ಹೇಗೆ ಎಂಬುದನ್ನು ನೋಡಬೇಕು. ಒಬ್ಬನು ಪಿ.ಸಿ.ಎಂ. ತೆಗೆದುಕೊಂಡರೆ ಪ್ರತಿಯೊ ಬ್ಬರೂ ಅದೇ ತೆಗೆದುಕೊಳ್ಳಬೇಕು, ಒಬ್ಬ ಮೆಡಿಕಲ್ ಲೈನಿಗೆ ಹೋಗಬೇಕೆಂದರೆ ಪ್ರತಿ ಯೊಬ್ಬರೂ ಅದಕ್ಕೇ ಹೋಗಬೇಕು ಎನ್ನುವ ಭಾವನೆ ಈಗ ಅನೇಕರಲ್ಲಿ ಬೆಳೆದುಬಂದಿದೆ.

ಇನ್ನೊಂದು ಬಹಳ ವಿಷಾದಕರವಾದ ಸಂಗತಿ ಯೇನೆಂದರೆ ನಮ್ಮ ವಿದ್ಯಾಭ್ಯಾಸ ಪದ್ಧತಿ ಯಿಂದ ಹುಡುಗರಿಗೆ ಈಗಿನ ಕಾಲಕ್ಕೆ ತಕ್ಕಹಾಗೆ ಪ್ರೋತ್ಸಾಹವಿಲ್ಲ. ಕಾಲೇಜುಗಳಲ್ಲಿ ಅಥವಾ ಸ್ಕೂಲುಗಳಲ್ಲಿ ಹುಡುಗರಿಗೆ ನಾವು ವ್ಯಾಸಂಗ ಮಾಡುತ್ತಿದ್ದಾಗ ಇದ್ದಂಥ ಆಸಕ್ತಿ ಈಗ ಇಲ್ಲ. ಹುಡುಗರು ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡುತ್ತಿಲ್ಲ. ಪರೀಕ್ಷೆ 2-3 ತಿಂಗಳುಗಳಿಗೆ ಆಗುತ್ತದೆ ಎನ್ನುವಾಗ ಪ್ರಶ್ನೆಪತ್ರಿಕೆಗಳನ್ನು ಹುಡುಕುವುದಕ್ಕೆ ಪ್ರಯತ್ನ ಪಡುತ್ತಾರೆ. ಆಮೇಲೆ ಪರೀಕ್ಷೆ ಮುಗಿದ ತರುವಾಯ ಎಕ್ಸಾ ಮಿನರ್ಸ್ ಯಾರು, ಹೇಗೆ ತೇರ್ಗಡೆ ಹೊಂದ ಬಹುದು ಎಂದು ಹುಡುಕುತ್ತಿರುತ್ತಾರೆ. ನಾಳೆ ಮೆಡಿಕಲ್ ಕಾಲೇಜಿಗೆ ಅಥವಾ ಬಿ.ಇ.ಗೆ ಹೋಗ ಬೇಕಾದರೆ ರ್‍ಯಾಂಕ್ ಪಡೆಯುವುದಕ್ಕೆ ಏನು ಮಾಡಬೇಕು ಎಂದು ಕಳ್ಳದಾರಿ ಹುಡುಕುವು ದಕ್ಕೆ ಈಗಿನ ವಿದ್ಯಾಭ್ಯಾಸ ಅವಕಾಶ ಕೊಟ್ಟ ಹಾಗಾಗಿದೆ. ಆದ್ದರಿಂದ ಇದರ ಸುಧಾರಣೆ ಯನ್ನು ಕಾಲಕ್ಕೆ ತಕ್ಕಂತೆ ದೇಶಕ್ಕನುಗುಣವಾಗಿ ಮಾಡುವುದು ಆವಶ್ಯಕ. ಹಾಗೆ ಮಾಡುವಾಗ ಪಾಶ್ಚಾತ್ಯ ದೇಶದವರು ಮತ್ತು ಇತರ ದೇಶದ ವರು ಸುಧಾರಣೆ ಮಾಡಿರುವ ಹಾಗೆ ಮಾಡ ಬೇಕು. ಈಗಾಗಲೇ ಡಾ|| ರೆಡ್ಡಿಯವರು ಮತ್ತು ಡಾ|| ರಾಧಾಕೃಷ್ಣರವರು ಸುಧಾರಣೆ ಮಾಡಿ ದರು. ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ಆಗಬೇ ಕಾದ ಸುಧಾರಣೆ ವಿಚಾರವನ್ನೂ ವಿದ್ಯಾಮಂತ್ರಿ ಗಳು ಹೇಳಿದ್ದಾರೆ. ಇದನ್ನೆಲ್ಲಾ ಕ್ರೋಢೀಕರಿಸಿ ಈಗಿನ ಕಾಲಕ್ಕನುಗುಣವಾಗಿ ಮಾರ್ಪಡಿಸಿ ಹುಡುಗರು ಸ್ಕೂಲು ಬಿಟ್ಟ ತಕ್ಷಣ ದೇಶಕ್ಕೆ ಸಹಾಯ ಮಾಡುವಂತೆಯೂ, ತಮ್ಮ ಜೀವನ ಮಾಡಿಕೊಳ್ಳುವುದಕ್ಕೆ ತಕ್ಕ ದಾರಿ ಹುಡುಕಿ ಕೊಳ್ಳುವಂತೆಯೂ ಅವಕಾಶ ಮಾಡಬೇಕೇ ವಿನಾ ತೇರ್ಗಡೆ ಹೊಂದಿ ಸ್ಕೂಲನ್ನು ಬಿಟ್ಟ ತಕ್ಷಣ ಸರ್ಕಾರಿ ಕೆಲಸ ಬೇಕೆಂದು ಕೇಳುವ ಮನೋ ಭಾವವುಂಟಾಗುವಂತೆ ಇರಬಾರದು. ಸಂಪೂರ್ಣ ವಾಗಿ ಆ ಮನೋಭಾವವನ್ನು ತಪ್ಪಿಸುವುದು ನಿಜವಾಗಿಯೂ ಮುಖ್ಯವಾದ ಕರ್ತವ್ಯ. ಈಗ ಕೆಲಸ ಸಿಕ್ಕದೆ ಪೇಚಾಡುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಹರಿಜನರಲ್ಲೂ ನೂರಾರು ಜನರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡತಕ್ಕದ್ದೇನೆಂ ದರೆ ಇಂಥಾದ್ದಕ್ಕೆ ಅವಕಾಶ ಕೊಡದೆ ಒಂದು ದೇಶದ ಆಗುಹೋಗುಗಳನ್ನು ವಿಚಾರಮಾಡಿ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸಕ್ರಮವನ್ನು ಸುಧಾರಣೆ ಮಾಡುವುದು ಮುಖ್ಯವಾದುದು.

ಕೊನೆಯದಾಗಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಹರಿಜನರ ವಿಚಾರವಾಗಿ ಒಂದು ಪದ ಕೂಡ ಹೇಳಿಲ್ಲ. ಅವರಿಗೆ ವೈಯಕ್ತಿಕ ವಾಗಿ ನಾವು ರಾಜರು ಎಂಬುದರಿಂದ ಸಂಪೂರ್ಣ ಭಕ್ತಿ ಇಟ್ಟುಕೊಂಡಿದ್ದೇವೆ. ಅದು ಬೇರೆ ಪ್ರಶ್ನೆ. ಹರಿಜನರ ಅಭಿವೃದ್ಧಿ ವಿಚಾರದಲ್ಲಿ ಹಿಂದಿನ ಎಲ್ಲಾ ಅಸೆಂಬ್ಲಿಗಳಲ್ಲೂ ಕೂಡ ಆಶಾದಾಯಕ ವಾದ ಸಲಹೆಗಳನ್ನು ಕೊಡುತ್ತಾ ಇದ್ದರು. ಆದರೆ ಈ ಭಾಷಣದಲ್ಲಿ ಅದು ಇಲ್ಲ. ಮುಂದೆ ಅವರ ಅಭಿವೃದ್ಧಿಗೆ ಮಾಡಬೇಕಾದ ಕಾರ್ಯಗ

ಳೇನು ಎಂಬುದು ಒಂದು ದೊಡ್ಡ ಸಮಸ್ಯೆ. ಹರಿಜನರ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಬಗೆಹರಿಸದೇ ಇದ್ದ ಪಕ್ಷದಲ್ಲಿ ನಿಜವಾಗಿಯೂ ಭರತಖಂಡಕ್ಕೆ ಕಲ್ಯಾಣವಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬಲ್ಲೆ. ಮುಖ್ಯ ವಾಗಿ 1/5 ಭಾಗ ಇರತಕ್ಕ ಈ ಜನಾಂಗದ ಕುಂದುಕೊರತೆಗಳನ್ನು ಸರಿಪಡಿಸದೇ ಇದ್ದರೆ ನಿಜವಾಗಿಯೂ ಅವರಿಗೆ 'ನ್ಯಾಯ ಒದಗಿಸಿದಂ ತಾಗುವುದಿಲ್ಲ. ಅವರ ವಿದ್ಯಾಭ್ಯಾಸಕ್ಕೆ ಯಾವ ರೀತಿ ಅನುಕೂಲ ಮಾಡುತ್ತೀರಿ, ಅವರಿಗೆ ಅಧಿ ಕಾರಗಳನ್ನು ಯಾವ ರೀತಿ ಕೊಡುತ್ತೀರಿ ಎಂಬ ಅನೇಕ ವಿಚಾರಗಳಿವೆ. ಹರಿಜನರು ಬಿ. ಎ. ಪಾಸ್ ಮಾಡುತ್ತಾರೆಯೇ, ಅಧಿಕಾರಕ್ಕೆ ಬರು ತ್ತಾರೆಯೇ, ದಕ್ಷತೆಯಿಂದ ಕೆಲಸ ಮಾಡುತ್ತಾ ರೆಯೇ ಎಂಬ ಮಾತು ಕೇಳಿ ಬರುತ್ತಾ ಇತ್ತು. ಅದನ್ನು ಹೋಗಲಾಡಿಸತಕ್ಕ ಪರಿಸ್ಥಿತಿ ಬಂದು ಬಹಳ ದಕ್ಷತೆಯಿಂದ ಕೆಲಸ ಮಾಡಬಲ್ಲರು ಎಂಬುದು ಮನಗಂಡಿದೆ. ಅದೇರೀತಿ ಹರಿಜನ ರಿಗೆ ಜಮೀನಿನ ವಿಚಾರದಲ್ಲೂ ಕೂಡ ಒಂದು ನಿರ್ದಿಷ್ಟವಾದ ನೀತಿಯನ್ನು ಗೊತ್ತುಮಾಡಿ ಪ್ರೋತ್ಸಾಹ ಕೊಡದಿದ್ದರೆ ದೇಶಕ್ಕೆ ಕಲ್ಯಾಣ ವಾಗುವುದಿಲ್ಲ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯನವರು (ಪಾವ ಗಡ—ಅನುಸೂಚಿತ ಜಾತಿಗಳು).—ಮೈಸೂರು ಸಂಸ್ಥಾನದ ರಾಜಪ್ರಮುಖರು, ನಿನ್ನೆ ದಿನ ಪುರಭವನದಲ್ಲಿ ಕೊಟ್ಟರತಕ್ಕ ಭಾಷಣದ ಸಾರ ವನ್ನು ನಾನು ಆದಿಯಿಂದ ಅಂತ್ಯದವರೆಗೂ ಕೇಳಿಕೊಂಡಿದ್ದೇನೆ. ಅವರು ತಮ್ಮ ಪುಟ್ಟ ಭಾಷಣದಲ್ಲಿ ಎಲ್ಲವನ್ನೂ ಅಚ್ಚುಮೆಚ್ಚಾಗಿ ಹೇಳಿದ್ದಾರೆ. ವಯಸ್ಕರ ಮತದಾನ ಪದ್ಧತಿ ಬಂದು ಏನು ಅಲ್ಲೋಲ ಕಲ್ಲೋಲವಾಗುತ್ತ ದೆಯೋ ಎಂಬ ಶಂಕೆ ಇತ್ತು. ರಷ್ಯಾ, ಅಮೆ ರಿಕಾ, ಹಾಲೆಂಡ್, ಪೋಲೆಂಡ್, ಬೆಲ್ಜಿಯಂ ಈ ದೇಶಗಳಲ್ಲೆಲ್ಲಾ 100ಕ್ಕೆ 99 ಜನ ವಿದ್ಯಾ ವಂತರಾದ ವಯಸ್ಕರು ಇರುತ್ತಾರೆ. ಅವರಿಗೆ ಈ ವಯಸ್ಕರ ಓಟಿನ ಪದ್ಧತಿ ಅನುಕೂಲವಾಗುತ್ತ ದೆಯೇ ಹೊರತು ನಮ್ಮ ದೇಶಕ್ಕೆ ಸದ್ಯಕ್ಕೆ ಅನಾನುಕೂಲವಾಗುತ್ತದೆ ಎಂಬ ಮನೋ ಭಾವವಿತ್ತು. ಆದರೆ ಈಗ ಆ ಶಂಕೆ ಪರಿಹಾರವಾಗಿದೆ. ದೇಶದಲ್ಲಿ ಪ್ರಜಾಸರ್ಕಾರ ಬಂದಕೂಡಲೇ ಈಗ ಅಧಿಕಾರ ವಹಿಸಿರುವ ಮಂತ್ರಿಗಳು ದಕ್ಷತೆಯಿಂದಲೂ, ಧೈರ್ಯದಿಂ ದಲೂ ವರ್ತಿಸಿ ಆಹಾರದ ಪರಿಸ್ಥಿತಿಯನ್ನು ಒಂದು ವಿಧದಲ್ಲಿ ಬಗೆಹರಿಸಿದ್ದಾರೆ. ಎಲ್ಲೆಲ್ಲೂ ಅಕ್ಕಿ ರೂಪಾಯಿಗೆ 1½ ಸೇರು ಸಿಕ್ಕುತ್ತಿದೆ. ಅನೇಕರು ತೆಗೆದುಕೊಳ್ಳುತ್ತಿದ್ದಾರೆ. ಆಹಾರದ ಅಭಾವ ಕಡಿಮೆಯಾಗಿದೆ. ಅಕ್ಕಿ ರೂಪಾಯಿಗೆ ಎರಡು ಸೇರು ಕೂಡ ಸಿಕ್ಕುತ್ತಾ ಇದೆ. ಹಿಂದೆ ಏನು ಪರಿಸ್ಥಿತಿ ಇತ್ತೋ? ಅದನ್ನು ಈಗಿನ ಪರಿಸ್ಥಿತಿಯಲ್ಲಿ ಎಷ್ಟೇ ಕಷ್ಟವಿದ್ದರೂ ಕೂಡ ಧೈರ್ಯವಾಗಿ ದಕ್ಷತೆಯಿಂದ ಪರಿಹರಿಸುತ್ತೇವೆ ಎಂದು ಹೇಳಿ ಕಾರ್ಯಕ್ರಮ ತೆಗೆದುಕೊಂಡದ ರಿಂದ ಎಲ್ಲೆಲ್ಲೂ ಅಕ್ಕಿ ರಾಗಿ, ಜೋಳ ಸಿಕ್ಕುತ್ತಾ ಇದೆ. ಮಹಾಸ್ವಾಮಿಯವರು ಹೇಳಿರುವ ರೀತಿ ಯಲ್ಲಿ ಚಿತ್ರದುರ್ಗ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಆಹಾರದ ಅಭಾವ ಜಾಸ್ತಿಯಾಗಿದೆ. ದನಗಳಿಗೆ ತಿನ್ನಲಿಕ್ಕೆ ಹುಲ್ಲು, ಕುಡಿಯಲಿಕ್ಕೆ ನೀರು ಇಲ್ಲ ಎಂಬುದನ್ನು ಮನಗಂಡು ಈ ಮೂರು ಜಿಲ್ಲೆಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರದವರು ಸಹಾಯ ಮಾಡಬೇಕೆಂದು ಹೇಳಿ ರುವ ಅಂಶ ಕೂಡ ಅಡಕವಾಗಿದೆ. ಕೈಗಾರಿಕೆಯ ವಿಷಯದಲ್ಲಿ ಬಹಳ ಚನ್ನಾಗಿ ಹೇಳಿದ್ದಾರೆ. ದೇಶ ಮುಂದುವರಿಯಬೇಕಾದರೆ ಕೈಗಾರಿಕೆಗಳು ಮುಂದುವರಿಯಬೇಕು. ಕಾಲೇಜುಗಳಿಗೆ ಹೋಗಿ ಪಾಸ್ ಮಾಡಿರುವವರೆಲ್ಲರಿಗೂ ಸರ್ಕಾರದವರು ನೌಕರಿ ಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಆರ್ಥಿಕ ಮುಗ್ಗಟ್ಟು ಜಾಸ್ತಿಯಾಗಿರುವುದರಿಂದ ಬಹಳ ಜಾಗರೂಕತೆಯಿಂದ ಇರಬೇಕಾಗಿದೆ. ನಮ್ಮ ಮಿತ್ರರು 'ಮಹಾಸ್ವಾಮಿಯವರು ಅವರ ಭಾಷಣದಲ್ಲಿ ಹರಿಜನರ ವಿಷಯವನ್ನು ಪ್ರಸ್ತಾ ಪಿಸಿಲ್ಲ' ಎಂದು ಹೇಳಿದರು. ಇದು ಇಂಡಿಯಾ ದೇಶಕ್ಕೇ ಅನ್ವಯಿಸಿದ ಪ್ರಶ್ನೆ. ಇವರ ಕುಂದು ಕೊರತೆಗಳನ್ನು ಯಾರೂ ನಿವಾರಿಸಿರಲಿಲ್ಲ. ಏಕೆ ಕೈ ಹಾಕಿರಲಿಲ್ಲವೋ ಅಂತೂ ಹಾಗೇ ಬಿಟ್ಟು ಬಿಟ್ಟಿದ್ದರು. ಮಹಾತ್ಮಾ ಗಾಂಧಿಯವರು ಈ

(ಶ್ರೀ ಸಿ. ಟಿ. ಹನುಮಂತಯ್ಯನವರು.)
ಕಾರ್ಯವನ್ನು ಕೈಕೊಂಡು ಹರಿಜನರಿಗೆ ಮಹತ್ತರವಾದ ಉಪಕಾರ ಮಾಡಿದರು. ಇಂಡಿಯಾ ದೇಶದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಮೇಲೆ ಹರಿಜನರ ಕುಂದುಕೊರತೆಗಳನ್ನು ನಿವಾರಣೆ ಮಾಡಬೇಕೆಂದು ಹೇಳಿದ ತಕ್ಷಣ, ನಮಗೆ ಏನು ಸೌಲಭ್ಯ ಬೇಕು, ಏನೇನು ಕಷ್ಟಗಳಿವೆ ಎಂಬುದನ್ನು ನೋಡಿಕೊಂಡು ಸೂಕ್ತವಾದ ಸೌಕರ್ಯಗಳನ್ನು ಮಾಡಿಕೊಡುತ್ತಾ ಇದ್ದಾರೆ. ನಮ್ಮ ಜನಾಂಗಕ್ಕೆ ಸೇರಿದವರೊಬ್ಬರು ಮಂತ್ರಿಗಳಾಗಿದ್ದಾರೆ. ಅವರಿಗೇ ಎಲ್ಲಾ ಜವಾಬ್ದಾರಿ ಕೊಟ್ಟಿದ್ದೇವೆ. ಆ ವಿಷಯ ನಾವೇಕೆ ಪ್ರಸ್ತಾಪಿಸಲಿಕ್ಕೆ ಹೋಗಬೇಕು ಎಂದು ಮಹಾಸ್ವಾಮಿಯವರು ಏನೂ ಹೇಳಿಲ್ಲ. ಮಂತ್ರಿಮಂಡಲದಲ್ಲಿ ಹರಿಜನರಿಗೆ ಒಂದು ಸ್ಥಾನ ಮೀಸಲಾಗಿಟ್ಟಿದ್ದಾರೆ. ಈಗಾಗಲೇ ಗೊತ್ತಾಗಿರುವ ಹಾಗೆ ಒಂದು ಪಾಲಿಸಿ ಸಮಿತಿಯನ್ನು ಗೊತ್ತುಮಾಡುತ್ತಾರೆ. ಆ ಸಮಿತಿಯಲ್ಲಿ ನಮ್ಮ ಜನಾಂಗಕ್ಕೆ ಸೇರಿದ ಕೆಲವು ಸದಸ್ಯರು ಇರುತ್ತಾರೆ. ಅಲ್ಲಿ ನಮ್ಮ ಕುಂದುಕೊರತೆಗಳನ್ನು ನಿವಾರಣೆ ಮಾಡಿಕೊಳ್ಳಲು ಅವಕಾಶವಿದೆ. ಮಾನ್ಯ ಸದಸ್ಯರು ಚುನಾವಣೆ ಕಾಲದಲ್ಲಿ ಹರಿಜನರನ್ನು ಹೆದರಿಸಿ ಓಟು ತೆಗೆದುಕೊಂಡರು ಎಂದು ಹೇಳಿದರು. ಆರೀತಿ ದೇಶದಲ್ಲಿ ನಡೆದಿಲ್ಲ. ನಾನೂ ಸಹ ಕಾಂಗ್ರೆಸ್ ಉಮೇದುವಾರನಾಗಿ ಬಂದಿದ್ದೇನೆ. ಆ ರೀತಿ ಏನೂ ನಡೆದಿಲ್ಲ ಎಂದು ಘಂಟಾಘೋಷವಾಗಿ ಹೇಳಬಲ್ಲೆ. ಮೈಸೂರು ದೇಶದಲ್ಲಿ ನಮ್ಮ ಕುಂದುಕೊರತೆಗಳನ್ನು ಹೋಗಲಾಡಿಸಲು ಹಿಂದಿನ ಸರ್ಕಾರ 1 ಕೋಟಿ 73 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಾ ಇದ್ದರು. ಈಗ 3½ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಹಳ್ಳಿಗಳಲ್ಲಿ ಸ್ಕೂಲುಗಳನ್ನು ಕೊಡುತ್ತಾರೆ. ವಯಸ್ಕರು ವಿದ್ಯಾವಂತರಾಗಬೇಕು, ಬುದ್ಧಿವಂತರಾಗಬೇಕು, ಮುಂದುವರಿಯಬೇಕು ಎಂಬುದಕ್ಕೆ ಎಷ್ಟುಬೇಕೋ ಅದಕ್ಕಿಂತ ಹೆಚ್ಚಿನ ಗಮನ ಕೊಟ್ಟಿದ್ದಾರೆ. ಇದು ಶ್ಲಾಘನೀಯವಾದ ವಿಷಯ, ಸ್ತೋತ್ರಾರ್ಹವಾಗಿದೆ. ದೇಶದಲ್ಲಿ ಅನೇಕಕಡೆ ದನಗಳಿಗೆ ಮೇವು ಸಿಕ್ಕದೆ ತೊಂದರೆಯಾಗಿ ಸರ್ಕಾರದವರು ಲಾರಿಗಳಲ್ಲಿ, ರೈಲಿನಲ್ಲಿ ಹುಲ್ಲು ಒದಗಿಸುತ್ತಾ ಇದ್ದಾರೆ. ಅದೆಲ್ಲಾ ನೋಡಿದರೆ ಮಹಾಸ್ವಾಮಿಯವರು ದಯಪಾಲಿಸಿದ ತಕ್ಕ ಭಾಷಣದಿಂದ ಎಲ್ಲರಿಗೂ ಬಹಳ ಸಂತೋಷವಾಗಿದೆ. ಇನ್ನು ಮುಂದೆಯೂ ಸಹ ಇದೇರೀತಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಾರೆ ಎಂದು ನಂಬಿ ಈ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now rise for the day and meet again at 8-30 A.M. tomorrow. The amendments will be taken up tomorrow.

The Assembly adjourned at Five of the Clock to meet again at Thirty Minutes past Eight of the Clock on Saturday, 21st June 1952.

WD 2802—GPB—500—8-7-1952